ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ಸೆಪ್ಟೆಂಬರ್ 14, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 123 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999



## 'ಕಲೆ' ಜನರ ನಡುವೆ ಅರಳಲಿ: ಡಾ.ಪ್ರಭಾ

### ಚಿತ್ರೋತ್ಸವಕ್ಕೆ ಚಾಲನೆ, ಗಾಜಿನ ಮನೆಯಲ್ಲಿ ಚಿತ್ರಕಲಾ ಪ್ರದರ್ಶನಕ್ಕೆ ಸಲಹೆ

ದಾವಣಗೆರೆ, ಸೆ.13- ಕಲಾ ಚಟುವಟಿಕೆಗಳು ನಾಲ್ಕು ಗೋಡೆಗಳ ಮಧ್ಯೆ ಸೀಮಿತವಾಗದೇ ಜನರು ನಡುವೆ ನಡೆಯುವಂತಾಗಬೇಕು ಎಂದು ಬಾಪೂಜಿ ಶಿಕ್ಷಣ ಸಂಸ್ಥೆಯ ಸದಸ್ಯರೂ, ಎಸ್.ಎಸ್. ಕೇರ್ ಟ್ರಸ್ಟ್‌ನ ಲೈಫ್ ಟ್ರಸ್ಟಿ ಶ್ರೀಮತಿ ಡಾ.ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ದಾವಣಗೆರೆ ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ಚಿತ್ರೋತ್ಸವ-2023 ಉದ್ಘಾಟಿಸಿ ಅವರು ಮಾತನಾಡಿದರು.

ಕಲಾತ್ಮಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಗಾಜಿನ ಮನೆ ನಿರ್ಮಿಸಿದ್ದರು. ಮುಂದಿನ ದಿನಗಳಲ್ಲಿ ದಸರಾ ಹಬ್ಬಗಳಲ್ಲಿ ಗಾಜಿನ ಮನೆಯಲ್ಲಿ ಚಿತ್ರಕಲಾ ಪ್ರದರ್ಶನಗಳನ್ನು ಹಮ್ಮಿಕೊಳ್ಳುವಂತೆ ಸಲಹೆ ನೀಡಿದರು.

ಸಾಣೇಹಳ್ಳಿಯಲ್ಲಿ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಅವರು ನಾಟಕ ಶಿಬಿರಗಳನ್ನು ಆಯೋಜಿಸುವಂತೆ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಮಕ್ಕಳಿಗೆ ಚಿತ್ರಕಲಾ ತರಬೇತಿ ಶಿಬಿರ ಹಮ್ಮಿಕೊಳ್ಳುವಂತೆ ಹೇಳಿದ ಪ್ರಭಾ ಮಲ್ಲಿಕಾರ್ಜುನ್, ನನ್ನ ಮಗನಿಗೂ ಚಿತ್ರಕಲೆಯಲ್ಲಿ ಆಸಕ್ತಿ ಇತ್ತು. ಅವನು ಹತ್ತು ವರ್ಷದವನಿದ್ದಾಗ ಬೇಸಿಗೆ ಶಿಬಿರಕ್ಕೆ ಕಳುಹಿಸಿದ್ದೆ (2ನೇ ಪುಟಕ್ಕೆ)

### ನಿಮಗಾಗಿ ಸಮಯ ಮೀಸಲಿಡಿ

**ಇತ್ತೀಚಿನ ದಿನಗಳಲ್ಲಿ ಯುವ ಜನತೆಯಲ್ಲಿ ಕ್ಯಾನ್ಸರ್, ಬಿಪಿ, ಸಕ್ಕರೆ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ. ಈ ಹಿನ್ನೆಲೆಯಲ್ಲಿ ಆರೋಗ್ಯದ ಕಡೆ ಹೆಚ್ಚು ಗಮನ ಹರಿಸುವಂತೆ ಡಾ.ಪ್ರಭಾ ಮಲ್ಲಿಕಾರ್ಜುನ್ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು. ಐದು ವರ್ಷಗಳ ಹಿಂದೆ ಪ್ರತಿ ಲಕ್ಷ ಯುವಕರಲ್ಲಿ 100 ಜನರಲ್ಲಿ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿತ್ತು. ಈಗ ಅದರ ಪ್ರಮಾಣ 103ಕ್ಕೆ ಏರಿದೆ. ಉತ್ತಮ ಆರೋಗ್ಯಕ್ಕಾಗಿ ಉತ್ತಮ ಜೀವನ ಶೈಲಿ ರೂಢಿಸಿಕೊಳ್ಳುವ ಎಲ್ಲಾ ಅರಿವಿದ್ದರೂ ಆಚರಣೆಗೆ ತರುವಲ್ಲಿ ನಿರ್ಲಕ್ಷ್ಯ ವಹಿಸು ವುದರಿಂದ ರೋಗಗಳಿಗೆ ತುತ್ತಾಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನಿತ್ಯ ದೈಹಿಕ ಹಾಗೂ ಮಾನಸಿಕ ವ್ಯಾಯಾಮ, ಉತ್ತಮ ಆಹಾರ, ಶಿಸ್ತು ಬದ್ಧ ಜೀವನ ರೂಢಿಸಿಕೊಳ್ಳಿ, ನಿಮಗಾಗಿ ಸಮಯ ಮೀಸಲಿಡಿ ಎಂದು ಹೇಳಿದರು.**

# 195 ತಾಲ್ಲೂಕುಗಳು ಬರ ಪೀಡಿತ

ಬೆಂಗಳೂರು, ಸೆ. 13- ಮುಂಗಾರು ಮಳೆಯ ವೈಫಲ್ಯದಿಂದ ರಾಜ್ಯದ ಬಹುತೇಕ ಭಾಗ ಬರಪೀಡಿತ ವೆಂದು ರಾಜ್ಯ ಸರ್ಕಾರ ಘೋಷಣೆ ಮಾಡಿದೆ.

ಕುಡಿಯುವ ನೀರು ಹಾಗೂ ಇತರೆ ತುರ್ತು ಪರಿ ಹಾರಕ್ಕಾಗಿ 909 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ ರುವ ಸರ್ಕಾರ, ನರೇಗಾ ಯೋಜನೆಯಡಿ ನೂರರಿಂದ 150 ಮಾನವ ದುಡಿಯುವ ದಿನಗಳಿಗೆ ಹೆಚ್ಚಿಸಲಾಗಿದೆ.

ಕಂದಾಯ ಸಚಿವ ಕೃಷ್ಣಭೈರೇಗೌಡ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ನೈಸರ್ಗಿಕ ವಿಕೋಪ ಕುರಿತ ಸಂಪುಟ ಉಪ ಸಮಿತಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಸಭೆಯ ನಂತ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಂದಾಯ ಹಾಗೂ ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ ಖರ್ಗೆ ಮಾತನಾಡಿ, ಮೊದಲ ಹಂತದಲ್ಲಿ ರಾಜ್ಯದ 195 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಣೆ ಮಾಡಿದ್ದೇವೆ ಎಂದರು.

ಇದರ ಬೆನ್ನಲ್ಲೇ ಸಮರೋಪಾದಿಯಲ್ಲಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಮುಂದಾಗಿರುವ ಸರ್ಕಾರ, ಹೆಚ್ಚಿನ ನೆರವು ಕೋರಲು ಮುಂದಿನ ಎಂಟು-ಹತ್ತು ದಿನಗಳಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲು ನಿರ್ಧರಿಸಿದ್ದೇವೆ ಎಂದು ಹೇಳಿದರು.

ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ನಿಯಮಗಳ ಅಡಿಯಲ್ಲಿ 161 ತಾಲ್ಲೂಕುಗಳು ಬರಪೀಡಿತವಾಗಿವೆ. ಆದರೆ, ಮಳೆ ಕೊರತೆಯಿಂದ ಇನ್ನೂ 34 ತಾಲ್ಲೂಕುಗಳು ಸಾಧಾರಣ ಬರಕ್ಕೆ ತುತ್ತಾಗಿದ್ದರೂ ಇವನ್ನೂ ಬರಪೀಡಿತ ತಾಲ್ಲೂಕಗಳ ಪಟ್ಟಿಗೆ ಸೇರ್ಪಡಿಸಿದ್ದೇವೆ. ಕೇಂದ್ರ ಸರ್ಕಾರ ಈ ಹೆಚ್ಚುವರಿ ತಾಲ್ಲೂಕುಗಳಿಗೆ ಪರಿಹಾರ ಕಲ್ಪಿಸುತ್ತದೆ ಎಂಬ ಭರವಸೆ ಇದೆ. ಇಲ್ಲದಿದ್ದರೆ, ನಾವೇ ಪರಿಹಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತೇವೆ.

ಇದಲ್ಲದೆ, ಇನ್ನೂ 40 ತಾಲ್ಲೂಕುಗಳಲ್ಲೂ ಮಳೆಯ ಕೊರತೆ ಇದ್ದು, ರೈತರ ಬೆಳೆ ವಿಫಲವಾಗಿದೆ. ಇಷ್ಟಾದರೂ ಉಪಗ್ರಹ ಸಮೀಕ್ಷೆಯಲ್ಲಿ ಹಸಿರಿನ ವಾತಾವರಣವಿದೆ ಎಂದು ಕೇಂದ್ರದ ವರದಿ ಬಂದಿದೆ. ಆದರೆ, ಇಲ್ಲಿ ಬೆಳೆದಿರುವ ಬೆಳೆ ರೈತರಿಗೆ ಫಸಲು ಕೊಡುವುದು ಅನುಮಾನ. ಇನ್ನೂ 8-10 ದಿನಗಳ ಕಾಲ ಕಾದು ನೋಡಿ ನಂತರ ಅಧಿಕಾರಿಗಳಿಂದ ಮಾಹಿತಿ ತರಿಸಿ ಈ ಹೆಚ್ಚುವರಿ ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸುವುದಾಗಿ ಹೇಳಿದರು.

ಈ ತಾಲ್ಲೂಕುಗಳಿಗೆ ಸೀಮಿತವಾಗಿ ನಾಲ್ಕು ಕೃಷಿ ಹಾಗೂ ತೋಟಗಾರಿಕೆ ವಿಶ್ವವಿದ್ಯಾಲಯಗಳಿಂದ ಅಧ್ಯಯನ ನಡೆಸಿ ಜಿಲ್ಲಾಧಿಕಾರಿಗಳು ಮಾಹಿತಿ ಪಡೆದುಕೊಳ್ಳುವಂತೆ ಸೂಚನೆ ನೀಡಿದ್ದೇವೆ.

ಜಿಲ್ಲಾಡಳಿತದಿಂದ ವರದಿ ಬಂದ ಕೂಡಲೇ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು. ಸದ್ಯಕ್ಕೆ ಕುಡಿಯುವ ನೀರಿಗೆ ಎಲ್ಲೂ ಅಭಾವವಿಲ್ಲ. ಆದರೂ ಜಿಲ್ಲಾಧಿಕಾರಿಗಳ ಬಳಿ 489 ಕೋಟಿ (3ನೇ ಪುಟಕ್ಕೆ)

## ಎಲೆಕ್ಟ್ರಿಕ್ ದ್ವಿಚಕ್ರ ಕಂಪನಿಗಳ ವಿರುದ್ಧ ಕ್ರಮಕ್ಕೆ ಪರಿಶೀಲನೆ

ನವದೆಹಲಿ, ಸೆ. 13 – ಎಫ್.ಎ.ಎಂ.ಇ. - 2 ನಿಯಮಗಳನ್ನು ಪಾಲಿಸದ ದ್ವಿಚಕ್ರ ಎಲೆಕ್ಟ್ರಿಕ್ ವಾಹನಗಳ ಉತ್ಪಾದಕರ ವಿರುದ್ಧ ಕಾನೂನು ಕ್ರಮಕ್ಕೆ ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ.

ಎಫ್.ಎ.ಎಂ.ಇ.-2 ನಿಯಮಗಳನ್ನು ಪಾಲಿಸದೇ ಉತ್ಪಾದನಾ ಉತ್ತೇಜನ ಪಡೆದ ಏಳು ಕಂಪನಿಗಳು 469 ಕೋಟಿ ರೂ. ಹಣ ವಾಪಸ್ ನೀಡಬೇಕು ಎಂದು ಕೇಂದ್ರ ಸರ್ಕಾರ ಕೇಳಿದೆ.

ಹೀರೋ ಎಲೆಕ್ಟ್ರಿಕ್, ಒಕಿನಾವಾ ಆಟೋಟೆಕ್, ಆಂಪೀರ್ ಇ.ವಿ., ರಿವೋಲ್ಟ್ ಮೋಟರ್ಸ್, ಬೆನ್ಲಿಂಗ್ ಇಂಡಿಯಾ, ಅಮೊ ಮೊಬಿಲಿಟಿ ಹಾಗೂ ಲೋಹಿಯಾ ಆಟೋಗಳು ಹಣ ಮರಳಿಸುವಂತೆ ನೋಟಿಸ್ ಕಳಿಸಲಾಗಿದೆ. ಈ ಪೈಕಿ ರಿವೋಲ್ಟ್ ಮೋಟರ್ಸ್ ಮಾತ್ರ ಹಣ ಮರಳಿಸುವುದಾಗಿ ತಿಳಿಸಿದೆ.

ಈ ಕಂಪನಿಗಳು ಹಣ ನೀಡಲು ವಿಧಿಸಲಾಗಿದ್ದ ಗಡುವು ಮುಗಿಯುತ್ತಾ ಬಂದಿದೆ. ಗಡುವು ಮುಗಿದ ನಂತರ ಕಾನೂನು ಕ್ರಮಕ್ಕೆ ಸರ್ಕಾರ ಪರಿಶೀಲಿಸಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಭಾರತದಲ್ಲಿ ಉತ್ಪಾದಿಸಲಾದ ಬಿಡಿ ಭಾಗಗಳನ್ನು ಬಳಸಿಕೊಳ್ಳುವ ಕಂಪನಿಗಳಿಗೆ ಮಾತ್ರ ಉತ್ತೇಜನ ನೀಡುವುದಾಗಿ ತಿಳಿಸಲಾಗಿತ್ತು. ಆದರೆ, 7 ಕಂಪನಿಗಳು ಆಮದು ಬಿಡಿ ಭಾಗಗಳನ್ನು ಬಳಸಿಕೊಂಡಿದ್ದು ತನಿಖೆಯಿಂದ ಪತ್ತೆಯಾಗಿತ್ತು.

## ಹಾಡಗಲೇ ಮನೆಗೆ ನುಗ್ಗಿ ದರೋಡೆ

**ಬಾಲಾಜಿ ಲೇ ಔಟ್‌ನಲ್ಲಿ ಮಧ್ಯಾಹ್ನ ನಡೆದ ಘಟನೆ,**

**ಮಹಿಳೆ ಮೇಲೆ ಹಲ್ಲೆ ಮಾಡಿ ಮನೆಯಲ್ಲಿದ್ದ 5 ಲಕ್ಷ ರೂ. ಕಿತ್ತುಕೊಂಡು ಪರಾರಿ**

ದಾವಣಗೆರೆ, ಸೆ.13- ನಗರದ ಕುಂದುವಾಡ ರಸ್ತೆಯಲ್ಲಿನ ಬಾಲಾಜಿ ಲೇ ಔಟ್ ಲೇಕ್ ವಿವ್ಯೂ ಬಡಾವಣೆಯೊಂದರ ಮನೆಯಲ್ಲಿ ಹಾಡು ಹಗಲೇ ದರೋಡೆ ನಡೆದಿದೆ.

ಶ್ರೀನಾಥ್ ಎಂಬುವವರ ಮನೆಯಲ್ಲಿ ಈ ಘಟನೆ ನಡೆದಿದ್ದು, ಮನೆಯ ಮುಂಭಾಗ ಒಂದೆರಡು ಬಾರಿ ಸಂಚರಿಸಿ, ಮನೆಯಲ್ಲಿ ಪುರುಷರು ಇಲ್ಲ ಎಂಬುದನ್ನು ಖಚಿತಪಡಿಸಿಕೊಂಡ ಕಳ್ಳ, ಶ್ರೀನಾಥ್ ಪತ್ನಿ ರಾಜೇಶ್ವರಿ ಮಧ್ಯಾಹ್ನ ಕಸ ಹಾಕಲು ಹೊರ ಬಂದಾಗ ಮನೆಯೊಳಗೆ ನುಗ್ಗಿ ಸ್ಟೋರ್ ರೂಂ ಒಳಗೆ ಅವಿತುಕೊಂಡಿದ್ದಾನೆ.

ರಾಜೇಶ್ವರಿ ಅವರಿಗೆ ಸಂದೇಹ ಬಂದು ನೋಡಿದಾಗ ಅವರ ಮೇಲೆ ಏಕಾ ಏಕಿ ಕಲ್ಲಿನಿಂದ ತಲೆಗೆ ಚಚ್ಚಿದ್ದಾನೆ. ನಂತರ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ. ಇದಕ್ಕೂ ಮುನ್ನ ರಾಜೇಶ್ವರಿ ಅವರ ಚಿಕ್ಕ ಮಗುವನ್ನೂ ಬೆದರಿಸಿ ಕೊಠಡಿಯಲ್ಲಿ ಮಲಗಿಸಿದ್ದ ಎನ್ನಲಾಗಿದೆ.

ನಂತರ ಮಹಿಳೆಯನ್ನು ಗಾಡ್ರೇಜ್ ಬೀರು ಬಳಿ ಕರೆದೊಯ್ದು ಅದರಲ್ಲಿದ್ದ , ಮಗನ ಆಸ್ಪತ್ರೆ ಖರ್ಚಿಗೆಂದು ಇಟ್ಟುಕೊಂಡಿದ್ದ ಐದು ಲಕ್ಷ ರೂ. ಪಡೆದು ಮನೆಯಿಂದ ಓಡಿ ಹೋಗಿದ್ದಾನೆ. ಸದ್ಯ ರಾಜೇಶ್ವರಿ ಅವರಿಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ವಿದ್ಯಾನಗರ ಠಾಣೆಯಲ್ಲಿ ದೂರು ದಾಖಲಾಗಿದ್ದು, ಜಿಲ್ಲಾ ಪೊಲೀಸ್ (2ನೇ ಪುಟಕ್ಕೆ)

## ಬಿಜೆಪಿ ಟಿಕೆಟ್ ಕೊಡಿಸುವುದಾಗಿ ವಂಚನೆ : ಚೈತ್ರ ಬಂಧನ



ಬೆಂಗಳೂರು, ಸೆ. 13 - ಉಡುಪಿ ಜಿಲ್ಲೆಯ ಬೈಂದೂರು ಕ್ಷೇತ್ರದ ಬಿಜೆಪಿ ಟಿಕೆಟ್ ನೀಡುವುದಾಗಿ ನಂಬಿಸಿ ಉದ್ಯಮಿ ಗೋವಿಂದ ಬಾಬು ಪೂಜಾರಿ ಎಂಬುವವರಿಗೆ ಕೋಟ್ಯಂತರ ರೂಪಾಯಿ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂದೂ ಕಾರ್ಯಕರ್ತೆ ಚೈತ್ರಾ ಕುಂದಾಪುರ ಸೇರಿದಂತೆ ಆರು ಆರೋಪಿಗಳನ್ನು ಬಂಧಿಸಲಾಗಿದೆ. ಇವರನ್ನು ಸೆಪ್ಟೆಂಬರ್ 23ರವರೆಗೆ ಸಿ.ಸಿ.ಬಿ. ಕಸ್ಟಡಿಗೆ ವಹಿಸಲಾಗಿದೆ.

ಪ್ರಕರಣ ಸಂಬಂಧ ಕರಾವಳಿ ಮೂಲದ ಚೈತ್ರಾ ಕುಂದಾಪುರ ಸೇರಿದಂತೆ ಶ್ರೀಕಾಂತ್, ರಮೇಶ್, ಗಗನ್, ಪ್ರಜ್ವಲ್, ಧನರಾಜ್ ಎಂಬುವವರನ್ನು ಬಂಧಿಸಲಾಗಿದೆ. ಈ ವೇಳೆ ಆರೋಪಿಗಳನ್ನು 14 ದಿನಗಳ ಕಾಲ ಸಿಸಿಬಿ ಕಸ್ಟಡಿಗೆ ನೀಡುವಂತೆ ಪೊಲೀಸರು ಮನವಿ ಮಾಡಿದರು. ಆದರೆ ಕೋರ್ಟ್ ಆರೂ ಮಂದಿ ಆರೋಪಿಗಳಿಗೂ 10 ದಿನಗಳ ಕಾಲ ಸಿಸಿಬಿ ಕಸ್ಟಡಿಗೆ ನೀಡಿದೆ. ಆರೋಪಿಗಳು ಉದ್ಯಮಿ ಗೋವಿಂದ ಬಾಬು ಪೂಜಾರಿಗೆ ಬಿಜೆಪಿ ಟಿಕೆಟ್ ಕೊಡಿಸುವುದಾಗಿ 5 ಕೋಟಿ ರೂ. ಪಡೆದು ವಂಚಿಸಿದ್ದಾರೆ ಎಂದು ಆರೋಪಿಸಲಾಗಿದೆ.

## ವೈದ್ಯಕೀಯ ಪಿ.ಜಿ. ಪ್ರವೇಶ ಪರ್ಸೆಂಟೈಲ್ ಇಳಿಕೆಗೆ ಒತ್ತಾಯ

ನವದೆಹಲಿ, ಸೆ. 13 – ವೈದ್ಯಕೀಯ ಸ್ನಾತಕೋತ್ತರದ ಎಲ್ಲಾ ಸೀಟುಗಳು ಭರ್ತಿ ಮಾಡುವ ಸಲುವಾಗಿ ನೀಟ್ ಪಿ.ಜಿ. -2023 ಪರೀಕ್ಷೆಯ ಕನಿಷ್ಠ ಅಂಕಗಳನ್ನು ಶೇ.30ಕ್ಕೆ ಇಳಿಸಬೇಕು ಎಂದು ಭಾರತೀಯ ವೈದ್ಯಕೀಯ ಒಕ್ಕೂಟ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದೆ.

ಹೆಚ್ಚಿನ ಕಟಾಫ್ ಅಂಕಗಳ ಕಾರಣದಿಂದ ವೈದ್ಯಕೀಯ ವಿದ್ಯಾರ್ಥಿಗಳು ಸ್ನಾತಕೋತ್ತರ ಅಧ್ಯಯನ ನಡೆಸಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಅವರು ವಿದೇಶಗಳಿಗೆ ತೆರಳುತ್ತಿದ್ದಾರೆ. (3ನೇ ಪುಟಕ್ಕೆ)

## ಸರ್ಕಾರ ಕೃಷಿ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಬೇಕು

### ರೈತ ಹುತಾತ್ಮರ ದಿನಾಚರಣೆಯಲ್ಲಿ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಆಗ್ರಹ



ದಾವಣಗೆರೆ, ಸೆ. 13- ಸರ್ಕಾರ ಬೇರೆ ಕ್ಷೇತ್ರಗಳಿಗಿಂತ ಕೃಷಿ ಕ್ಷೇತ್ರಕ್ಕೆ ಹೆಚ್ಚು ಒತ್ತು ಕೊಡಬೇಕು. ಎಲ್ಲಾ ಸರ್ಕಾರಗಳು ರೈತರ ಪರ ಮಾತನಾಡುತ್ತವೆ. ಆದರೆ ಅವರಿಗೆ ಅನುಕೂಲವಾಗುವಂತಹ ಕೆಲಸ ಮಾಡುವುದು ವಿರಳ ಎಂದು ಸಾಣೇಹಳ್ಳಿ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ದಾವಣಗೆರೆ ತಾಲ್ಲೂಕು ಉಳುಪಿನಕಟ್ಟೆ ಕ್ರಾಸ್ ಬಳಿ ಇರುವ ರೈತ ಹುತಾತ್ಮ ಸಮಾಧಿ ಎದುರಿಗೆ ರೈತ ಹುತಾತ್ಮರ ಸ್ಮರಣಾರ್ಥ ಸಮಿತಿ, ಜಿಲ್ಲೆಯ ರೈತಪರ ಸಂಘಟನೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಓಬೇನಹಳ್ಳಿ ಕಲ್ಲಿಂಗಪ್ಪ ಮತ್ತು ಸಿದ್ಧನೂರು ನಾಗರಾಜಾಚಾರ್ ಅವರ 31 ನೇ ವರ್ಷದ ರೈತ ಹುತಾತ್ಮರ ದಿನಾಚರಣೆ ಮತ್ತು ಸ್ಮಾರಕ ಭವನ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

**ಓಬೇನಹಳ್ಳಿ ಕಲ್ಲಿಂಗಪ್ಪ ಮತ್ತು ಸಿದ್ಧನೂರು ನಾಗರಾಜಚಾರ್ ಅವರ 31ನೇ ವರ್ಷದ ರೈತ ಹುತಾತ್ಮರ ದಿನಾಚರಣೆ ಮತ್ತು ಸ್ಮಾರಕ ಭವನದ ಉದ್ಘಾಟನೆ**

ರೈತರ ಸಮಸ್ಯೆ ನೂರಾರು. 'ಒಕ್ಕಲಿಗ ಒಕ್ಕದಿದ್ದರೆ ಬಿಕ್ಕುವುದು ಜಗವೆಲ್ಲಾ' ಎಂಬ ಸರ್ವಜ್ಞನ ಮಾತಿನಂತೆ ಇಡೀ ಸಮಾಜಕ್ಕೆ ಅನ್ನ ನೀಡಲು ರೈತ ಹಗಲಿರುಳು ದುಡಿಯುತ್ತಾನೆ. ಅಂತಹ ರೈತ ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ, ಕೃಷಿಗೆ ಅಗತ್ಯವಾದ ಸವಲತ್ತುಗಳು ಸಿಗಬೇಕಾಗಿದೆ ಎಂದರು.

ಅಡಿಕೆ, ಹಣ ತಿಂದು ಬದುಕಲು ಸಾಧ್ಯವಿಲ್ಲ. ಆಹಾರ ಪದಾರ್ಥಗಳನ್ನು ತಿಂದು ಬದುಕಲು ಸಾಧ್ಯ. ಹಾಗಾಗಿ ಆಹಾರ ಪದಾರ್ಥಗಳನ್ನು ಬೆಳೆಯುವಂತಹ ಜನರಿಗೆ ಸರ್ಕಾರ ಹೆಚ್ಚಿನ ಸವಲತ್ತುಗಳನ್ನು ಒದಗಿಸುವ ಪ್ರಯತ್ನ ಮಾಡಬೇಕು. ಬೆಂಬಲ ಬೆಲೆ ಸಿಗುವಂತಾಗಬೇಕು. ರಾಗಿ, ಜೋಳಕ್ಕೂ ಹತ್ತು ಸಾವಿರ ಕ್ವಿಂಟಾಲ್‌ಗೆ ಸಿಕ್ಕರೆ ರೈತನ ಸ್ಥಿತಿ ಉತ್ತಮವಾಗಲಿದೆ. ರೈತರೂ ಸಹ ಒಂದೇ ಬೆಳೆಗೆ ಜೋತು ಬೀಳಬಾರದು. ವೈವಿಧ್ಯಮಯ ಬೆಳೆಗಳನ್ನು ಬೆಳೆಯಬೇಕೆಂದು ಹಿತ ನುಡಿದರು.

ರೈತ ಹುತಾತ್ಮರ ಸ್ಮಾರಕದ ಬಳಿ ರೈತ ಸಮುದಾಯ ಭವನ, ತರಬೇತಿ (2ನೇ ಪುಟಕ್ಕೆ)

## 3ನೇ ಹಂತದ ಇ-ನ್ಯಾಯಾಲಯ ಯೋಜನೆಗೆ ಕೇಂದ್ರ ಅಸ್ತು

ನವದೆಹಲಿ, ಸೆ. 13 – ಮೂರನೇ ಹಂತದ ಇ-ನ್ಯಾಯಾಲಯ ಯೋಜನೆಗೆ ಕೇಂದ್ರ ಸಂಪುಟ ಅನುಮೋದನೆ ನೀಡಿದೆ. ನಾಲ್ಕು ವರ್ಷಗಳಲ್ಲಿ ಜಾರಿಯಾಗಲಿರುವ ಈ ಯೋಜನೆಗೆ 7,210 ಕೋಟಿ ರೂ. ಹಣಕಾಸು ಒದಗಿಸಲಾಗುವುದು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಈ ಬಗ್ಗೆ ಮಾಹಿತಿ ನೀಡಿರುವ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್, ಸಬ್ ಕಾ ಸಾಥ್, ಸಬಾ ಕಾ ವಿಕಾಸ್ ದೃಷ್ಟಿಕೋನದಂತೆ ನ್ಯಾಯವನ್ನು ಒದಗಿಸಲು ತಂತ್ರಜ್ಞಾನ ಬಳಸಲು ಈ ಯೋಜನೆ ರೂಪಿಸಲಾಗಿದೆ ಎಂದರು.

**7,210 ಕೋಟಿ ರೂ. ಬಿಡುಗಡೆಗೆ ಒಪ್ಪಿಗೆ**

ರಾಷ್ಟ್ರೀಯ ಇ-ಆಡಳಿತ ಕಾರ್ಯಕ್ರಮದ ಅನ್ವಯ ಇ-ನ್ಯಾಯಾಲಯ ಯೋಜನೆಯನ್ನು 2007ರಿಂದ ಜಾರಿಗೆ ತರಲಾಗುತ್ತಿದೆ. ಈ ಮೂಲಕ ನ್ಯಾಯಾಂಗಕ್ಕೆ ಮಾಹಿತಿ ಹಾಗೂ ಸಂಪರ್ಕ ತಂತ್ರಜ್ಞಾನ ಕಲ್ಪಿಸಲಾಗುತ್ತಿದೆ. ಎರಡನೇ ಹಂತದ ಯೋಜನೆ 2023ರಲ್ಲಿ ಪೂರ್ಣಗೊಂಡಿದೆ.

ಮೂರನೇ ಹಂತಕ್ಕೆ ಈಗ ಚಾಲನೆ ನೀಡಲಾಗಿದೆ. ನ್ಯಾಯದಲ್ಲಿ ಒಳಗೊಳ್ಳುವಿಕೆ ಹಾಗೂ ತಲುಪುವಿಕೆಯ ಸೂತ್ರದಂತೆ ಯೋಜನೆ ಜಾರಿಗೆ ತರಲಾಗುತ್ತಿದೆ ಎಂದು ಸಚಿವರು ಹೇಳಿದ್ದಾರೆ. ಡಿಜಿಟಲೀಕರಣ, ಆನ್‌ಲೈನ್ ಹಾಗೂ ಕಾಗದ ರಹಿತ ನ್ಯಾಯಾಲಯಕ್ಕೆ ಈ ಯೋಜನೆಯಲ್ಲಿ ಒತ್ತು ನೀಡಲಾಗಿದೆ. ಇ-ಫೈಲಿಂಗ್, ಇ-ಪಾವತಿ ಇತ್ಯಾದಿಗಳನ್ನು ಸಾರ್ವತ್ರೀಕರಣಗೊಳಿಸ (3ನೇ ಪುಟಕ್ಕೆ)

## ಉಜ್ವಲ : 75 ಲಕ್ಷ ಗ್ಯಾಸ್ ಸಂಪರ್ಕಕ್ಕೆ ಹಣ ಬಿಡುಗಡೆ

ನವದೆಹಲಿ, ಸೆ. 13 – ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಮೂಲಕ 75 ಲಕ್ಷ ಅಡುಗೆ ಅನಿಲ ಸಂಪರ್ಕ ಒದಗಿಸಲು ಕೇಂದ್ರ ಸರ್ಕಾರ 1,650 ಕೋಟಿ ರೂ. ಬಿಡುಗಡೆ ಮಾಡಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಹೆಚ್ಚುವರಿ 75 ಲಕ್ಷ ಸಂಪರ್ಕಗಳೊಂದಿಗೆ, ಉಜ್ವಲ ಯೋಜನೆಯ ಫಲಾನುಭವಿಗಳ ಸಂಖ್ಯೆ 10.35 ಕೋಟಿಗೆ ತಲುಪಲಿದೆ.


## ಪೊಲೀಸರು ಅಪರಾಧ ಮಾಹಿತಿ ನೀಡುವ ಕುರಿತು ಮಾರ್ಗಸೂಚಿ : ಸುಪ್ರೀಂ ಕೋರ್ಟ್

ನವದೆಹಲಿ, ಸೆ. 13 – ಮಾಧ್ಯಮಗಳ ವಿಚಾರಣೆಯಿಂದ ನ್ಯಾಯ ಮಾರ್ಗದ ದಿಕ್ಕು ತಪ್ಪುತ್ತದೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಅಪರಾಧಿಕ ಪ್ರಕರಣಗಳ ಬಗ್ಗೆ ಪೊಲೀಸರು ಮಾಧ್ಯಮಗಳಿಗೆ ಮಾಹಿತಿ ನೀಡುವ ಕುರಿತು ಕೇಂದ್ರ ಗೃಹ ಸಚಿವಾಲಯ ಮಾರ್ಗಸೂಚಿ ರೂಪಿಸುವಂತೆ ತಿಳಿಸಿದೆ.

ಮುದ್ರಣ, ಎಲೆಕ್ಟ್ರಾನಿಕ್ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಅಪರಾಧ ಪ್ರಕರಣಗಳ ವರದಿಗಾರಿಕೆ ಹೆಚ್ಚಾಗುತ್ತಿದೆ. ಈ ಸಂದರ್ಭದಲ್ಲಿ ಮಾಧ್ಯಮಗಳಿಗೆ ಮಾಹಿತಿ ನೀಡುವ ಕುರಿತು ಮಾರ್ಗಸೂಚಿ ರೂಪಿಸುವ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಈ ಹಿಂದೆ 2010ರಲ್ಲಿ ಗೃಹ ಸಚಿವಾಲಯ ಮಾರ್ಗಸೂಚಿ ರೂಪಿಸಿತ್ತು.

ಮಾಧ್ಯಮಗಳ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಹಾಗೂ ಆರೋಪಿಯ ನ್ಯಾಯೋಚಿತ ತನಿಖೆಯ ಹಕ್ಕಿನ ನಡುವೆ ಸಮತೋಲನದ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ರಾಜ್ಯಗಳ ಪೊಲೀಸ್ ಮುಖ್ಯಸ್ಥರು ಮಾರ್ಗಸೂಚಿ ರೂಪಿಸುವ ಕುರಿತು ತಿಂಗಳ ಒಳಗೆ ಕೇಂದ್ರ ಗೃಹ ಸಚಿವಾಲಯಕ್ಕೆ ಸಲಹೆಗಳನ್ನು ನೀಡಬೇಕು ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

## ಕಾರುಗಳಲ್ಲಿ ಆರು ಏರ್‌ಬ್ಯಾಗ್ ಕಡ್ಡಾಯವಲ್ಲ : ಗಡ್ಕರಿ



ನವದೆಹಲಿ ಸೆ. 13 – ಕಾರುಗಳಲ್ಲಿ 6 ಏರ್‌ಬ್ಯಾಗ್ ಅಳವಡಿಕೆ ಕಡ್ಡಾಯ ಮಾಡುವುದಿಲ್ಲ ಎಂದು ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಅಕ್ಟೋಬರ್ 2023ರಿಂದ ಕಾರುಗಳಲ್ಲಿ ಆರು ಏರ್‌ಬ್ಯಾಗ್ ಕಡ್ಡಾಯ ಮಾಡಲು ಸರ್ಕಾರ ಕಳೆದ ವರ್ಷ ಪ್ರಸ್ತಾಪಿಸಿತ್ತು. ಸುರಕ್ಷತೆ ಹೆಚ್ಚಿಸುವ ಸಲುವಾಗಿ ಈ ಕ್ರಮಕ್ಕೆ ಮುಂದಾಗಲಾಗಿತ್ತು. ಆದರೆ, 6 ಏರ್‌ಬ್ಯಾಗ್ ನಿಯಮ ಕಡ್ಡಾಯ ಮಾಡುವುದಿಲ್ಲ ಎಂದು ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಗಡ್ಕರಿ ತಿಳಿಸಿದ್ದಾರೆ.

ಪ್ರಸಕ್ತ, ಏಪ್ರಿಲ್ 1, 2021ರ ನಂತರ ಉತ್ಪಾದನೆಯಾಗುವ ಕಾರುಗಳಲ್ಲಿ ಮುಂದಿನ ಸೀಟುಗಳಿಗೆ ಏರ್‌ಬ್ಯಾಗ್ ಕಡ್ಡಾಯವಾಗಿದೆ.


## ಸಂತೇಬೆನ್ನೂರು ಸುಶೀಲಮ್ಮ ನಿಧನ



ಚನ್ನಗಿರಿ ತಾಲ್ಲೂಕು ಸಂತೇಬೆನ್ನೂರು ವಾಸಿ ದಿ. ಸಿದ್ದಲಿಂಗಯ್ಯ ಇವರ ಧರ್ಮಪತ್ನಿ

**ಶ್ರೀಮತಿ ಸುಶೀಲಮ್ಮ**

ಇವರು ದಿನಾಂಕ 13.09.2023ರ ಬುಧವಾರ ಸಂಜೆ 6.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 96 ವರ್ಷ ವಯಸ್ಸಾಗಿತ್ತು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14.09.2023ರ ಗುರುವಾರ ಮಧ್ಯಾಹ್ನ 11.30 ಕ್ಕೆ ಮೃತರ ಸ್ವಗ್ರಾಮವಾದ ಚನ್ನಗಿರಿ ತಾಲ್ಲೂಕು ಸಂತೇಬೆನ್ನೂರು ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : 97434 92492, 94498 27441

## ಮಕ್ಕಳ ವೈದ್ಯರ ನಿರಂತರ ಪ್ರೇರಣೆ ಡಾ॥ ನಿರ್ಮಲ ಕೇಸರಿ ಪುಣ್ಯಸ್ಮರಣೆ



ಜನನ : 14.09.1930

**ಡಾ॥ ನಿರ್ಮಲ ಕೇಸರಿ**

ಇವರ 94ನೇ ಹುಟ್ಟು ಹಬ್ಬದ ದಿನದಂದು ನಮಗೆಲ್ಲಾ ತಾಯಿ ಸ್ವರೂಪಿ

**'ಮದರ್ ಕೇಸರಿ'**

ಅವರನ್ನು ನೆನೆಯುತ್ತಾ, ಅವರು ಹಾಕಿಕೊಟ್ಟ ಮಾರ್ಗದರ್ಶನ ನಮ್ಮೆಲ್ಲರಿಗೂ ಎಂದೆಂದಿಗೂ ಸ್ಫೂರ್ತಿ...

ಮೇಡಂ ರವರಿಗೆ ಭಕ್ತಿ ಪೂರ್ವಕ ನಮನಗಳು...

ನಿರ್ದೇಶಕರು, ವೈದ್ಯರು ಹಾಗೂ ಸಿಬ್ಬಂದಿ ವರ್ಗ, ಬಾಪೂಜಿ ಮಕ್ಕಳ ಆಸ್ಪತ್ರೆ
ದಾವಣಗೆರೆ, ಮಕ್ಕಳ ವೈದ್ಯರ ಸಂಘ
ಪ್ರಾಂಶುಪಾಲರು ಮತ್ತು ಸಿಬ್ಬಂದಿ ವರ್ಗ
ಹಾಗೂ ಮಕ್ಕಳ ವಿಭಾಗ (JJMMC & SSIMS)
ಡಾ॥ ನಿರ್ಮಲಾ ಕೇಸರಿ ಪಿಡಿಯಾಟ್ರಿಕ್ ಅಕಾಡೆಮಿಕ್ ಟ್ರಸ್ಟ್

# ಉತ್ತಮ ಆರೋಗ್ಯವಂತರು ನಿಜವಾದ ಶ್ರೀಮಂತರು

## ಜಗಳೂರು ಶಾಸಕ ದೇವೇಂದ್ರಪ್ಪ

ಜಗಳೂರು, ಸೆ. 13- ಕಾರು, ಬಂಗಲೆ, ಆಸ್ತಿ, ಐಶ್ವರ್ಯ ಇರುವವರು ಮಾತ್ರ ಶ್ರೀಮಂತರಲ್ಲ. ಉತ್ತಮ ಆರೋಗ್ಯ ಹೊಂದಿರುವವರೇ ಇಂದು ನಿಜವಾದ ಶ್ರೀಮಂತರು ಎಂದು ಶಾಸಕ ಬಿ.ದೇವೇಂದ್ರಪ್ಪ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಸಭಾಂಗಣದಲ್ಲಿ ಬುಧವಾರ ಭಾರತ ಸರ್ಕಾರ ಜಾರಿಗೆ ತಂದಿರುವ ಆಯುಷ್ಮಾನ್ ಭವ ಅಭಿಯಾನ ಎಂಬ ಯೋಜನೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕಣ್ಣಿಗೆ ಕಾಣುವ ದೇವರು ಎಂದು ರೋಗಿಗಳು ನಂಬಿಕೆ ಇಟ್ಟಿರುವುದು ವೈದ್ಯರಿಗೆ ಮಾತ್ರ. ಅಲ್ಲದೆ ಸಾವಿನಿಂದ ಅಮೃತದೆಡೆಗೆ ಕೊಂಡೊಯ್ಯುವುದು ಆರೋಗ್ಯ ಸೇವೆ ನೀಡುವ ಸಿಬ್ಬಂದಿಗಳಿಂದ ಮಾತ್ರ ಸಾಧ್ಯ ಎಂದರು.

ಸರ್ಕಾರದಿಂದ ಆಯುಷ್ಮಾನುಭವ ಎಂಬ ಆರೋಗ್ಯ ಸೇವೆ ನೀಡುತ್ತಿದ್ದು, ಈ ಯೋಜನೆ ಅಗತ್ಯವಾದವರಿಗೆ ತಲುಪಿಸುವ ಕಾರ್ಯ ಯಶಸ್ವಿಯಾಗಿಸಿ ಎಂದು ಆರೋಗ್ಯ



ಇಲಾಖೆಯವರಿಗೆ ಸೂಚಿಸಿದರು.

ಅರ್ಥ ರೇಖೆ ಎಷ್ಟಿದ್ದರೇನು.? ಆರೋಗ್ಯ ರೇಖೆ ಇಲ್ಲದ ಮೇಲೆ ಎಂಬ ವಾಕ್ಯದಂತೆ ಹಣ ಕಳೆದುಕೊಂಡರೆ ಇನ್ನೊಂದು ರೂಪದಲ್ಲಿ ದುಡಿಯಬಹುದು, ಗಳಿಸಬಹುದು ಆದರೆ ಆರೋಗ್ಯ ಕಳೆದುಕೊಂಡರೆ ಮತ್ತೆ ಗಳಿಸಲಾಗದು ಎಂದರು.

ರೋಗಿಯು ಗುಣಮುಖವಾಗಬೇಕಾದರೆ ವೈದ್ಯರ ನಗು ಮುಖದಲ್ಲಿ ಇರಬೇಕು. ತಾಯಿ ಬಿಟ್ಟರೆ ರೋಗಿಯನ್ನು ವೈದ್ಯ ಮಾತ್ರ ತಾಯಿಯಂತೆ ಆರೈಕೆ ಮಾಡುತ್ತಾನೆ. ಅಲ್ಲದೆ ಅತಂರಂಗದಲ್ಲಿ ಮಿಡಿಯುವ ಹೃದಯ ವೈದ್ಯರಿಗಿದೆ ಎಂದು ಹೇಳಿದರು.

ಅಪಘಾತ ಸಂದರ್ಭದಲ್ಲಿ ಹಾಗೂ ಅನೀರಿಕ್ಷಿತವಾಗಿ ಸಾವಿನ ನಂತರ ಪೋಸ್ಟ್ ಮಾರ್ಟಮ್ ಮಾಡಿಸುವವರಿಗೆ ಅನುಕೂಲವಾಗುವುದಕ್ಕೆ ಒಂದು ವಾಹನ ಹಾಗೂ ಮುಕ್ತಿ ವಾಹನವನ್ನು ಸ್ವಂತ ಹಣದಲ್ಲಿ ಶೀಘ್ರವೇ ಆಸ್ಪತ್ರೆಗೆ ನೀಡಲಾಗುವುದು ಎಂದು ಶಾಸಕರು ಭರವಸೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪ್ರಭಾರಿ ತಾಲ್ಲೂಕು ಆರೋಗ್ಯಾಧಿಕಾರಿ ಉಮೇಶ್, ವೈದ್ಯಾಧಿಕಾರಿ ಷಣ್ಮುಖಪ್ಪ, ಪ್ರಕೃತಿ ಯೋಗ ಚಿಕಿತ್ಸಾ ಕೇಂದ್ರದ ವೈದ್ಯರಾದ ಡಾ.ಶ್ವೇತಾ, ಸಮಾಜ ಕಲ್ಯಾಣ ಇಲಾಖೆ ನಿವೃತ್ತ ಅಧಿಕಾರಿ ಮಹೇಶ್ವರಪ್ಪ. ಸರ್ಕಾರಿ ನೌಕರರ ಸಂಘದ ಖಜಾಂಚಿ ಸಿ.ಬಿ. ನಾಗರಾಜ್ ಸೇರಿದಂತೆ, ಆಶಾ ಕಾರ್ಯಕರ್ತೆಯರು, ಶುಶ್ರೂಷಕರು, ಆಸ್ಪತ್ರೆ ಸಿಬ್ಬಂದಿಗಳಿದ್ದರು.

# ಸರ್ಕಾರ ಕೃಷಿ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಬೇಕು : ಪಂಡಿತಾರಾಧ್ಯ ಶ್ರೀ

**(1ನೇ ಪುಟದಿಂದ)** ಕೇಂದ್ರ ಸೇರಿದಂತೆ ಇತರೆ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಶಾಸಕರು, ಜಿಲ್ಲಾ ಮಂತ್ರಿಗಳು ಮತ್ತು ಅಧಿಕಾರಿಗಳು ಕಾರ್ಯೋನ್ಮುಖರಾಗಬೇಕು. ಕೊಟ್ಟ ಭರವಸೆ ಹುಸಿಯಾಗದಂತೆ ನೋಡಿಕೊಳ್ಳಬೇಕೆಂದು ಸೂಚ್ಯವಾಗಿ ತಿಳಿಸಿದರು.

ಆನಗೋಡು ನಂಜುಂಡಪ್ಪ ಅವರ ಸಲಹೆಯಂತೆ ಹಿಂದಿನ ಕೃಷಿ ಪದ್ಧತಿಯನ್ನು ಪರಿಚಯಿಸುವ ಸಲುವಾಗಿ ಕೃಷಿ ಪರಿಕರಗಳ ಪ್ರದರ್ಶನವನ್ನು ಏರ್ಪಡಿಸುವ ಮೂಲಕ ಮುಂದಿನ ಪೀಳಿಗೆಗೆ ಅದನ್ನು ಪರಿಚಯಿಸುವ ಪ್ರಯತ್ನ ತುಂಬಾ ಒಳ್ಳೆಯದು. ಆ ಕಾರ್ಯವನ್ನೂ ಸಹ ಮಾಡಬೇಕೆಂದು ಸೂಚನೆ ನೀಡಿದರು.

ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ಪ್ರೊ. ನಂಜುಂಡಸ್ವಾಮಿ ಅವರು ಹೋರಾಟಕ್ಕೆ ಕರೆ ಕೊಟ್ಟರೆ ಇಡೀ ರೈತ ಸಮೂಹ ಸಹಸ್ರ ಸಂಖ್ಯೆಯಲ್ಲಿ ಬರುತ್ತಿತ್ತು. ಆದರೆ ಇವತ್ತಿನ ರೈತ ಸಂಘಟನೆಗಳು ಹಿಂದಿನಂತೆ ಬಲಿಷ್ಠವಾಗಿರದೇ ಬಲಹೀನವಾಗಿರುವುದು ವಿಷಾದದ ಸಂಗತಿಯಾಗಿದೆ. ಮುಖಂಡರು ಸಮಾಜ ಮುಖಿ ಚಿಂತನೆಗಳನ್ನು ಮೈಗೂಡಿಸುವ ಮೂಲಕ ರೈತರನ್ನು ಸಂಘಟಿಸುವ ಮೂಲಕ ಹೋರಾಟ ನಡೆಸುವುದು ಸೂಕ್ತ ಎಂದರು.

ಸಮಾಜದಲ್ಲಿರುವ ರೈತ, ದಲಿತ, ಕಾರ್ಮಿಕ ಸಂಘಟನೆಗಳ ಮೊದಲಿದ್ದ ಧ್ವನಿ ಅಡಗಿರುವುದು ನೋವಿನ ಸಂಗತಿಯಾಗಿದೆ. ಜನಪರ, ಸಮಾಜಮುಖಿ ಕಾರ್ಯಗಳನ್ನು ಮಾಡುವ ಮೂಲಕ ಸಂಘಟನೆಗಳು ಬಲ ಹೆಚ್ಚಿಸಿಕೊಳ್ಳಬೇಕು. ಪಂಡಿತಾರಾಧ್ಯ ಶ್ರೀಗಳು ಮುಖಂಡರನ್ನು ಕರೆದು ಮಾತನಾಡಿ ಹರಿದು ಹಂಚಿ ಹೋಗಿರುವ ರೈತ ಸಂಘಟನೆಗಳನ್ನು ಒಗ್ಗೂಡಿಸುವ ಪ್ರಯತ್ನವನ್ನು ಮಾಡುವಂತೆ ಮನವಿ ಮಾಡಿದರು.

ಹುತಾತ್ಮರ ಸ್ಮಾರಕ ಭವನದ ಬಳಿ ಸಮುದಾಯ ಭವನ ನಿರ್ಮಾಣ ಸೇರಿದಂತೆ ರೈತರ ಇತರೆ ಸಮಸ್ಯೆಗಳನ್ನು ಆಲಿಸಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಮಲ್ಲಿಕಾರ್ಜುನ್, ಕೃಷಿ ಸಚಿವ ಕೃಷ್ಣಭೈರೇಗೌಡರ ಗಮನಕ್ಕೆ ತಂದು ಪರಿಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

22 ಕೆರೆ ಏತ ನೀರಾವರಿ ಯೋಜನೆಯಡಿ ಎಲ್ ಅಂಡ್ ಟಿ ಕಂಪನಿಯವರು ಮಾಡಲಾದ ಪೈಪ್‌ಲೈನ್ ಕಾಮಗಾರಿ ಕಳಪೆಯಿಂದ ಕೂಡಿದ್ದು, ಯೋಜನೆಯ ಉದ್ದೇಶ ಇನ್ನೂ ಈಡೇರಿಲ್ಲ. ಕಳಪೆ ಕಾಮಗಾರಿ ನಿರ್ವಹಿಸಿದ ಕಂಪನಿಯನ್ನು ಕಪ್ಪುಪಟ್ಟಿಗೆ ಸೇರಿಸಬೇಕು. ಕಾಮಗಾರಿಗೆ ವ್ಯಯಿಸಿದ ಹಣವನ್ನು ವಾಪಾಸ್ ಪಡೆಯಲು ಅಧಿವೇಶನದಲ್ಲಿ ಪ್ರಸ್ತಾಪ ಮಾಡಿ, ಸರಿಪಡಿಸಲು ಸರ್ಕಾರಕ್ಕೆ ಮನವಿ ಮಾಡಿರುವುದಾಗಿ ತಿಳಿಸಿದರು.

ಮಾಯಕೊಂಡ ಕ್ಷೇತ್ರ ಅತಿ ಹೆಚ್ಚು ಮೆಕ್ಕೇಜೋಳ ಬೆಳೆಯುವ ಪ್ರದೇಶವಾಗಿದ್ದು, ಮೆಕ್ಕೇಜೋಳವನ್ನು ಆಹಾರ ಪಡಿತರ ವ್ಯಾಪ್ತಿಯಡಿ ತರುವ ಮೂಲಕ ರೈತರ ಹಿತ ಕಾಪಾಡುವಂತೆ ಒತ್ತಾಯಿಸಿದ ಅವರು, ಮಳೆಯ ಕೊರತೆಯಿಂದಾಗಿ ಬೆಳೆ ಬಾರದೇ ತಾಲ್ಲೂಕಿನ ರೈತರು ತೀವ್ರ ಸಂಕಷ್ಟಕ್ಕೀಡಾಗಿದ್ದು, ದಾವಣಗೆರೆಯನ್ನು ಬರಪೀಡಿತ ತಾಲ್ಲೂಕನ್ನಾಗಿ ಘೋಷಿಸುವಂತೆ ಸರ್ಕಾರದ ಮೇಲೆ ಒತ್ತಡ ತರುವುದಾಗಿ ಹೇಳಿದರು.

ಸಮಿತಿ ಅಧ್ಯಕ್ಷ ಎನ್.ಜಿ. ಪುಟ್ಟಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಸಮಿತಿ ಗೌರವಾಧ್ಯಕ್ಷ ಹೆಚ್. ನಂಜುಂಡಪ್ಪ, ರೈತ ಮುಖಂಡರಾದ ತೇಜಸ್ವಿ ಪಟೇಲ್, ಹೊನ್ನೂರು ಮುನಿಯಪ್ಪ, ತುರ್ಚಘಟ್ಟ ಬಸವರಾಜಪ್ಪ, ಅರುಣ್ ಕುಮಾರ್ ಕುರುಡಿ, ಆವರಗೆರೆ ರುದ್ರಮುನಿ, ಆರ್.ಜಿ.ಹಳ್ಳಿ ರಾಜಶೇಖರ್, ಗಂಗಾಧರಪ್ಪ, ಹೆಚ್.ಎನ್. ಶಿವಕುಮಾರ್, ಎಸ್.ಕೆ. ಚಂದ್ರಶೇಖರ್, ಮಹೇಶ್ವರ ಗೌಡ್ರು, ಬುಳ್ಳಾಪುರದ ಹನುಮಂತಪ್ಪ, ನೇರ್ಲಿಗಿ ಸ್ವಾಮಿ, ರೇವಣ್ಣ, ತಹಶೀಲ್ದಾರ್ ಡಾ. ಅಶ್ವತ್ಥ್, ಉಪತಹಶೀಲ್ದಾರ್ ರಾಮಸ್ವಾಮಿ, ಮುರಿಗೇಂದ್ರಪ್ಪ, ಮರುಳಸಿದ್ಧಯ್ಯ, ಕಾರ್ಯಪಾಲಕ ಇಂಜಿನಿಯರ್ ಟಿ. ಪುಟ್ಟಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

ಚಿನ್ನಸಮುದ್ರ ಉಮೇಶ್ ನಾಯ್ಕ ರೈತ ಗೀತೆ ಹಾಡಿದರು. ಕಕ್ಕರಗೊಳ್ಳ ಕೆ.ಪಿ. ಕಲ್ಲಿಂಗಪ್ಪ ಕಾರ್ಯಕ್ರಮ ನಿರೂಪಿಸಿದರು. ಶಾಮನೂರು ಹೆಚ್.ಆರ್. ಲಿಂಗರಾಜ್ ಸ್ವಾಗತಿಸಿದರು. ಆವರಗೆರೆ ರುದ್ರಮುನಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ರೈತ ಹುತಾತ್ಮರ ಸ್ಮಾರಕ ಭವನವನ್ನು ಪಂಡಿತಾರಾಧ್ಯ ಶ್ರೀಗಳು ಉದ್ಘಾಟಿಸಿದರು.

### ಕೃಷಿ ಪರಿಕರಗಳ ವಸ್ತು ಪ್ರದರ್ಶನ ಏರ್ಪಡಿಸಿ

❛ ರೈತರಿಗೆ ಅಗತ್ಯವಾದ ರೈತ ಸಮುದಾಯ ಭವನ, ವಸತಿ ಗೃಹ ನಿರ್ಮಾಣ, ರೈತರ ತರಬೇತಿ ಕೇಂದ್ರದ ಜೊತೆಗೆ ಬಹುಮುಖ್ಯವಾಗಿ ರೈತರ ಕೃಷಿ ಪರಿಕರಗಳ ವಸ್ತು ಪ್ರದರ್ಶನವನ್ನು ಏರ್ಪಡಿಸುವ ಅವಶ್ಯವಿದೆ.

- ಹೆಚ್. ನಂಜುಂಡಪ್ಪ ಆನಗೋಡು.

### ಸಾಲದ ಕಿರುಕುಳ ತಪ್ಪಿಸಿ

❛ ರೈತರು ಅನ್ಯಾಯದ ವಿರುದ್ಧ ಪ್ರತಿಭಟಿಸದಂತಹ ವಾತಾವರಣ ನಿರ್ಮಾಣವಾಗಿದೆ. ಸರ್ಕಾರದ ಕಣ್ಣಾಮು ಚ್ಚಾಲೆ ಆಟದಿಂದ ರೈತರು ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ. ಸಾಲದ ಕಿರುಕುಳ ತಪ್ಪಿಸಬೇಕು. ನಿರಂತರ ಏಳು ತಾಸು ವಿದ್ಯುತ್ ಪೂರೈಸಬೇಕು. ತಾಲ್ಲೂಕನ್ನು ಬರಪೀಡಿತ ಪಟ್ಟಿಗೆ ಸೇರ್ಪಡೆ ಮಾಡಬೇಕು.

- ಹೊನ್ನೂರು ಮುನಿಯಪ್ಪ

### ರೈತರ ಸ್ಥಿತಿಗತಿ ಅರಿಯಲು ಇಂಟಲಿಜೆನ್ಸಿ ನೇಮಿಸಿ

❛ ರೈತರ ಹಿತದೃಷ್ಟಿಯಿಂದ ಕೆಲವು ನಿಯಮಗಳನ್ನು ಬದಲಿಸಬೇಕಾದ ಅಗತ್ಯವಿದೆ. ರೈತರೊಂದಿಗೆ ಸಂವಾದ ನಡೆಸಲು ಪಂಡಿತಾರಾಧ್ಯ ಶ್ರೀಗಳು ಮುಂದಾಗಬೇಕು. ಗೋಲಿಬಾರ್ ನಲ್ಲಿ ಮೃತಪಟ್ಟ ರೈತ ಕುಟುಂಬಗಳಿಗೆ ಮಾಸಾಶನ ನೀಡಬೇಕು. ಬೆಳೆ ನೀತಿ, ಬೆಲೆ ನೀತಿ ರೂಪುಗೊಳ್ಳಬೇಕು. ಕಂಗಾಲಾಗಿರುವ ರೈತರ ಸ್ಥಿತಿಗತಿ ಅರಿಯಲು ಗುಪ್ತಚರ (ಇಂಟಲಿಜೆನ್ಸಿ)ಇಲಾಖೆ ಅಧಿಕಾರಿಗಳ ನೇಮಕ ಆಗಬೇಕು.

- ತೇಜಸ್ವಿ ಪಟೇಲ್

### ಬರಪೀಡಿತ ತಾಲ್ಲೂಕು ಘೋಷಣೆ ಸಾಧ್ಯತೆ

❛ ತಾಲ್ಲೂಕಿನಲ್ಲಿ ಬೆಳೆ ಸಮೀಕ್ಷೆ ನಡೆಸಲಾಗಿದ್ದು, ಸರ್ಕಾರಕ್ಕೆ ಈಗಾಗಲೇ ವರದಿ ಸಲ್ಲಿಕೆಯಾಗಿದೆ. ಎರಡನೇ ಹಂತದಲ್ಲಿ ಬರಪೀಡಿತ ತಾಲ್ಲೂಕು ಘೋಷಣೆ ಸಾಧ್ಯತೆ ಇದೆ.

- ಡಾ. ಅಶ್ವತ್ಥ್, ತಹಶೀಲ್ದಾರ್

# 'ಕಲೆ' ಜನರ ನಡುವೆ ಅರಳಲಿ: ಡಾ.ಪ್ರಭಾ

**(1ನೇ ಪುಟದಿಂದ)** ಎಂದು ನೆನಪಿಸಿಕೊಂಡರು. ಬೇಸಿಗೆ ಶಿಬಿರದಿಂದ ಕಲೆಯಲ್ಲಿ ಆಸಕ್ತಿ ಇರುವ ಮಕ್ಕಳಿಗೆ ಸಹಕಾರಿಯಾಗುತ್ತದೆ. ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂದು ಹೇಳಿದರು.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಕಲಾವಿದ ಪಿ.ಎಸ್. ಕಡೇಮನಿ ಮಾತನಾಡುತ್ತಾ, ರಾಜ್ಯದಲ್ಲಿ 111 ಕಲಾ ಕಾಲೇಜುಗಳ ಪೈಕಿ 40 ಕಾಲೇಜುಗಳು ಮಾತ್ರ ಉಳಿದುಕೊಂಡಿವೆ. ಈ ಪೈಕಿ 12 ಕಾಲೇಜುಗಳು ಮಾತ್ರ ಸರ್ಕಾರದಿಂದ ಅನುದಾನ ಪಡೆಯುತ್ತಿವೆ. 25 ವರ್ಷ ಕಳೆದರೂ ಉಳಿದ ಕಾಲೇಜುಗಳು ಅನುದಾನಕ್ಕೊಳಪಟ್ಟಿಲ್ಲ ಎಂದು ಹೇಳಿದರು.

ಕಳೆದ 15 ವರ್ಷಗಳಿಂದ ಹೈಸ್ಕೂಲ್‌ಗಳಲ್ಲಿ ಚಿತ್ರಕಲಾ ಶಿಕ್ಷಕರ ಹುದ್ದೆ ಭರ್ತಿ ಮಾಡಿಲ್ಲ. ಎಲ್ಲರಲ್ಲೂ ಕಲೆ ಬಗ್ಗೆ ಆಸಕ್ತಿ ಇರುವುದಿಲ್ಲ. ಆಸಕ್ತಿ ಇದ್ದವರನ್ನು ಬೆಳೆಸಿ, ಪ್ರೋತ್ಸಾಹಿಸಲು ಶಿಕ್ಷಕರ ಅಗತ್ಯವಿದೆ. ಅವರಾದರೂ ಅರೆ ಹೊಟ್ಟೆಯಲ್ಲಿ ಶಿಕ್ಷಣ ನೀಡಲು ಸಾಧ್ಯವಿಲ್ಲ ಎಂದು ಹೇಳಿದರು.

ವಿದ್ಯಾರ್ಥಿಗಳು ಒಂದೇ ಅವಕಾಶಕ್ಕಾಗಿ ಕಾಯಬಾರದು. ಅವಕಾಶಗಳನ್ನು ಹುಡುಕಿಕೊಂಡು ಹೋಗಬೇಕು. ಕೃತಿ ಚೋರರಾಗದೆ ತಮ್ಮದೇ ಆದ ಶೈಲಿಯನ್ನು ರೂಢಿಸಿಕೊಂಡು ಬದುಕು ಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಬಿ.ಡಿ. ಕುಂಬಾರ ಮಾತನಾಡುತ್ತಾ, ಮುಂದಿನ ವರ್ಷ ದೃಶ್ಯಕಲಾ ಮಹಾವಿದ್ಯಾಲಯವು 60 ವರ್ಷಗಳನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಾಗಿ ಹೇಳಿದರು.

ಪ್ರಾಚಾರ್ಯ ಡಾ.ಜೈರಾಜ್ ಎಂ.ಚಿಕ್ಕಪಾಟೀಲ್ ಅತಿಥಿಗಳನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ರಾಜ್ಯದಲ್ಲಿ ಎಲ್ಲಾ ಸೌಲಭ್ಯಗಳನ್ನು ಒಳಗೊಂಡ ಏಕೈಕ ಕಾಲೇಜು ನಮ್ಮದಾಗಿದ್ದು, 127 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಪ್ರವೇಶಾತಿ ಹೆಚ್ಚಾಗಿರುವುದು ಹೆಮ್ಮೆಯ ವಿಚಾರ ಎಂದರು.

ಕಾಲೇಜಿನ ಹಿರಿಯ ವಿದ್ಯಾರ್ಥಿಗಳೂ ಆದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ ಸುಲೋಚನಾ ವೇಣುಗೋಪಾಲ್, ಹಿರಿಯ ವ್ಯಂಗ್ಯಚಿತ್ರ ಕಲಾವಿದ ಹೆಚ್.ಬಿ.ಮಂಜುನಾಥ್, ಸಾಹಿತಿ ಬಾ.ಮ. ಬಸವರಾಜಯ್ಯ ಹಾಗು ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಬೋಧನಾ ಸಹಾಯಕ ದತ್ತಾತ್ರೇಯ ಎನ್.ಭಟ್ ನಿರೂಪಿಸಿದರು. ವಿದ್ಯಾರ್ಥಿ ಮುರಳಿ ಕೃಷ್ಣ ಪ್ರಾರ್ಥಿಸಿದರು. ಸಹಾಯಕ ಪ್ರಾಧ್ಯಾಪಕ ಡಾ.ಸತೀಶ್ ಕುಮಾರ್ ಪಿ.ವಲ್ಲೇಪುರೆ ವಂದಿಸಿದರು.

### ಕಲೆ ದೇಶದ ಹೆಮ್ಮೆಯ ಪ್ರತೀಕ

ಅಜಂತಾ-ಎಲ್ಲೋರಗಳಲ್ಲಿ ನಮ್ಮ ಕಲಾ ಪರಂಪರೆ ಅನಾವರಣ ಗೊಂಡಿದೆ. ಅಲ್ಲಿನ ಗೋಪುರದ ಮಾದರಿ ಆಸಕ್ತಿಕರ ವಿಷಯವಾಗಿದೆ. ಇಂತಹ ಕಲೆ ನಮ್ಮ ದೇಶದ ಹೆಮ್ಮೆಯ ಪ್ರತೀಕ ಎಂದು ಡಾ.ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ರಾಜಕಾರಣಿಗಳು ತೆಗೆದುಕೊಂಡ ನಿರ್ಧಾರಗಳು ಜನ ಸಾಮಾನ್ಯರ ಮೇಲೆ ಉಂಟುಮಾಡುವ ಪ್ರಭಾಗಳ ಕುರಿತು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಆರ್.ಕೆ. ಲಕ್ಷ್ಮಣ್ ಅವರ ಕಾರ್ಟೂನ್‌ಗಳು ನನ್ನ ಗಮನ ಸೆಳೆಯುತ್ತಿದ್ದವು ಎಂದು ಇದೇ ವೇಳೆ ಹೇಳಿದರು.

# ಸಬ್ಸಿಡಿ ಯೋಜನೆ : ಸುಳ್ಳು ಸುದ್ದಿ ಆರೋಪದ ಮೇಲೆ ಸುದ್ದಿ ವಾಹಿನಿ ವಿರುದ್ಧ ಎಫ್‌ಐಆರ್

ಬೆಂಗಳೂರು, ಸೆ. 13 – ಅಲ್ಪಸಂಖ್ಯಾತರ ವಾಣಿಜ್ಯ ವಾಹನಗಳಿಗೆ ಸಬ್ಸಿಡಿ ನೀಡುವ ಯೋಜನೆಗೆ ಸಂಬಂಧಿಸಿದಂತೆ ಸುಳ್ಳು ಮಾಹಿತಿ ಹರಡಿದ ಆರೋಪದ ಮೇಲೆ ಹಿಂದಿ ಸುದ್ದಿ ವಾಹಿನಿಯೊಂದರ ವಿರುದ್ಧ ರಾಜ್ಯ ಪೊಲೀಸರು ಎಫ್.ಐ.ಆರ್. ದಾಖಲಿಸಿದ್ದಾರೆ.

ಐ.ಪಿ.ಸಿ. ಸೆಕ್ಷನ್ 505 ಹಾಗೂ 153ಎ ಅನ್ವಯ ಎಫ್.ಐ.ಆರ್. ದಾಖಲಿಸಲಾಗಿದೆ. ಕರ್ನಾಟಕ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದ ಸಹಾಯಕ ಆಡಳಿತಾಧಿಕಾರಿ ಶಿವಕುಮಾರ್ ಅವರು ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ ದೂರು ಆಧರಿಸಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಈ ಯೋಜನೆಯ ಬಗ್ಗೆ ಸುಳ್ಳು ಸುದ್ದಿ ಹರಡುವ ಮೂಲಕ ರಾಜ್ಯದಲ್ಲಿ ಕೋಮು ಸೌಹಾರ್ದತೆಗೆ ಧಕ್ಕೆ ತರುವ ಯತ್ನ ನಡೆಸಲಾಗಿದೆ ಎಂದು ಆಜ್ ತಕ್ ಸುದ್ದಿ ವಾಹಿನಿಯ ಸುಧೀರ್ ಚೌಧರಿ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ.


ಈ ಬಗ್ಗೆ ಪ್ರತಿಕ್ರಿಯಿಸಿರುವ ಚೌಧರಿ, ಕರ್ನಾಟಕದ ಕಾಂಗ್ರೆಸ್ ಸರ್ಕಾರ ನನ್ನ ವಿರುದ್ಧ ಎಫ್.ಐ.ಆರ್. ದಾಖಲಿಸಿರುವುದು ತಿಳಿದು ಬಂದಿದೆ. ಜಾಮೀನು ರಹಿತ ಸೆಕ್ಷನ್‌ಗಳ ಅನ್ವಯ ಪ್ರಕರಣ ದಾಖಲಿಸಲಾಗಿದೆ. ಈ ಬಗ್ಗೆ ಕಾನೂನು ಹೋರಾಟ ನಡೆಸಲು ಸಿದ್ಧನಿದ್ದೇನೆ ಎಂದು ಹೇಳಿದ್ದಾರೆ. ಕರ್ನಾಟಕ ಸರ್ಕಾರದ ಯೋಜನೆಯ ಅನ್ವಯ ಅಲ್ಪಸಂಖ್ಯಾತರಿಗೆ ಮಾತ್ರ ನೆರವು ನೀಡಲಾಗುತ್ತಿದೆ. ಅಲ್ಪಸಂಖ್ಯಾತೇತರ ಹಿಂದೂಗಳಿಗೆ ಯೋಜನೆ ನೆರವು ಸಿಗುತ್ತಿಲ್ಲ ಎಂದು ಸುದ್ದಿ ವಾಹಿನಿಯ ವರದಿಯಲ್ಲಿ ತಿಳಿಸಲಾಗಿತ್ತು.

ಈ ಬಗ್ಗೆ ಹೇಳಿಕೆ ನೀಡಿದ್ದ ಅಲ್ಪಸಂಖ್ಯಾತರ ನಿಗಮ, ದೇವರಾಜ ಅರಸ್ ಅಭಿವೃದ್ಧಿ ನಿಗಮ, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ವಾಲ್ಮೀಕಿ ಅಭಿವೃದ್ಧಿ ನಿಗಮ ಹಾಗೂ ಆದಿ ಜಾಂಬವ ಅಭಿವೃದ್ಧಿ ನಿಗಮಗಳ ಮೂಲಕ ಹಲವಾರು ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ. ಅಲ್ಪಸಂಖ್ಯಾತರಿಗಷ್ಟೇ ಅಲ್ಲದೇ, ಹಿಂದುಳಿದವರು, ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಯೋಜನೆಗಳಿವೆ. ಹಿಂದೂ ಸಮುದಾಯದ ನಿರುದ್ಯೋಗಿ ಯುವಕರಿಗೆ ಯೋಜನೆಗಳಿವೆ ಎಂದು ತಿಳಿಸಿತ್ತು.

# ಎಸ್ಟಿ ನಿಗಮ ಕಚೇರಿ ಸ್ಥಳಾಂತರ

ದಾವಣಗೆರೆ, ಸೆ.13- ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಯನ್ನು ನಗರದ ಶಾಮನೂರಿನ ಗ್ಲಾಸ್ ಹೌಸ್ ಪಕ್ಕದಲ್ಲಿರುವ ನೂತನ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.9591812109, 9035364337ಗೆ ಸಂಪರ್ಕಿಸಬಹುದೆಂದು ನಿಗಮದ ಜಿಲ್ಲಾ ವ್ಯವಸ್ಥಾಪಕ ಪಿ. ರಮೇಶ್ ತಿಳಿಸಿದ್ದಾರೆ.

# ಕೋಡಿ ಕ್ಯಾಂಪ್‌ನಲ್ಲಿ ನಾಳೆ ಅಮಾವಾಸ್ಯೆ



ದಾವಣಗೆರೆ, ಆ. 13 - ನಗರದ ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಸಮಿತಿಯಿಂದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ಬೆನಕನ ಅಮಾವಾಸ್ಯೆ ಪ್ರಯುಕ್ತ ನಾಡಿದ್ದು ಶುಕ್ರವಾರ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ಪಾದಗಳಿಗೆ 7 ರಿಂದ 9ರ ವರೆಗೆ ಅಭಿಷೇಕ, ವಿಶೇಷ ಪೂಜೆ ನಡೆಯಲಿದೆ. ನಂತರ ಭಕ್ತಾದಿಗಳಿಗೆ ಪ್ರಸಾದ ದಾಸೋಹ ನಡೆಯಲಿದೆ.

ಇದೇ ದಿನಾಂಕ 16ರ ಶನಿವಾರ ಬೆಳಿಗ್ಗೆ 6.30 ರಿಂದ 7.30ರ ವರೆಗೆ ವಿಶೇಷ ಪೂಜೆ, ಅಭಿಷೇಕ, ನಂತರ ಪ್ರಸಾದ ವಿನಿಯೋಗ ನಡೆಯಲಿದೆ. ಭಕ್ತಾದಿಗಳು ಆಗಮಿಸಿ, ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನ ಸಮಿತಿಯ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 88898), ಬಿ. ಚಿದಾನಂದಪ್ಪ (98445 28449), ಮಲ್ಲಾಬಾದಿ ಗುರುಬಸವರಾಜ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಲು ಕೋರಿದೆ.

# ಸಿರಿಗೆರೆ ಶಿವಕುಮಾರ ಶ್ರೀ ಶ್ರದ್ಧಾಂಜಲಿ ಕಾರ್ಯಕ್ರಮ

## ಬೆಳ್ಳೂಡಿಯಲ್ಲಿ ನಾಡಿದ್ದು ಭಕ್ತಿ ಸಮರ್ಪಣೆ



ಹರಿಹರ, ಸೆ. 13 – ಇದೇ ದಿನಾಂಕ 24 ರಂದು ಸಿರಿಗೆರೆ ಗ್ರಾಮದಲ್ಲಿ ನಡೆಯಲಿರುವ ತರಳಬಾಳು ಲಿಂಗೈಕ್ಯ ಜಗದ್ಗುರುಗಳಾದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ 31ನೇ ಶ್ರದ್ಧಾಂಜಲಿ ಸಮಾರಂಭದ ದಾಸೋಹಕ್ಕೆ ಹರಿಹರ ತಾಲ್ಲೂಕಿನಿಂದ ಭಕ್ತಿ ಸಮರ್ಪಣೆ ಕಾರ್ಯಕ್ರಮ ಬೆಳ್ಳೂಡಿ ಗ್ರಾಮದಲ್ಲಿ ನಾಡಿದ್ದು ದಿನಾಂಕ 16 ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯಲಿದೆ ಎಂದು ತಾಲ್ಲೂಕು ಸಾಧು ವೀರಶೈವ ಸಮಾಜದ ಪ್ರಧಾನ ಕಾರ್ಯದರ್ಶಿ ಇಟಗಿ ಶಿವಣ್ಣ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಸಮಾರಂಭವು ಬೆಳ್ಳೂಡಿಯ ಪಾಟೀಲ್ ಗುರುಬಸಪ್ಪ ಪ್ರೌಢಶಾಲಾ ಆವರಣದಲ್ಲಿ ನಡೆಯಲಿದೆ. ಇದಕ್ಕೂ ಮುನ್ನ ಬೆಳ್ಳೂಡಿ ಕ್ರಾಸ್‌ನಿಂದ ಶ್ರೀಗಳನ್ನು ಬೈಕ್ ರ್‍ಯಾಲಿ ಮೂಲಕ ಕರೆ ತರಲಾಗುವುದು ಎಂದವರು ಹೇಳಿದರು.

ಪಂಚಮಸಾಲಿ ಗುರುಪೀಠಾಧ್ಯಕ್ಷರಾದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ, ಶ್ರೀ ವಿನಯ ಗುರೂಜಿ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಬಿ.ಪಿ. ಹರೀಶ್, ಸಂಸದ ಜಿ.ಎಂ. ಸಿದ್ದೇಶ್ವರ, ತರಳಬಾಳು ಕೃಷಿ ಕೇಂದ್ರದ ಡಾ. ಡಿ.ಎನ್. ದೇವರಾಜ್, ತಾಲ್ಲೂಕು ಸಾಧು ವೀರಶೈವ ಸಮಾಜದ ಅಧ್ಯಕ್ಷ ಗೌಡ್ರು ಮಹಾದೇವಪ್ಪ ಅಮರಾವತಿ ಮತ್ತಿತರರು ಭಾಗವಹಿಸಲಿದ್ದಾರೆ.

ಬೆಳಿಗ್ಗೆ 10 ಗಂಟೆಯಿಂದ ಸಂಜೆಯವರೆಗೆ ರಕ್ತದಾನ ಶಿಬಿರ, ಉಚಿತ ಆರೋಗ್ಯ ತಪಾಸಣೆ, ನೇತ್ರ ತಪಾಸಣೆ ಶಿಬಿರವನ್ನು ಆಯೋಜಿಸಲಾಗಿದೆ.

ಹಲವು ವರ್ಷಗಳಿಂದ ಒಂದು ನೂರ ಒಂದು ಕ್ವಿಂಟಾಲ್ ಅಕ್ಕಿ ಸಮರ್ಪಣೆ ಮಾಡುತ್ತಾ ಬರಲಾಗಿತ್ತು.

ಆದರೆ, ಈ ಬಾರಿ ಮಠದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ 5 ಲಕ್ಷ ರೂಪಾಯಿ ದೇಣಿಗೆಯಾಗಿ ಮಠಕ್ಕೆ ಸಮರ್ಪಣೆ ಮಾಡಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಾಧು ವೀರಶೈವ ಸಮಾಜದ ಉಪಾಧ್ಯಕ್ಷ ಹಲಸಬಾಳು ಎಂ. ಶಿವಾನಂದಪ್ಪ, ಸಹ ಕಾರ್ಯದರ್ಶಿ ಕೆ.ಬಿ. ರುದ್ರೇಶ್ ಬೆಳ್ಳೂಡಿ, ಪಾಟೀಲ್ ಗುರುಬಸಪ್ಪ ಪ್ರೌಢಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಜಿ. ಹನುಮಂತಪ್ಪ ಗೌಡ್ರು ಮತ್ತಿತರರು ಉಪಸ್ಥಿತರಿದ್ದರು.

# ಸುವೆನ್ ಫಾರ್ಮಾದಲ್ಲಿ 9,589 ಕೋಟಿ ರೂ. ಹೂಡಿಕೆಗೆ ಅನುಮತಿ

ನವದೆಹಲಿ, ಸೆ. 13 – ಸಿಪ್ರಸ್ ಮೂಲದ ಬೆರ್‌ಹ್ಯಾಂಡಾ ಕಂಪನಿಯು ಸುವೆನ್ ಫಾರ್ಮಾಸ್ಯೂಟಿಕಲ್ಸ್‌ನಲ್ಲಿ 9,589 ಕೋಟಿ ರೂ.ಗಳ ವಿದೇಶಿ ಹೂಡಿಕೆ ಮಾಡಲು ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

ಈ ಹೂಡಿಕೆ ಮೂಲಕ ಸುವೆನ್ ಫಾರ್ಮಾ ಕಂಪನಿಯ ಶೇ. 76.1ರಷ್ಟು ಪಾಲುಗಾರಿಕೆಯನ್ನು ಬೆರ್‌ಹ್ಯಾಂಡಾ ಕಂಪನಿ ಖರೀದಿಸಲಿದೆ. ಈ ಕಂಪನಿಯಲ್ಲಿನ ಒಟ್ಟು ವಿದೇಶಿ ಹೂಡಿಕೆ ಶೇ.90.1ರವರೆಗೂ ತಲುಪಬಹುದು.

ಸೆಬಿ, ಆರ್.ಬಿ.ಐ., ಸಿ.ಸಿ.ಐ. ಹಾಗೂ ಇತರೆ ಸಂಬಂಧಿತ ಕಂಪನಿಗಳು ಪ್ರಸ್ತಾವನೆ ಪರಿಶೀಲಿಸಿದ ನಂತರ ಒಪ್ಪಿಗೆ ನೀಡಲಾಗಿದೆ.

ಫಾರ್ಮಾ ವಲಯದಲ್ಲಿ ವಿದೇಶಿ ನೇರ ಹೂಡಿಕೆಯ ಪ್ರಮಾಣ ಕಳೆದ ಐದು ವರ್ಷಗಳಲ್ಲಿ 43,713 ಕೋಟಿ ರೂ. ಆಗಿದೆ. ಕಳೆದ ವರ್ಷ ಈ ವಲಯದಲ್ಲಿ ಮಾಡಲಾಗುವ ವಿದೇಶಿ ಹೂಡಿಕೆ ಪ್ರಮಾಣ ಶೇ.58ರಷ್ಟು ಹೆಚ್ಚಾಗಿತ್ತು.

# ಹಾಡಗಲೇ ಮನೆಗೆ ನುಗ್ಗಿ ದರೋಡೆ

**(1ನೇ ಪುಟದಿಂದ)** ವರಿಷ್ಠಾಧಿ ಕಾರಿ ಸೇರಿದಂತೆ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಪೊಲೀಸ್ ಶ್ವಾನ ಕುಂದುವಾಡ ಕೆರೆ ವರೆಗೆ ಹೋಗಿ ನಿಂತಿದೆ ಎನ್ನಲಾಗಿದೆ. ದರೋಡೆಕೋರನ ಚಲನವಲನ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಪೊಲೀಸರು ದರೋಡೆ ಕೋರನ ಹುಡುಕಾಟದಲ್ಲಿದ್ದಾರೆ.

ಎಸ್ಪಿ ಉಮಾ ಪ್ರಶಾಂತ್ ಗಾಯಾಳು ರಾಜೇಶ್ವರಿ ಅವರನ್ನು ಭೇಟಿ ಮಾಡಿ ಸಾಂತ್ವನ ಹೇಳಿ, ಶೀಘ್ರವೇ ಕಳ್ಳನನ್ನು ಬಂಧಿಸಿ, ಶಿಕ್ಷೆ ಕೊಡಿಸುವುದಾಗಿ ಭರವಸೆ ನೀಡಿದ್ದಾರೆ. ಘಟನೆಯ ಪೂರ್ಣ ವಿವ ರನ್ನು ಮಾಧ್ಯಮದವರೊಂದಿಗೆ ಹಂಚಿಕೊಂಡಿರುವ ಪಾಲಿಕೆ ಮಾಜಿ ಮೇಯರ್ ಪಿ.ಜಿ. ಅಜಯ್ ಕುಮಾರ್, ನಗರದ ಹೊರ ವಲಯದ ನಾಗರಿಕರು ಎಚ್ಚರಿಕೆಯಿಂದ ಇರುವಂತೆ ಮನವಿ ಮಾಡಿದ್ದಾರೆ.

## ಅಣ್ಣಾಪುರದ ಸಣ್ಣಗೌಡ್ರ ಮುರುಗೇಂದ್ರಪ್ಪ ನಿಧನ



ದಾವಣಗೆರೆ ತಾಲ್ಲೂಕು ಅಣ್ಣಾಪುರ ಗ್ರಾಮದ ವಾಸಿ
ಶ್ರೀಮತಿ ಕಲ್ಲಮ್ಮನವರ ಪತಿಯವರಾದ

**ಶ್ರೀ ಮುರುಗೇಂದ್ರಪ್ಪ ಜಿ.ವಿ.**

ಇವರು, ದಿನಾಂಕ 13.09.2023ರ ಬುಧವಾರ ಮಧ್ಯಾಹ್ನ 2.50ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 51 ವರ್ಷ ವಯಸ್ಸಾಗಿತ್ತು ಹಾಗೂ ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14.09.2023ರ ಗುರುವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ತಾಲ್ಲೂಕು ಹೊನ್ನಾನಾಯಕನಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ : ಮೊ : 98803 12507**

## ಹೊಸಬೆಳವನೂರು ಗ್ರಾಮದ ಬಿ.ವೈ. ಗುರುಶಾಂತಪ್ಪ ನಿಧನ



ದಾವಣಗೆರೆ ಜಿ. ತಾ.
ಹೊಸಬೆಳವನೂರು ಗ್ರಾಮದ ವಾಸಿ

**ಶ್ರೀ ಬಿ.ವೈ. ಗುರುಶಾಂತಪ್ಪ (96)**

ಇವರು, ದಿ. 13.09.2023ರ ಬುಧವಾರ ಮಧ್ಯಾಹ್ನ 3 ಗಂಟೆಗೆ ನಿಧನರಾಗಿರುತ್ತಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಆಗಲಿರುವ ಮೃತರ ಅಂತ್ಯಕ್ರಿಯೆಯನ್ನು 14.09.2023ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಹೊಸಬೆಳವನೂರಿನ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು : ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಯಲವಟ್ಟಿ ವಂಶಸ್ಥರು, ದೊಡ್ಡ ಭರಮಪ್ಪಳ ವಂಶಸ್ಥರು, ಹೊಸಬೆಳವನೂರು.

# ಜಿಗಳಿಯಲ್ಲಿ ಇಂದು ಉಚಿತ ದಂತ ತಪಾಸಣೆ

ಮಲೇಬೆನ್ನೂರು : ಸಮೀಪದ ಜಿಗಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಗುರುವಾರ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2 ಗಂಟೆವರೆಗೆ ಮಲೇಬೆನ್ನೂರು ಲಯನ್ಸ್ ಕ್ಲಬ್ ಮತ್ತು ದಾವಣಗೆರೆಯ ಬಾಪೂಜಿ ದಂತ ವೈದ್ಯಕೀಯ ಕಾಲೇಜ್ ಹಾಗೂ ಆಸ್ಪತ್ರೆ ವತಿಯಿಂದ ಉಚಿತ ದಂತ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಲಯನ್ಸ್ ಕ್ಲಬ್ ಅಧ್ಯಕ್ಷ ಚಿಟ್ಟಕ್ಕಿ ನಾಗರಾಜ್ ತಿಳಿಸಿದ್ದಾರೆ.

## ಕಮಲಮ್ಮ ಜಕಣಾಚಾರಿ ನಿಧನ



ದಾವಣಗೆರೆ ಸಿಟಿ ಹೊಂಡದ ಸರ್ಕಲ್ ಹತ್ತಿರದ ವಾಸಿ ದಿ. ಜಕಣಾಚಾರಿ ಇವರ ಧರ್ಮಪತ್ನಿ ಕಮಲಮ್ಮ ಜಕಣಾಚಾರಿ (76) ಇವರು ದಿನಾಂಕ 13.09.2023 ಬುಧವಾರ ಸಂಜೆ 6ಕ್ಕೆ ನಿಧನರಾದರು. ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂದು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.09.2023 ಮಧಾಹ್ನ 1 ಗಂಟೆಗೆ ಗ್ಲಾಸ್ ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

# ಹರಿಹರದಲ್ಲಿ ಇಂದು ದಸರಾ ಕ್ರೀಡಾಕೂಟದ ಬಹುಮಾನ ವಿತರಣೆ

ಹರಿಹರ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟದ ಬಹುಮಾನ ವಿತರಣೆ ಸಮಾರಂಭವು ಇಂದು ಸಂಜೆ 4.30 ಗಂಟೆಗೆ ಶ್ರೀ ವಾಲ್ಮೀಕಿ ಮಹಾಸಂಸ್ಥಾನ ವಿದ್ಯಾಪೀಠ ರಾಜನಹಳ್ಳಿಯಲ್ಲಿ ನಡೆಯಲಿದೆ ಎಂದು ತಾಲ್ಲೂಕು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅಧಿಕಾರಿ ಎಸ್. ಶ್ರೀಶೈಲ ತಿಳಿಸಿದ್ದಾರೆ. ಸಾನ್ನಿಧ್ಯವನ್ನು ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದ ಸ್ವಾಮೀಜಿ ವಹಿಸಲಿದ್ದಾರೆ. ಬಹುಮಾನ ವಿತರಣೆ ಶಾಸಕ ಬಿ.ಪಿ. ಹರೀಶ್ ಮಾಡಲಿದ್ದಾರೆ. ಅಧ್ಯಕ್ಷತೆಯನ್ನು ರಾಜನಹಳ್ಳಿ ಗ್ರಾಪಂ ಅಧ್ಯಕ್ಷೆ ಶಕುಂತಲಮ್ಮ ಯಲ್ಲಪ್ಪ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಗ್ರಾಪಂ ಉಪಾಧ್ಯಕ್ಷ ಪರಶುರಾಮಪ್ಪ ನೆಶ್ವಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಕೆ.ಆರ್. ಜಯಲಕ್ಷ್ಮಿ ಬಾಯಿ, ತಾಪಂ ಇಓ ಎನ್. ರವಿ, ವಾಲ್ಮೀಕಿ ಗುರುಪೀಠದ ಆಡಳಿತಾಧಿಕಾರಿ ಟಿ. ಓಬಳಪ್ಪ, ಧರ್ಮದರ್ಶಿ ಕೆ.ಬಿ. ಮಂಜುನಾಥ್, ವಾಲ್ಮೀಕಿ ವಸತಿಯುತ ಪ್ರೌಢಶಾಲಾ ಮುಖ್ಯೋಪಾಧ್ಯಾಯ ಕೆ. ಸಿದ್ದೇಶ್, ಪ್ರಾಥಮಿಕ ಶಾಲೆ ಮುಖ್ಯೋಪಾಧ್ಯಾಯ ರವಿಕುಮಾರ್, ವ್ಯವಸ್ಥಾಪಕ ಭೀಮಣ್ಣ ಬೊಮ್ಮಕ್ಕನವರ್ ಮತ್ತಿತರರು ಭಾಗವಹಿಸಲಿದ್ದಾರೆ.

# ನಾಳೆ ಸರ್ ಎಂ.ವಿ. ಫೌಂಡೇಷನ್ ದಿನ

ದಾವಣಗೆರೆ, ಸೆ. 13- ಸರ್ ಎಂ.ವಿ. ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ವತಿಯಿಂದ ಸರ್ ಎಂ.ವಿ. ಫೌಂಡೇಷನ್ ದಿನ ವನ್ನು ನಾಡಿದ್ದು ದಿನಾಂಕ 15ರ ಮಧ್ಯಾಹ್ನ 12.30ಕ್ಕೆ ನಡೆಸಲಾಗುವುದು.

ಸರ್ ಎಂ.ವಿ. ಕಾಲೇಜಿನ ಹೊಸ ಕಟ್ಟಡದ ಆವರಣದಲ್ಲಿ ನಡೆಯುವ ಕಾರ್ಯಕ್ರಮದ ಬೆಂಗಳೂರಿನ ಶ್ರೀ ಜ ಯ ದೇವ ಇನ್‌ಸ್ಟಿಟ್ಯೂಟ್ ಆಫ್ ಹೃದಯರೋಗ ತಜ್ಞ ಡಾ. ಸಿ.ಎಂ. ನಾಗೇಶ್ ವಹಿಸಲಿದ್ದು, ವಿಶೇಷ ಆಹ್ವಾನಿತರಾಗಿ ವಾಣಿಜ್ಯ ತೆರಿಗೆಗಳ ಉಪ ಆಯುಕ್ತ ಶ್ರೀ ಪರಮೇಶ್ವರಗೌಡ ಅವರು ಆಗಮಿಸಲಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಬಗೆಹರಿಯದ ಬಾಕಿ ವೇತನ ಸಮಸ್ಯೆ : ಮತ್ತೆ ಪ್ರತಿಭಟನೆ ಆರಂಭಿಸಿದ ಹೊರ ಗುತ್ತಿಗೆ ನೌಕರರು



ಮಲೇಬೆನ್ನೂರು, ಸೆ.13- ಇಲ್ಲಿನ ಭದ್ರಾ ನಾಲಾ ನಂ. 3 ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಕಚೇರಿ ವ್ಯಾಪ್ತಿಯ ಹೊರಗುತ್ತಿಗೆ ನೌಕರರು ಬಾಕಿ ವೇತನ ಪಾವತಿಗೆ ಆಗ್ರಹಿಸಿ, ಮಂಗಳವಾರದಿಂದ ಮತ್ತೆ ಪ್ರತಿಭಟನೆ ಆರಂಭಿಸಿದ್ದಾರೆ.

ಆ. 22 ರಂದು ಅಧಿಕಾರಿಗಳು ಸೆ. 11 ರೊಳಗೆ ಹೊರಗುತ್ತಿಗೆ ನೌಕರರ 5 ತಿಂಗಳ ಬಾಕಿ ವೇತನ ಪಾವತಿ ಮಾಡುವುದಾಗಿ ಭರವಸೆ ನೀಡಿದ್ದರು. ಅಧಿಕಾರಿಗಳ ಹಾಗೂ ಜನಪ್ರತಿನಿಧಿಗಳ ಭರವಸೆ ನಂಬಿ ರೈತರ ಹಿತ ಕಾಪಾಡುವ ನಿಟ್ಟಿನಲ್ಲಿ ನೌಕರರು ಪ್ರತಿಭಟನೆ ಹಿಂದಕ್ಕೆ ಪಡೆದಿದ್ದರು.

ಆದರೆ ಈಗ ಟೆಂಡರ್ ಪ್ರಕ್ರಿಯೆ ನೆನೆಗುದಿಗೆ ಬಿದ್ದಿದ್ದು ಇಎಸ್ಐ ಭವಿಷ್ಯನಿಧಿ ಸಮಸ್ಯೆ ಉದ್ಭವಿಸಿದೆ ಎಂದು ಮಾಹಿತಿ ನೀಡಿದ ದಿನಗೂಲಿ ನೌಕರರ ಅಧ್ಯಕ್ಷ ಎ.ಕೆ. ಆಂಜನೇಯ ಅವರು, ಹಿರಿಯ ಅಧಿಕಾರಿಗಳು ಕೂಡಲೇ ನಮ್ಮ ಸಮಸ್ಯೆ ಪರಿಹರಿಸಿ ವೇತನ ಪಾವತಿ ಮಾಡುವಂತೆ ಪಟ್ಟುಹಿಡಿದರು.

ವೇತನ ಇಲ್ಲದೆ ಹೊರಗುತ್ತಿಗೆ ನೌಕರರು ಬೀದಿಗೆ ಬಿದ್ದಿದ್ದಾರೆ. ನೌಕರರು ಸತ್ತರೂ ಯಾರೂ ಕೇಳುತ್ತಿಲ್ಲ ಎಂದು ಹರಿಹಾಯ್ದರು.

ಪ್ರಭಾರಿ ಕಾರ್ಯಪಾಲಕ ಎಂಜಿನಿಯರ್ ಮಂಜುನಾಥ್ ಆಗಮಿಸಿ ಸಮಸ್ಯೆ ಆಲಿಸಿ, ಗುತ್ತಿಗೆದಾರ ಪ್ರಕಾಶ್ ಎಂಬುವವರ ಜೊತೆ ದೂರವಾಣಿ ಮೂಲಕ ಚರ್ಚೆ ನಡೆಸಿದರೂ ಫಲ ನೀಡಲಿಲ್ಲ.

ಕೊನೆಗೆ ರೈತ ಮುಖಂಡ ಮಲ್ಲನಾಯ್ಕನಹಳ್ಳಿ ಬಿ.ಎಂ. ಶೇಖರಪ್ಪ ಮಧ್ಯ ಪ್ರವೇಶಿಸಿ ನಿಮ್ಮ ಇಲಾಖೆ ಹಾಗೂ ಹೊರ ಗುತ್ತಿಗೆ ನೌಕರರ ನಡುವೆ ರೈತರು ಸಾಯುತ್ತಿದ್ದಾರೆ. ತೋಟಕ್ಕೂ ನೀರು ಹಾಯಿಸಲು ಆಗುತ್ತಿಲ್ಲ. ಸೌಡಿಗಳು ಇಲ್ಲದೆ ನೀರು ಹರಿಸುವುದು ಅಸಾಧ್ಯ ಎಂದು ಇಂಜಿನಿಯರ್ ಜೊತೆ ವಾಗ್ವಾದ ನಡೆಸಿದರು.

ರೈತ ಮುಖಂಡ ಹೊಳೆಸಿರಿಗೆರೆ ತಿಪ್ಪೇರುದ್ರಪ್ಪ ಮಾತನಾಡಿ, ಅನಧಿಕೃತ ಪಂಪ್‌ಸೆಟ್ ತೆರವಿನ ಬಗ್ಗೆ ಅಧಿಕಾರಿಗಳು ನಾಟಕ ಮಾಡುತ್ತಿದ್ದಾರೆ. ನಾಲೆಯಲ್ಲಿ ನೀರು ಹರಿದು ಬರುತ್ತಿಲ್ಲ ಎಂದು ನ್ಯಾಯಾಂಗ ನಿಂದನಾ ಅರ್ಜಿ ಸಲ್ಲಿಸುವುದಾಗಿ ತಿಳಿಸಿದರು.

ಕಾರ್ಯಪಾಲಕ ಎಂಜಿನಿಯರ್ ಮಂಜುನಾಥ್ ಅವರು ವೇತನ ಸಮಸ್ಯೆ ಪರಿಹರಿಸಲು ಸೆ. 20 ರ ತನಕ ಕಾಲಾವಕಾಶ ನೀಡಿ ಎಂದು ನೌಕರರಿಗೆ ಭರವಸೆ ನೀಡಿದರು. ಈ ಭರವಸೆಯನ್ನು ಒಪ್ಪದ ದಿನಗೂಲಿ ನೌಕರರು ಬುಧವಾರವೂ ಧರಣಿ ಮುಂದುವರೆಸಿದ್ದಾರೆ.

ಮಲೇಬೆನ್ನೂರು, ಬಸವಾಪಟ್ಟಣ, ಸಾಸ್ವೇಹಳ್ಳಿ ಉಪವಿಭಾಗಗಳ ವ್ಯಾಪ್ತಿಯ 300ಕ್ಕೂ ಹೆಚ್ಚು ಹೊರಗುತ್ತಿಗೆ ನೌಕರರ ಜೊತೆಗೆ ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ರೈತರೂ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಕಾವೇರಿ : ತಜ್ಞರೊಂದಿಗೆ ಚರ್ಚಿಸಿ, ತೀರ್ಮಾನ

**ಸರ್ವಪಕ್ಷಗಳ ಸಭೆ ನಂತರ ಸರ್ಕಾರದ ತೀರ್ಮಾನ**

ಬೆಂಗಳೂರು, ಸೆ. 13 - ಕಾವೇರಿ ನದಿ ನೀರು ಹಂಚಿಕೆ ವಿವಾದದಲ್ಲಿ ರಾಜ್ಯದ ರೈತರ ಹಿತ ಕಾಪಾಡಲು ತೀರ್ಮಾನಿಸಿರುವ ರಾಜ್ಯ ಸರ್ಕಾರ ಕಾನೂನು ತಜ್ಞರೊಂದಿಗೆ ಸಮಾಲೋಚನೆ ನಡೆಸಿದ ನಂತರ ಮುಂದಿನ ನಿರ್ಣಯ ಕೈಗೊಳ್ಳಲಿದೆ.

ಜಲಸಂಪನ್ಮೂಲ ಇಲಾಖೆ ಹೊಣೆ ಹೊತ್ತಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದೇ ದೆಹಲಿಗೆ ತೆರಳಿ ಸುಪ್ರೀಂ ಕೋರ್ಟಿನಲ್ಲಿ ಕಾವೇರಿ ವಿಚಾರವಾಗಿ ರಾಜ್ಯ ಪ್ರತಿನಿಧಿಸುವ ಕಾನೂನು ತಜ್ಞರೊಂದಿಗೆ ಸಮಾಲೋಚನೆ ನಡೆಸಿ ರಾಜ್ಯದ ನಿಲುವಿನ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ.

ಕಾವೇರಿ ಜಲಾನಯನ ಭಾಗದಿಂದ ತಮಿಳು ನಾಡಿಗೆ ಮುಂದಿನ 15 ದಿನಗಳ ಕಾಲ ಪ್ರತಿನಿತ್ಯ 5 ಸಾವಿರ ಕ್ಯೂಸೆಕ್ಸ್ ನೀರು ಹರಿಸುವ ಬಗ್ಗೆ ಕಾನೂನು ತಜ್ಞರ ಸಲಹೆ ಪಡೆದು ಅಂತಿಮ ತೀರ್ಮಾನ ಕೈಗೊಳ್ಳಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಕಾವೇರಿ ಜಲ ನಿಯಂತ್ರಣ ಸಮಿತಿ ತಮಿಳುನಾಡಿಗೆ ನೀರು ಹರಿಸುವಂತೆ ಆದೇಶಿಸಿದ ಬೆನ್ನಲ್ಲೇ ಮುಂದೇನು ಮಾಡಬೇಕು ಎಂಬ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ಸಂಪುಟದ ಸಹೋದ್ಯೋಗಿಗಳು, ಸಂಸದರು, ಶಾಸಕರು, ನೀರಾವರಿ ಹಾಗೂ ಕಾನೂನು ತಜ್ಞರೊಂದಿಗೆ ಸರ್ವಪಕ್ಷಗಳ ಸಭೆ ನಡೆಸಿದ ನಂತರ ಈ ನಿಲುವು ತೆಗೆದುಕೊಂಡಿದ್ದಾರೆ.

ಜಲ ನಿಯಂತ್ರಣ ಸಮಿತಿ ಆದೇಶಿಸಿರುವಂತೆ ತಮಿಳುನಾಡಿಗೆ ನೀರು ಹರಿಸಬೇಕೇ? ಇಲ್ಲವೇ ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸುವ ಬಗ್ಗೆ ತಜ್ಞರು ನೀಡುವ ಸಲಹೆ ಆಧರಿಸಿ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ.

ಈ ನಡುವೆ ಕಾವೇರಿ ಜಲ ನಿಯಂತ್ರಣ ಸಮಿತಿಗೆ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಲಾಗುವುದು. ಸುಪ್ರೀಂ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿ ನ್ಯಾಯಾಲಯಕ್ಕೆ ವಾಸ್ತವಾಂಶ ಮನವರಿಕೆ ಮಾಡಿಕೊಡಲು ಸಭೆ ತೀರ್ಮಾನಿಸಿದೆ.

ಇಂದಿನ ಸಭೆಗೆ ಮಾಜಿ ಮುಖ್ಯಮಂತ್ರಿಗಳು, ಸರ್ವಪಕ್ಷಗಳ ಮುಖಂಡರು, ರಾಜ್ಯವನ್ನು ಪ್ರತಿನಿಧಿಸುವ ಸಂಸದರಿಗೆ ಆಹ್ವಾನಿಸಲಾಗಿತ್ತು. ವಿರೋಧಿ ಪಾಳೆಯ, ಮಾಜಿ ಮುಖ್ಯಮಂತ್ರಿಗಳು ಹಾಜರಿರಲಿಲ್ಲ. ಆದರೆ, ಹಾಜರಿದ್ದ ಕೆಲವು ಸಂಸದರು, ಶಾಸಕರು ಸಲಹೆ, ಸೂಚನೆ ನೀಡಿದರು.

ಸಭೆಯ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ್ದಲ್ಲದೆ, ತಮಿಳುನಾಡಿಗೆ ನೀರು ಬಿಡಬೇಕು ಎಂಬ ಆದೇಶ ಬಂದ ಕೂಡಲೇ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ಏಕ ಪಕ್ಷೀಯವಾಗಿ ಸರ್ಕಾರ ತೀರ್ಮಾನ ಮಾಡಬಾರದೆಂದು ತುರ್ತಾಗಿ ಸರ್ವ ಪಕ್ಷಗಳ ಸಭೆ ಕರೆಯಲಾಯಿತು ಎಂದರು.

ಸಾಮಾನ್ಯ ವರ್ಷದಲ್ಲಿ ತಮಿಳು ನಾಡಿಗೆ 99 ಟಿಎಂಸಿ ನೀರು ಕೊಡಬೇಕಾಗಿತ್ತು. ಸೆ.11 ವರೆಗೆ 37.7 ಟಿಎಂಸಿ ನೀರು ಬಿಡಲಾಗಿದೆ. ನಮಗೆ 70 ಟಿಎಂಸಿ ನೀರು ಬೆಳೆ ಉಳಿಸಿಕೊಳ್ಳಲು ಬೇಕು. 33 ಟಿಎಂಸಿ ಕುಡಿಯುವ ನೀರಿಗಾಗಿ ಬೇಕು. ಜೊತೆಗೆ 3 ಟಿಎಂಸಿ ಕೈಗಾರಿಕೆಗಳಿಗೆ ಬೇಕು. ಆದರೆ, ಇದೀಗ ಲಭ್ಯವಿರುವುದು ನಾಲ್ಕೂ ಜಲಾಶಯಗಳಿಂದ 53 ಟಿಎಂಸಿ ನೀರು. ಬೆಳೆಗಳಿಗೆ ಕಟ್ಟು ನೀರು ಬಿಡಲಾಗುತ್ತಿದೆ. ಅಧಿಕಾರಿಗಳು ರಾಜ್ಯದ ಪರಿಸ್ಥಿತಿ, ವಾಸ್ತವಾಂಶ ತಿಳಿಸಿದರೂ ನೀರು ಬಿಡುವಂತೆ ಸೂಚಿಸಿದ್ದಾರೆ.

ಎಲ್ಲ ಸಂಸದರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಬೇಕು. ನಮ್ಮ ರಾಜಕೀಯ ಒಲವು, ನಿಲುವುಗಳನ್ನು ಬದಿಗಿಟ್ಟು, ರಾಜ್ಯದ ಹಿತಾಸಕ್ತಿಯ ದೃಷ್ಟಿಯಿಂದ ಒಟ್ಟಿಗೆ ಕೆಲಸ ಮಾಡೋಣ ಎಂಬ ತೀರ್ಮಾನ ಮಾಡಿದ್ದೇವೆ ಎಂದು ಹೇಳಿದರು.

ಕಾವೇರಿ ನೀರು ನಿಯಂತ್ರಣ ಸಮಿತಿಯು 10 ಸಾವಿರ ಕ್ಯೂಸೆಕ್ಸ್ ನೀರು ಬಿಡುವಂತೆ ಆದೇಶ, ನಂತರ ಐದು ಸಾವಿರ ಮತ್ತೆ ನಿನ್ನೆ ಐದು ಸಾವಿರ ಕ್ಯೂಸೆಕ್ಸ್ ನೀರು ಬಿಡುವಂತೆ ಆದೇಶ ಮಾಡಿದೆ.

ಸರ್ವಪಕ್ಷ ನಿಯೋಗ ತೆರಳಲು ಅನುವು ಮಾಡಿಕೊಡುವಂತೆ ಪ್ರಧಾನಮಂತ್ರಿಯವರ ಸಮಯ ಕೇಳಿ ಮತ್ತೊಮ್ಮೆ ಪತ್ರ ಬರೆಯಲಾಗುವುದು.

## 17 ರಂದು ಸರ್ವ ಪಕ್ಷಗಳ ಸಭೆ

ನವದೆಹಲಿ, ಸೆ. 13- ಸಂಸತ್ತಿನ ಐದು ದಿನಗಳ ವಿಶೇಷ ಅಧಿವೇಶನ ಆರಂಭವಾಗುವ ಮುನ್ನಾ ದಿನವಾದ ಸೆಪ್ಟೆಂಬರ್ 17ರಂದು ಸರ್ವ ಪಕ್ಷಗಳ ಸಭೆ ಕರೆಯಲಾಗಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ತಿಳಿಸಿದ್ದಾರೆ.

ಸೆಪ್ಟೆಂಬರ್ 18ರಿಂದ ಐದು ದಿನಗಳ ವಿಶೇಷ ಅಧಿವೇಶನ ನಡೆಸಲಾಗುವುದು ಎಂದು ಕೇಂದ್ರ ಸರ್ಕಾರ ಆಗಸ್ಟ್ 31ರಂದು ತಿಳಿಸಿತ್ತು. ಅಧಿವೇಶನದ ಅಜೆಂಡಾ ಬಗ್ಗೆ ಇನ್ನೂ ಘೋಷಣೆ ಆಗಿಲ್ಲ. ಆದರೆ, ಈ ಅವಧಿಯಲ್ಲಿ ನೂತನ ಸಂಸತ್ ಭವನ ಉದ್ಘಾಟನೆಯಾಗಲಿದೆ. ಮಹಿಳಾ ಮೀಸಲಾತಿ ಮಸೂದೆ, ಏಕರೂಪ ನಾಗರಿಕ ಸಂಹಿತೆ, ಏಕಕಾಲದ ಚುನಾವಣೆ ಸೇರಿದಂತೆ ಹಲವು ವಿಷಯಗಳ ಸಾಧ್ಯತೆ ಕುರಿತು ಚರ್ಚೆಗಳು ಕೇಳಿ ಬರುತ್ತಿವೆ.

ಸಂಸದರೂ ಹೋರಾಟ ಮಾಡುವ ಭರವಸೆ ನೀಡಿದ್ದಾರೆ.

18 ರಿಂದ ಸಂಸತ್ ಅಧಿವೇಶನ ಪ್ರಾರಂಭವಾಗಲಿದ್ದು, ಈ ಸಂದರ್ಭದಲ್ಲಿ ಕೇಂದ್ರ ಸಚಿವರು ಹಾಗೂ ಸಂಸದರೊಂದಿಗೆ ದೆಹಲಿಯಲ್ಲಿ ಸಭೆ ನಡೆಸಿ ಚರ್ಚಿಸಿ, ದೇಶದ ಗಮನ ಸೆಳೆಯಲಾಗುವುದು. ಇದಕ್ಕೆ ಎಲ್ಲರೂ ಸಹಮತಿ ಸೂಚಿಸಿದ್ದಾರೆ ಎಂದು ತಿಳಿಸಿದರು.

ಈ ವರ್ಷದ ಆಗಸ್ಟ್ ತಿಂಗಳಿನಲ್ಲಿ ಕಳೆದ 123 ವರ್ಷಗಳ ಇದೇ ಅವಧಿಗೆ ಹೋಲಿಸಿದರೆ ಅತಿ ಕಡಿಮೆ ಮಳೆಯಾಗಿದೆ. ಅತೀ ಕಡಿಮೆ ನೀರು ಸಂಗ್ರಹವಿದೆ. ಈ ಹಿನ್ನೆಲೆಯಲ್ಲಿ ನೀರಿನ ಕೊರತೆ ಇರುವುದರಿಂದ ಕೈಗೊಳ್ಳಬಹುದಾದ ಕಾನೂನು ಕ್ರಮಗಳು, ರಾಜಕೀಯ ಕ್ರಮಗಳು ಹಾಗೂ ಕೇಂದ್ರ ಸರ್ಕಾರದ ನೆರವು ಕೋರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು ಎಂದವರು ಹೇಳಿದರು.

## ತಾಲ್ಲೂಕುಗಳು ಬರ ಪೀಡಿತ

(1ನೇ ಪುಟದಿಂದ) ರೂ. ಇದ್ದು, ಅದನ್ನು ಬಳಕೆ ಮಾಡಿಕೊಳ್ಳುವಂತೆ ಆದೇಶ ಮಾಡಿದ್ದೇವೆ.

ಇನ್ನೂ ಕುಡಿಯುವ ನೀರಿಗಾಗಿ ನಮ್ಮ ಇಲಾಖೆಯಲ್ಲಿ 400 ಕೋಟಿ ರೂ. ಮೀಸಲಿಟ್ಟಿದ್ದು, ರಾಸುಗಳಿಗೆ ಮೇವು ಬೆಳೆಯಲು ಬಿತ್ತನೆ ಬೀಜಕ್ಕಾಗಿ ಇಂದು 20 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ಕಂದಾಯ ಸಚಿವರು ತಿಳಿಸಿದರು.

ಕುಡಿಯುವ ನೀರಿಗಾಗಿ ಕೊಳವೆ ಬಾವಿಗಳು ವಿಫಲವಾದರೆ, ಟ್ಯಾಂಕರ್ ಮೂಲಕ ಹಾಗೂ ಖಾಸಗಿ ಕೊಳವೆ ಬಾವಿಗಳಿಂದ ನೀರು ಪಡೆದು ಒದಗಿಸಬೇಕು. ಇದಕ್ಕಾಗಿ ಮುಖ್ಯಮಂತ್ರಿಗಳು ಎಲ್ಲಾ ಸಿಇಓಗಳಿಗೆ ತಲಾ ಒಂದು ಕೋಟಿ ರೂ. ನಿನ್ನೆ ಬಿಡುಗಡೆ ಮಾಡಿದ್ದಾರೆ.

ನಾಳೆ ನಡೆಯುವ ಸಂಪುಟ ಸಭೆಯಲ್ಲಿ ಅಧಿಕೃತವಾಗಿ ಬರ ಘೋಷಣೆ ಮಾಡಿದ ನಂತರ ರೈತರಿಗೆ ಬೆಳೆ ಪರಿಹಾರ ಸೇರಿದಂತೆ ಮುಂದಿನ ಕ್ರಮಗಳನ್ನು ಯುದ್ಧೋಪಾದಿಯಲ್ಲಿ ಕೈಗೊಳ್ಳುತ್ತೇವೆ. ಇದಕ್ಕಾಗಿ ಎಷ್ಟೇ ಹಣ ಖರ್ಚಾದರೂ ನೀಡುವುದಾಗಿ ಮುಖ್ಯಮಂತ್ರಿ ಅವರು ಜಿಲ್ಲಾಧಿಕಾರಿಗಳ ಸಭೆಯಲ್ಲಿ ತಿಳಿಸಿರುವುದಾಗಿ ಹೇಳಿದರು.

ಭತ್ತ ಸೇರಿದಂತೆ ಈಗಾಗಲೇ ಬಿತ್ತನೆಯಾಗಿರುವ ಬೆಳೆಯ ಕಟಾವು ಮುಗಿದ ನಂತರ ಲಭ್ಯವಾಗುವ ಮೇವನ್ನು ಸಂಗ್ರಹಿಸಿಡಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಮಳೆ ಕೊರತೆಯ ಹಿನ್ನೆಲೆಯಲ್ಲಿ ರೈತರಿಗೆ ಸಮರ್ಪಕ ಪ್ರಮಾಣದ ವಿದ್ಯುತ್ ಪೂರೈಸಿದರೆ ಉಳಿದ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುತ್ತದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಅವರು, ವಿದ್ಯುತ್ ಕೊರತೆ ಇರುವುದು ನಿಜವಾದರೂ ರೈತರಿಗೆ ಗಣನೀಯ ಪ್ರಮಾಣದಲ್ಲಿ ವಿದ್ಯುತ್ ನೀಡಲಾಗುತ್ತಿದೆ.

ಹೆಚ್ಚುವರಿ ವಿದ್ಯುತ್ತನ್ನು ಹೊರರಾಜ್ಯಗಳಿಂದ ಖರೀದಿ ಮಾಡಲು ತೀರ್ಮಾನಿಸಲಾಗಿದೆ. ಆದರೆ ಮಳೆಯ ಕೊರತೆಯಿಂದ ಬೇರೆ ರಾಜ್ಯಗಳಲ್ಲೂ ವಿದ್ಯುತ್ ಕೊರತೆ ಇದೆ ಎಂದು ಹೇಳಿದರು.

# ಡಿ.ಬಿ.ಎಸ್. ಬ್ಯಾಂಕ್ ವಿರುದ್ಧದ ಪ್ರಕರಣ ತಳ್ಳಿ ಹಾಕಿದ ಸುಪ್ರೀಂ

ನವದೆಹಲಿ, ಸೆ. 13 – ಸ್ಥಿರ ಠೇವಣಿಗಳ ದುರ್ಬಳಕೆ ಆರೋಪಕ್ಕೆ ಸಂಬಂಧಿಸಿದಂತೆ ಡಿ.ಬಿ.ಎಸ್. ಬ್ಯಾಂಕ್ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ. ಈ ಪ್ರಕರಣ ಮುಂದುವರೆಸಲು ಅವಕಾಶ ನೀಡಿದರೆ ನ್ಯಾಯದ ಅಣಕವಾಡಿದಂತೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಲಕ್ಷ್ಮಿ ವಿಲಾಸ್ ಬ್ಯಾಂಕ್ (ಎಲ್.ವಿ.ಬಿ.) ಅನ್ನು ಸಿಂಗಪುರದ ಡಿ.ಬಿ.ಎಸ್. ಬ್ಯಾಂಕ್‌ನಲ್ಲಿ ನವೆಂಬರ್ 27, 2020ರಂದು ವಿಲೀನಗೊಳಿಸಲಾಗಿತ್ತು. ಅದಕ್ಕೂ ಮುಂಚೆ, ಎಲ್.ವಿ.ಬಿ. ಬ್ಯಾಂಕ್‌ನಲ್ಲಿ ಇರಿಸಲಾಗಿದ್ದ 791 ಕೋಟಿ ರೂ.ಗಳ ತನ್ನ ಸ್ಥಿರ ಠೇವಣಿ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ರೆಲಿಗೇಟ್ ಫಿನ್‌ವೆಸ್ಟ್ ಲಿಮಿಟೆಡ್ ಕಂಪನಿ ದೂರು ನೀಡಿತ್ತು.

ಈ ಸಂಬಂಧ, ಲಕ್ಷ್ಮಿ ವಿಲಾಸ್ ಬ್ಯಾಂಕ್‌ನ ನಾಲ್ವರು ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಬ್ಯಾಂಕ್ ವಿಲೀನದ ನಂತರ ಈ ಅಧಿಕಾರಿಗಳ ವಿರುದ್ಧ ಕ್ರಮ ಮುಂದುವರೆಯಲಿದೆ. ಆದರೆ, ವಿಲೀನಕ್ಕೆ ಮುಂಚೆ ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ, ಡಿ.ಎಲ್.ಬಿ. ವಿರುದ್ಧ ಕ್ರಮ ತೆಗೆದುಕೊಳ್ಳಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಲಕ್ಷ್ಮಿ ವಿಲಾಸ್ ಬ್ಯಾಂಕ್ ಸಮಸ್ಯೆ ಎದುರಿಸುತ್ತಿತ್ತು. ಆಗ ಬ್ಯಾಂಕಿಂಗ್ ಉದ್ಯಮದ ವಿಶ್ವಾಸದ ಪ್ರಶ್ನೆ ಎದುರಾಗಿತ್ತು. ಲಕ್ಷ್ಮಿ ವಿಲಾಸ್ ಬ್ಯಾಂಕ್ ಮೇಲೆ ರಿಸರ್ವ್ ಬ್ಯಾಂಕ್ ನಿರ್ಬಂಧ ಹೇರಿತ್ತು ಮತ್ತು ಡಿ.ಬಿ.ಎಸ್. ಬ್ಯಾಂಕ್ ಇದರ ಇಡೀ ಕಾರ್ಯನಿರ್ವಹಣೆ ಪಡೆದುಕೊಳ್ಳುವಂತೆ ಕೇಳಿತ್ತು ಎಂಬುದನ್ನು ನ್ಯಾಯಾಲಯ ಪರಿಗಣಿಸಿದೆ. ಹಿಂದಿನ ಬ್ಯಾಂಕ್ ಅಧಿಕಾರಿಗಳು ಮಾಡಿದ ತಪ್ಪಿಗಾಗಿ, ಆ ಬ್ಯಾಂಕ್ ರಕ್ಷಿಸಿದ ಡಿ.ಬಿ.ಎಸ್. ವಿರುದ್ಧ ಕ್ರಮ ತೆಗೆದುಕೊಳ್ಳಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ವಿಲೀನದ ನಂತರ ಡಿ.ಬಿ.ಎಸ್. ಬ್ಯಾಂಕ್ ಹಾಗೂ ಅದರ ನಿರ್ದೇಶಕರ ವಿರುದ್ಧ ಅಪರಾಧಿಕ ಪ್ರಕರಣ ದಾಖಲಿಸಲಾಗಿತ್ತು. ಈ ವಿಚಾರಣೆ ಕೈ ಬಿಡುವಂತೆ ಡಿ.ಬಿ.ಎಸ್. ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿತ್ತು. ಹೈಕೋರ್ಟ್ ಅರ್ಜಿಯನ್ನು ತಳ್ಳಿ ಹಾಕಿತ್ತು.

## ಸ್ಕಿಲ್ ಇಂಡಿಯಾ ಡಿಜಿಟಲ್‌ಗೆ ಚಾಲನೆ

ನವದೆಹಲಿ, ಸೆ. 13 – ಎಲ್ಲ ಕೌಶಲ್ಯ ಅಭಿಯಾನಗಳನ್ನು ಒಂದೇ ವೇದಿಕೆಯಡಿ ತರುವ ಸಲುವಾಗಿ ಕೇಂದ್ರ ಸರ್ಕಾರ ಸ್ಕಿಲ್ ಇಂಡಿಯಾ ಡಿಜಿಟಲ್ ವೇದಿಕೆ ಆರಂಭಿಸಿದೆ. ದೇಶದಲ್ಲಿ 264ಕ್ಕೂ ಹೆಚ್ಚು ಕೌಶಲ್ಯ ತರಬೇತಿ ನೀಡಲಾಗುತ್ತಿದೆ. ಇದಕ್ಕಾಗಿ 42,623 ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಸ್ಕಿಲ್ ಇಂಡಿಯಾ ಡಿಜಿಟಲ್ ಪ್ಲಾಟ್‌ಫಾರಂ ಅಪ್ಲಿಕೇಷನ್ ಅನ್ನು ಗೂಗಲ್ ಪ್ಲೇ ಸ್ಟೋರ್ ಮೂಲಕ ಪಡೆಯಬಹುದು ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಕೇರಳದಲ್ಲಿ ಐದನೇ ನಿಪಾ ಸೋಂಕು ಖಚಿತ

ತಿರುವನಂತಪುರಂ, ಸೆ. 13 – ಕೇರಳದಲ್ಲಿ 24 ವರ್ಷದ ಆರೋಗ್ಯ ಸಿಬ್ಬಂದಿ ನಿಪಾ ವೈರಸ್ ಸೋಂಕಿಗೆ ಸಿಲುಕಿದ್ದಾರೆ. ರಾಜ್ಯದಲ್ಲಿ ಇದು ಐದನೇ ಖಚಿತ ಸೋಂಕು ಪ್ರಕರಣವಾಗಿದೆ. ಸೋಂಕಿಗೆ ಸಿಲುಕಿರುವ ಒಂಭತ್ತು ವರ್ಷದ ಬಾಲಕನ ಸ್ಥಿತಿ ಗಂಭೀರವಾಗಿದೆ.

ಬಾಲಕನಿಗೆ ಚಿಕಿತ್ಸೆ ನೀಡಲು ಐ.ಸಿ.ಎಂ.ಆರ್. ಮೂಲಕ ಮೊನೊಕ್ಲೋನಲ್ ಆಂಟಿಬಡಿ ಔಷಧಿ ತರಿಸಲಾಗುತ್ತಿದೆ. ಈ ಔಷಧಿ ನಿಪಾ ವೈರಸ್‌ಗೆ ಲಭ್ಯವಿರುವ ಏಕೈಕ ಚಿಕಿತ್ಸೆಯಾಗಿದೆ. ಆದರೆ, ಇದು ಇನ್ನೂ ಚಿಕಿತ್ಸಾತ್ಮಕವಾಗಿ ದೃಢಪಡಬೇಕಿದೆ.

ಪ್ರಸಕ್ತ ಕೇರಳದಲ್ಲಿ ಬಾಂಗ್ಲಾದೇಶದಲ್ಲಿ ಕಂಡು ಬಂತ ರೀತಿಯ ರೂಪಾಂತರಿ ಹರಡುತ್ತಿದೆ. ಇದು ಮನುಷ್ಯರಿಂದ ಮನುಷ್ಯರಿಗೆ ಹರಡುತ್ತದೆ. ಸೋಂಕಿಗೆ ಸಿಲುಕಿದವರ ಸಾವಿನ ಪ್ರಮಾಣ ಹೆಚ್ಚಾಗಿದೆ. ಆದರೆ, ಹರಡುವಿಕೆ ಕಡಿಮೆ ಎಂದು ರಾಜ್ಯ ಸರ್ಕಾರ ತಿಳಿಸಿದೆ.

ಕೋಳಿಕೋಡ್‌ನ ಖಾಸಗಿ ಆಸ್ಪತ್ರೆಯ ಸಿಬ್ಬಂದಿಗೆ ಸೋಂಕು ತಗುಲಿರುವುದು ದೃಢಪಟ್ಟಿದೆ ಎಂದು ಕೇರಳ ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ.

ಸೋಂಕಿಗೆ ಸಿಲುಕಿದ ಬಾಲಕ ಐ.ಸಿ.ಯು.ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ನಿಕಟ ಸಂಪರ್ಕದಲ್ಲಿದ್ದ ಎಲ್ಲಾ 76 ಜನರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ. 13 ಜನರಲ್ಲಿ ಲಘು ಲಕ್ಷಣಗಳಿವೆ ಎಂದು ಸಚಿವೆ ತಿಳಿಸಿದ್ದಾರೆ.

ಸೋಂಕಿನ ಹಿನ್ನೆಲೆಯಲ್ಲಿ ಕೋಳಿಕೋಡ್ ಜಿಲ್ಲೆಯ ಏಳು ಗ್ರಾಮ ಪಂಚಾಯ್ತಿಗಳನ್ನು ಸೋಂಕಿತ ವಲಯ ಎಂದು ಗುರುತಿಸಲಾಗಿದೆ. ಈ ವಲಯಗಳಿಗೆ ಯಾರೂ ತೆರಳದಂತೆ ಹಾಗೂ ಹೊರ ಬರದಂತೆ ನಿರ್ಬಂಧಿಸಲಾಗಿದೆ. ಈ ವಲಯಗಳಲ್ಲಿ ಸಂಚಾರದ ಮೇಲೆ ನಿರ್ಬಂಧ ಹೇರಲಾಗಿದೆ.

## ಕೇಂದ್ರ ಅಸ್ತು

(1ನೇ ಪುಟದಿಂದ) ಲಾಗುವುದು. ನ್ಯಾಯಾಲಯ, ಕಕ್ಷಿದಾರರು ಹಾಗೂ ಇತರೆ ಸಂಬಂಧಿಸಿದವರು ಸುಲಲಿತವಾಗಿ ಮತ್ತು ಕಾಗದ ರಹಿತವಾಗಿ ಸಂಪರ್ಕ ಹೊಂದುವಂತೆ 3ನೇ ಹಂತದಲ್ಲಿ ತಂತ್ರಜ್ಞಾನ ರೂಪಿಸಲಾಗುವುದು.

ಈ ಯೋಜನೆಯ ಅನ್ವಯ ಎಲ್ಲಾ ನ್ಯಾಯಾಲಯಗಳ ಸಂಕೀರ್ಣಗಳಲ್ಲಿ ಇ-ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಈ ಕೇಂದ್ರಗಳ ಮೂಲಕ ನಾಗರಿಕರು ತಮಗೆ ಅಗತ್ಯ ಸೇವೆ ಪಡೆಯಬಹುದು. ಇದು ಡಿಜಿಟಲ್ ಅಂತರ ತಗ್ಗಿಸಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ನ್ಯಾಯಾಲಯದ ದಾಖಲೆಗಳನ್ನು ಗಣಕೀಕರಣ ಮಾಡಲಾಗುವುದು. ಇದರಿಂದ ಕಾಗದದ ದಾಖಲೆಗಳ ಅಗತ್ಯ ಕಡಿಮೆಯಾಗಲಿದೆ. ಕಡತಗಳನ್ನು ಭೌತಿಕವಾಗಿ ರವಾನಿಸುವ ಅಗತ್ಯವೂ ತಗ್ಗಲಿದೆ. ಆನ್‌ಲೈನ್ ಮೂಲಕ ನ್ಯಾಯಾಲಯದ ಕಲಾಪಗಳನ್ನು ನಡೆಸುವುದರಿಂದ ನ್ಯಾಯಿಕ ಪ್ರಕ್ರಿಯೆಯ ವೆಚ್ಚ ಕಡಿಮೆಯಾಗಲಿದೆ. ಸಾಕ್ಷಿಗಳು, ನ್ಯಾಯಮೂರ್ತಿಗಳು ಹಾಗೂ ಇತರೆ ಸಂಬಂಧಿಸಿದವರು ಪ್ರಯಾಣ ಮಾಡುವ ವೆಚ್ಚವೂ ಕಡಿಮೆಯಾಗಲಿದೆ. ನ್ಯಾಯಾಲಯಗಳ ಶುಲ್ಕ, ದಂಡ ಇತ್ಯಾದಿಗಳನ್ನು ಯಾವುದೇ ಸ್ಥಳದಿಂದ ಪಾವತಿಸಲು ಸಾಧ್ಯವಾಗಲಿದೆ.

## ಇಳಿಕೆಗೆ ಒತ್ತಾಯ

(1ನೇ ಪುಟದಿಂದ) ಈ ಹಿನ್ನೆಲೆಯಲ್ಲಿ ಕಟಾಫ್ ಪ್ರಮಾಣ ಇಳಿಸಬೇಕು ಎಂದು ಕೇಂದ್ರ ವೈದ್ಯ ಕೀಯ ಸಚಿವ ಮನಸುಖ್ ಮಾಂಡವೀಯ ಅವರಿಗೆ ಪತ್ರ ಬರೆಯಲಾಗಿದೆ. ಪ್ರಸಕ್ತ ಪಿ.ಜಿ. ಕಟಾಫ್ ಪರ್ಸೆಂಟೈಲ್ ಸಾಮಾನ್ಯ ವರ್ಗಕ್ಕೆ 50, ಸಾಮಾನ್ಯ ವಿಕಲಚೇತನರಿಗೆ 45, ಎಸ್.ಸಿ., ಎಸ್.ಟಿ., ಹಾಗೂ ಒ.ಬಿ.ಸಿ ವರ್ಗಕ್ಕೆ 40 ಆಗಿದೆ.


## ಸಾರ್ವಜನಿಕ ಪ್ರಕಟಣೆಗಾಗಿ

ಈ ಕೆಳಕಂಡ ಪ್ರಕಟಣೆದಾರರಾದ ನಾನು ಈ ಮುಖೇನ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ:

ಈ ಕೆಳಕಂಡ ಷೆಡ್ಯೂಲ್‌ಸೊತ್ತನ್ನು ದಿ.6.9.2023 ರಂದು ದರ್ಶನ್ ಎ. ಬಿನ್ ಆನಂದಪ್ಪ ಮತ್ತು ಸಿಂಧು ಪ್ರಕಾಶ್‌ಗೌಡರ ಕೋಂ ದರ್ಶನ್ ಎ. ಇವರಿಂದ ಜಿ.ಪಿ.ಎ. ಮೂಲಕ ಅಧಿಕಾರ ಪಡೆದ ಗೌಡರ ಗುರುಪ್ರಕಾಶ್ ಯಾನೆ ಜಿ.ಜಿ.ಪ್ರಕಾಶ್ ಬಿನ್ ಲೇಟ್ ಗೌಡರ ಜಯದೇವಪ್ಪ, 68 ವರ್ಷ, ಜಿ.ಪಿ.ಎ ಹೋಲ್ಡರ್, ಹಾಲಿವಾಸ ದಾವಣಗೆರೆ ಸಿಟಿ, ಎಂ.ಸಿ.ಸಿ. 'ಬಿ' ಬ್ಲಾಕ್, 9ನೇ ಮೇನ್ 3ನೇ ಕ್ರಾಸ್, ಡೋರ್ ನಂ.3087 (ಆಧಾರ್ ನಂಬರ್ 6226 0196 1521) ರಲ್ಲಿಯ, ವಾಸಿಯಾದ ನಾನು ಸಾಯಿಪ್ರಸಾದ್‌ಸಿ.ಬಂಡ್ಲೊರ್ ಬಿನ್‌ಲೇಟ್ ಚನ್ನಕೇಶವ ರೆಡ್ಡಿ, 61ವರ್ಷ, ಹಾಲಿವಾಸ ದಾವಣಗೆರೆ ಸಿಟಿ, ಸಿದ್ದವೀರಪ್ಪ ಬಡಾವಣೆ, 11ನೇ ಕ್ರಾಸ್, ಮನೆ ನಂಬರ್ 5677/1 (ಆಧಾರ್ ನಂಬರ್ 5757 1288 5739) ರಲ್ಲಿಯ ವಾಸಿಯಾದ ಇವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿರುತ್ತೇನೆ. ಸದರಿಯವರು ಈ ಕೆಳಕಂಡ 'ಎ' ಷೆಡ್ಯೂಲ್ ಸೊತ್ತನ್ನು ದಿ.18.10.1994 ರಂದು ವಿ.ಎನ್. ದನ್ಯಕುಮಾರ್ ಬಿನ್ ವಿ.ಶಿವರುದ್ರಪ್ಪ ಇವರಿಂದ ಕ್ರಯಕ್ಕೆ ಪಡೆದಿದ್ದು, ಸದರಿ ನೋಂದಣಿ ಕ್ರಯ ಪತ್ರ ಸಂಖ್ಯೆ.4192.

-: 'ಎ' ಷೆಡ್ಯೂಲ್ :-

ದಾವಣಗೆರೆ ತಾಲೂಕು ಸಬ್-ರಿಜಿಸ್ಟ್ರಾರ್‌ರವರ ಆಫೀಸಿನ ಅಧಿಕಾರಕ್ಕೆ ಸೇರಿದ, ದಾವಣಗೆರೆ ತಾಲೂಕು, ಶಾಮನೂರು ಗ್ರಾಮದ ರಿ.ಸರ್ವೇ ನಂ. 195/2ಬಿ ಮತ್ತು 195/1ಬಿ ರ ಒಟ್ಟು ವಿಸ್ತೀರ್ಣ ಎಕರೆ - 06 ಗುಂಟೆ - 02, ವಾಸೋಪಯೋಗಕ್ಕಾಗಿ ಆಲಿನೇಷನ್ ಆಗಿದ್ದು, ಹಾಲಿ ದಾವಣಗೆರೆ ಸಿಟಿ ಬನಶಂಕರಿ ಬಡಾವಣೆ, ಸರ್ವೀಸ್ ರಸ್ತೆ ಪಕ್ಕ, ಸೈಟ್ ನಂ. 52, ಇ-ಖಾತ ನಂಬರ್ 35-5-798-89, ಹಳೆ ಆಸ್ತಿ ನಂಬರ್ 1924/52, ಅಳತೆ 60X40 ಅಡಿ ಮತ್ತು ಸೈಟ್ ನಂ. 53, ಇ-ಖಾತ ನಂಬರ್ 35-5-798-87, ಹಳೆ ಆಸ್ತಿ ನಂಬರ್ 1924/53, ಅಳತೆ 60X40 ಅಡಿವುಳ್ಳ ಖಾಲಿ ಸೈಟ್‌ಗಳು ಒಂದಕ್ಕೊಂದು ಲಗತ್ತಾಗಿದ್ದು ಅವುಗಳ ಮತ್ತು ಒಟ್ಟು ಚಕ್ಕುಬಂಧಿ:

ಪೂರ್ವಕ್ಕೆ : ಸೈಟ್ ನಂ.58 ಮತ್ತು 59, ಪಶ್ಚಿಮಕ್ಕೆ : ರಸ್ತೆ,
ಉತ್ತರಕ್ಕೆ : ಸೈಟ್ ನಂ. 54, ದಕ್ಷಿಣಕ್ಕೆ : ಸೈಟ್ ನಂ. 51

ಈ ಕೆಳಕಂಡ 'ಬಿ' ಷೆಡ್ಯೂಲ್‌ಸೊತ್ತನ್ನು ದಿ. 24.12.2014 ರಂದು ಡಿ.ಭರತೇಶ್ ಬಿನ್ ದೊಣ್ಣಪ್ಪ ಇವರಿಂದ ಕ್ರಯಕ್ಕೆ ಪಡೆದಿದ್ದು, ಸದರಿ ನೋಂದಣಿ ಕ್ರಯ ಪತ್ರ ಸಂಖ್ಯೆ 14920.

-: 'ಬಿ' ಷೆಡ್ಯೂಲ್ :-

ದಾವಣಗೆರೆ ತಾಲೂಕು ಸಬ್-ರಿಜಿಸ್ಟ್ರಾರ್‌ರವರ ಆಫೀಸಿನ ಅಧಿಕಾರಕ್ಕೆ ಸೇರಿದ, ದಾವಣಗೆರೆ ತಾಲೂಕು, ಶಾಮನೂರು ಗ್ರಾಮದ ರಿ.ಸರ್ವೇ.ನಂ.195/2ಬಿ ಮತ್ತು 195/1ಬಿ ರ ಒಟ್ಟು ವಿಸ್ತೀರ್ಣ ಎಕರೆ-06 ಗುಂಟೆ-02, ವಾಸೋಪಯೋಗಕ್ಕಾಗಿ ಆಲಿನೇಷನ್ ಆಗಿದ್ದು, ಹಾಲಿ ದಾವಣಗೆರೆ ಸಿಟಿ ಬನಶಂಕರಿ ಬಡಾವಣೆ, ಸರ್ವೀಸ್ ರಸ್ತೆ ಪಕ್ಕ, ಸೈಟ್‌ನಂ. 58, ಇ-ಖಾತ ನಂಬರ್ 35-5-797-64, ಹಳೇ ಆಸ್ತಿ ನಂಬರ್ 1924/58, ಅಳತೆ 60X40 ಅಡಿ ಮತ್ತು ಸೈಟ್‌ನಂ.59, ಇ-ಖಾತ ನಂಬರ್ 35-5-797-66, ಹಳೇ ಆಸ್ತಿ ನಂಬರ್ 1924/59, ಅಳತೆ 60X 40 ಅಡಿವುಳ್ಳ ಖಾಲಿ ಸೈಟ್‌ಗಳು ಒಂದಕ್ಕೊಂದು ಲಗತ್ತಾಗಿದ್ದು ಅವುಗಳ ಮತ್ತು ಒಟ್ಟು ಚಕ್ಕುಬಂಧಿ:

ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಸೈಟ್ ನಂ. 52 ಮತ್ತು 53,
ಉತ್ತರಕ್ಕೆ : ಸೈಟ್ ನಂ. 57, ದಕ್ಷಿಣಕ್ಕೆ : ಸೈಟ್ ನಂ.60

ಸದರಿಯವರು ಈ ಮೇಲ್ಕಂಡ ಷೆಡ್ಯೂಲ್ ಸೊತ್ತಿನ ಖಾತದಾರರು ಹಾಗೂ ಕಾನೂನು ಬದ್ಧ ಹಕ್ಕುದಾರರು ಇದ್ದು, ಈ ಸಂಬಂಧವಾಗಿ ಈ ಕೆಳಗೆ ಸಹಿ ಮಾಡಲಾದ ಪ್ರಕಟಣೆದಾರರಾದ ನಾನು ಜಿ.ಪಿ.ಎ ಹೋಲ್ಡರ್ ಆಗಿ ನೋಂದಣಿ ಕ್ರಯಪತ್ರ ಮಾಡಿಕೊಳ್ಳಲು ಇಚ್ಛಿಸಿದ್ದು, ಈ ಮೂಲಕ ಸಾರ್ವಜನಿಕರಿಗೆ ಹಾಗೂ ಹಣಕಾಸು ಸಂಸ್ಥೆಗಳಿಗೆ ತಿಳಿಯಪಡಿಸುವುದೇನೆಂದರೆ,

ಸದರಿ ಮೇಲ್ಕಂಡ ಷೆಡ್ಯೂಲ್‌ಸೊತ್ತಿಗೆ ಸಂಬಂಧಿಸಿದಂತೆ ಯಾರದಾದರು ಹಕ್ಕು-ಬಾದ್ಯತೆ, ತಂಟೆ- ತಕರಾರು ಇದ್ದಲ್ಲಿ ಅಥವಾ ಷೆಡ್ಯೂಲ್‌ಸೊತ್ತಿಗೆ ಸಂಬಂಧಿಸಿದಂತೆ ಯಾವುದೇ ಹಣಕಾಸಿನ ಸಂಸ್ಥೆಯೂ ಈಗಾಗಲೇ ವ್ಯವಹರಿಸಿದ್ದಲ್ಲಿ ವ್ಯವಹರಿಸುವ ಹಂತದಲ್ಲಿದ್ದಲ್ಲಿ ಈ ಕೂಡಲೇ ಈ ಕೆಳಕಂಡ ಪ್ರಕಟಣೆದಾರರನ್ನು ಸಂಪರ್ಕಿಸತಕ್ಕದ್ದು. ಒಂದು ವೇಳೆ ಈ ಪ್ರಕಟಣೆಯಾದ 7 (ಏಳು) ದಿನಗಳ ಒಳಗಾಗಿ ಯಾವುದೇ ತಕರಾರು ಅರ್ಜಿ ಬಾರದೇ ಹೋದಲ್ಲಿ ಮುಂದೆ ಆಗುವ ತೊಂದರೆಗಳಿಗೆ ತಾವೇ ಕಾನೂನು ರೀತ್ಯಾ ಜವಾಬ್ದಾರರು ಆಗಿರುತ್ತೀರಿ ಮತ್ತು ತಾವೇ ಖುದ್ದು ಜವಾಬ್ದಾರರು ಎಂದು ತಿಳಿಯುವುದು.

ಪ್ರಕಟಣೆದಾರರು : **ದರ್ಶನ್ ಎ. ಬಿನ್ ಆನಂದಪ್ಪ ಮತ್ತು ಸಿಂಧು ಪ್ರಕಾಶ್ ಗೌಡರ ಕೋಂ ದರ್ಶನ್ ಎ. ಇವರಿಂದ ಜಿ.ಪಿ.ಎ. ಮೂಲಕ ಅಧಿಕಾರ ಪಡೆದ ಗೌಡರ ಗುರುಪ್ರಕಾಶ್ ಯಾನೆ ಜಿ.ಜಿ.ಪ್ರಕಾಶ್ ಬಿನ್ ಲೇಟ್ ಗೌಡರ ಜಯದೇವಪ್ಪ, ಜಿ.ಪಿ.ಎ. ಹೋಲ್ಡರ್,**
ಹಾಲಿ ವಾಸ ಡೋರ್ ನಂ. 3087, 9ನೇ ಮೇನ್, 3ನೇ ಕ್ರಾಸ್, ಎಂ.ಸಿ.ಸಿ.'ಬಿ' ಬ್ಲಾಕ್,
ದಾವಣಗೆರೆ ಸಿಟಿ. ಮೊ : 9845100622



## ಮಾನ್ಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಜಗಳೂರು

**ಓ.ಎಸ್.ನಂ. 18/2019**

**ವಾದಿ : ಶ್ರೀ ಬಿ. ನಾಗರಾಜ ಪವರ್ ಆಫ್ ಅಟಾರ್ನಿ ಹೋಲ್ಡರ್, ಶ್ರೀ ಎ. ಬಂಗಾರಪ್ಪ ಬಿನ್ ಲೇಟ್ ಅಜ್ಜಪ್ಪ,** ವಯಸ್ಸು 68 ವರ್ಷ, ಜಿರಾಯ್ತಿ ಮತ್ತು ನಿವೃತ್ತ ನೌಕರ, ಜೆ.ಸಿ.ಆರ್. ಬಡಾವಣೆ, ಜಗಳೂರು ಟೌನ್, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ. ವಿರುದ್ಧ

**ಪ್ರತಿವಾದಿಯರು : ಶ್ರೀ ಮತಿ ಚನ್ನಮ್ಮ ಮತ್ತು ಇತರರು ಮೃತ ಚನ್ನಮ್ಮಳ ವಾರಸುದಾರರು** 1 (ಎ) **ಶ್ರೀಮತಿ ಶಾರದಮ್ಮ ಕೋಂ ಲೇಟ್ ಶರಣಪ್ಪ,** 1(ಬಿ) **ಶ್ರೀಮತಿ ಭಾಗ್ಯಮ್ಮ ಕೋಂ ತಿಪ್ಪೇಸ್ವಾಮಿ,** 1(ಸಿ) **ಶ್ರೀಮತಿ ಮಂಜಮ್ಮ ಬಿನ್ ಲೇಟ್ ಶರಣಪ್ಪ,** 1(ಡಿ) **ಶ್ರೀಮತಿ ಲಕ್ಷ್ಮೀದೇವಿ ಬಿನ್ ಲೇಟ್ ಶರಣಪ್ಪ,** 1(ಇ) **ಶ್ರೀ ಉಮೇಶ್ ಬಿನ್ ಲೇಟ್ ಶರಣಪ್ಪ,** 1(ಎಫ್) **ಶ್ರೀ ತಿಪ್ಪೇಸ್ವಾಮಿ ಬಿನ್ ಲೇಟ್ ಶರಣಪ್ಪ,** ಎಲ್ಲರೂ ವಯಸ್ಕರು, ಜಿರಾಯ್ತಿ, ಮೆದೇಹಳ್ಳಿ ಗ್ರಾಮ, ಚಿತ್ರದುರ್ಗ ತಾಲ್ಲೂಕು,

**ಪ್ರತಿವಾದಿ ನಂ. 1(ಸಿ) ಮತ್ತು 1(ಡಿ) ರವರಿಗೆ ಸಿ.ಪಿ.ಸಿ. ಆದೇಶ 5 ನಿಯಮ 20(1)(ಎ) ರ ಅಡಿಯಲ್ಲಿ ನೀಡಲಾದ ಸಮನ್ಸ್ :**

ವಾದಿ ನಿಮ್ಮಗಳ ವಿರುದ್ಧ ದಾವಾ ಸ್ವತ್ತಿನ ಮಾಲೀಕನೆಂದು ಘೋಷಿಸಲು ಪ್ರತಿವಾದಿಯರ ವಿರುದ್ಧ ಘನ ನ್ಯಾಯಾಲಯದಲ್ಲಿ ದಿನಾಂಕ : 17.01.2019 ರಂದು ದಾವೆ ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ಪ್ರತಿವಾದಿ ನಂ. 1(ಸಿ) ಮತ್ತು 1(ಡಿ) ರವರಿಗೆ ನ್ಯಾಯಾಲಯದಿಂದ ಸಾಕಷ್ಟು ಬಾರಿ ಮತ್ತು ನೋಂದಾಯಿತ ಅಂಚೆ ಮೂಲಕ ನೋಟೀಸ್ ಕಳುಹಿಸಿದಾಗ್ಯೂ ಸಹ ನೋಟೀಸ್ ಜಾರಿಯಾಗಿರುವುದಿಲ್ಲ. ಆದ ಕಾರಣ ಈ ಪ್ರತಿಕಾ ಪ್ರಕಟಣೆ ನೀಡಲಾಗಿದೆ. ದಿನಾಂಕ 03.10.2023 ರಂದು ಘನ ನ್ಯಾಯಾಲಯದಲ್ಲಿ ಪ್ರತಿವಾದಿ ನಂ. 1(ಸಿ) ಮತ್ತು 1(ಡಿ) ರವರ ಹಾಜರಾತಿಗೆ ಮುದ್ದತ್ತು ಇದ್ದು, ಆ ದಿನ ಖುದ್ದು ನೀವಾಗಲೀ ಅಥವಾ ನಿಮ್ಮ ವಕೀಲರ ಮುಖಾಂತರವಾಗಲೀ, ಬೆಳಿಗ್ಗೆ 11 ಗಂಟೆಗೆ ಹಾಜರಾಗತಕ್ಕದ್ದು, ತಪ್ಪಿದಲ್ಲಿ ಸದರಿ ದಾವೆಗೆ ಸಂಬಂಧಿಸಿದಂತೆ ನಿಮ್ಮಗಳ ತಕರಾರು ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ದಾವೆಯನ್ನು ತೀರ್ಮಾನಿಸಲಾಗುವುದು ತಿಳಿಯಿರಿ.

ನನ್ನ ರುಜು ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ 12 ಸೆಪ್ಟೆಂಬರ್ 2023 ರಂದು ಕೊಡಲ್ಪಟ್ಟಿದೆ.

**ಕೆ.ಎಂ. ಬಸವರಾಜಪ್ಪ ವಾದಿ ಪರ ವಕೀಲರು**
**ಸ್ಥಳ : ಜಗಳೂರು ದಿನಾಂಕ : 12.09.2023**

**ನ್ಯಾಯಾಲಯದ ಆದೇಶದ ಮೇರೆಗೆ**
**ಶಿರಸ್ತೇದಾರರು**
**ಸಿವಿಲ್ ನ್ಯಾಯಾಲಯ ಜಗಳೂರು**



ಕರ್ನಾಟಕ ಅರಣ್ಯ ಇಲಾಖೆ

**ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ದಾವಣಗೆರೆ ಪ್ರಾದೇಶಿಕ ವಿಭಾಗ, ದಾವಣಗೆರೆ**

ದೂ ಸಂಖ್ಯೆ : 08192-262527 ಇ-ಮೇಲ್: dcfdvg@gmail.com

ಸಂಖ್ಯೆ : ಎ2/ಜೂ/ಹೊರಗುತ್ತಿಗೆ/ಸಿಆರ್/2022-23
ದಿನಾಂಕ: 11.09.2023

## ಸಂಕ್ಷಿಪ್ತ ಟೆಂಡರ್ ಪ್ರಕಟಣೆ

2023-24ನೇ ಸಾಲಿನಲ್ಲಿ ದಾವಣಗೆರೆ ಅರಣ್ಯ ವಿಭಾಗ ವ್ಯಾಪ್ತಿಯಲ್ಲಿ ಬರುವ ಇಂದಿರಾ ಪ್ರಿಯದರ್ಶಿನಿ ಕಿರು ಮೃಗಾಲಯ, ಆನಗೋಡು ಇಲ್ಲಿಯ ಕಛೇರಿಗೆ ಗಣಕಯಂತ್ರ ನಿರ್ವಾಹಕ ಮತ್ತು ಜೂ ಸ್ವಚ್ಛತಾಗಾರ ನೌಕರರನ್ನು ಒದಗಿಸಲು ದಿನಾಂಕ:11-09-2023 ರಂದು ಪ್ರಕಟಣೆ ಹೊರಡಿಸಿ ದಿನಾಂಕ: 22-09-2023ರ ಬೆಳಿಗ್ಗೆ 11:00 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ದಿನಾಂಕ: 22-09-2023ರ ಟೆಂಡರಿನಲ್ಲಿ ಯಾರೂ ಭಾಗವಹಿಸದ ಸಂದರ್ಭದಲ್ಲಿ ಮರು ಟೆಂಡರ್ ಅವಧಿಯನ್ನು ದಿನಾಂಕ: 03-10-2023ರ ಸಂಜೆ 4:00 ಗಂಟೆಯುವರೆಗೆ ನಿಗಧಿಪಡಿಸಲಾಗಿರುತ್ತದೆ. ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ವಾಸಾಇ/ದಾವಣಗೆರೆ/230/ಕೆಎಸ್‌ಎಂಸಿಎ/2023-24

**ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ದಾವಣಗೆರೆ ವಿಭಾಗ, ದಾವಣಗೆರೆ.**



## ಸಾರ್ವಜನಿಕ ಪ್ರಕಟಣೆ

ಎರಡು ಸಾವಿರದ ಇಪ್ಪತ್ಮೂರನೇ ಇಸವಿ ಮಾಹೆ ತಿಂಗಳು ಸೆಪ್ಟೆಂಬರ್, ತಾರಿಖು ಹನ್ನೆರಡರಲ್ಲಿ (12/09/2023) ರಲ್ಲಿ ದಾವಣಗೆರೆ ಸಿಟಿ ಡಿ.ಸಿ.ಎಮ್ ಬಡಾವಣೆ, ಮೂರನೇ ಮುಖ್ಯ ರಸ್ತೆ, ಮೂರನೇ ಕ್ರಾಸ್, ಡೋರ್ ನಂ.375 ರಲ್ಲಿ ವಾಸವಾಗಿರುವ ನನ್ನ ಕಕ್ಷಿದಾರರಾದ **ಆರ್. ವಿ. ಕುಮಾರ್ ತಂದೆ ರಾಮಲಿಂಗಯ್ಯ** ಇವರು ಮಾಡುವ ಸಾರ್ವಜನಿಕ ಘೋಷಣೆ ಏನೆಂದರೆ.

ದಾವಣಗೆರೆ ಸಿಟಿ, ನಿಟ್ಟುವಳ್ಳಿ ಹೊಸ ಬಡಾವಣೆ, ಡೋರ್ ನಂ 578/4-5 ರಲ್ಲಿ ವಾಸವಾಗಿರುವ ಗಜಾನನ ಕೆ.ಆರ್ ತಂದೆ ರಾಮ ಪೂಜಾರಿ, ದಿನಾಂಕ 24/2/2022 ರಲ್ಲಿ ಡೋರ್ 578/4-5 ನಿಟ್ಟುವಳ್ಳಿ ಹೊಸ ಬಡಾವಣೆ ಎಂಬ ವಿಳಾಸದಲ್ಲಿ **ಎಂಪೈರ್ ಟ್ರೇಡಿಂಗ್** ಎಂಬ ಹೆಸರಿನ ಷೇರು ಮಾರುಕಟ್ಟೆ ವ್ಯಾಪಾರ ಆರಂಭಿಸಿದ್ದು ಸದರಿ ಸಂಸ್ಥೆಯು ಅಧಿಕೃತವಾಗಿ ಭಾರತ ಸರ್ಕಾರ ಜಿಎಸ್‌ಟಿ ಅಧಿನಿಯಮ 2017 ನಿಯಮ 10(1) ರ ಅಡಿಯಲ್ಲಿ ನೋಂದಣಿಯಾಗಿ, ಸದರಿ **ನೊಂದಣಿ ಸಂಖ್ಯೆ 29ಎಎಮ್‌ಜಿಪಿಆರ್ 5824ಡಿ1ಜೆಡ್‌**ವಿ ನಂಬರ್‌ನಲ್ಲಿ ನೊಂದಾಣಿಯಾಗಿರುತ್ತದೆ. ಸದರಿ ವ್ಯಾಪಾರ ಸಂಸ್ಥೆಗೆ ಗಜಾನನ ಕೆ.ಆರ್ ಏಕ ಮಾಲೀಕರಾಗಿದ್ದು ವ್ಯವಹರಿಸುತ್ತಾ, ಸದರಿ ಸಂಸ್ಥೆಯ ವ್ಯಾಪಾರ ವಹಿವಾಟಿಗಾಗಿ ದಾವಣಗೆರೆ ಸಿಟಿ, ಡಿಸಿಎಂ ಬಡಾವಣೆ, ಪಿ.ಬಿ ರಸ್ತೆ ಎಮ್.ಎಸ್.ಎಮ್ ಪ್ಲಾಜಾದಲ್ಲಿ ಕಛೇರಿ ಹೊಂದಿದ್ದು, ತಮ್ಮ ವ್ಯವಹಾರ ವಹಿವಾಟು ಮಾಡಿರುತ್ತಾರೆ. ಸದರಿ ವ್ಯಾಪಾರ ವಹಿವಾಟಿಗೆ ಮೇಲ್ಕಂಡ ನನ್ನನ್ನು ಸಾಕ್ಷಿದಾರರನ್ನಾಗಿ ಮಾಡಿಕೊಂಡಿರುವುದು ಸರಿಯಷ್ಟೆ. ಇನ್ನು ಮುಂದೆ ನಾನು ಸದರಿ ಸಂಸ್ಥೆಯಲ್ಲಿ ನಡೆಯುವ ವ್ಯವಹಾರಗಳಿಗೆ ಸಾಕ್ಷಿಯಾಗಿ ಮುಂದುವರಿಯಲು ಇಚ್ಛೆ ಇಲ್ಲದ ಕಾರಣ ನಾನು ಸದರಿ ಸಂಸ್ಥೆಯ ಸಾಕ್ಷಿದಾರರ ಪಟ್ಟಿಯಿಂದ ಹೊರಬಂದಿರುತ್ತೇನೆ ಎಂಬ ವಿಷಯವನ್ನು ಈಸಾರ್ವಜನಿಕ ಘೋಷಣಾ ಪತ್ರದ ಮೂಲಕ ಎಲ್ಲಾ ಸದಸ್ಯ ಹೂಡಿಕೆದಾರರ ಗಮನಕ್ಕೆ ತರಬಯಸುತ್ತಿದ್ದೇನೆ ಹಾಗೂ ಸದರಿ ಸಾರ್ವಜನಿಕ ಘೋಷಣೆಯನ್ನು ಈ ಪ್ರಕಟಣೆ ಮೂಲಕ ಹೊರಡಿಸುತ್ತಿದ್ದೇನೆ. ಹಾಗೂ ಈ ಹಿಂದೆ ನಡೆದಿರುವ ವ್ಯವಹಾರಗಳಿಗೂ ನನಗೂ ಯಾವುದೇ ರೀತಿ ವ್ಯವಹಾರಿಕ ಸಂಬಂಧ ಇರುವುದಿಲ್ಲ ಹಾಗೂ **ಎಂಪೈರ್ ಟ್ರೇಡಿಂಗ್** ಕಂಪನಿಯು ಗಜಾನನ ಕೆ.ಆರ್. ರವರು ಏಕೈಕ ಮಾಲೀಕರಾಗಿದ್ದು ಅದರ ಸಂಪೂರ್ಣ ವ್ಯವಹಾರಕ್ಕೆ **ಗಜಾನನ ಕೆ.ಆರ್** ರವರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

ಕಕ್ಷಿದಾರರ ಪರ ವಕೀಲರು
**ಸಹಿ/- ಎ.ಸಿ. ರಾಘವೇಂದ್ರ,** ವಕೀಲರು ಮತ್ತು
ಭಾರತ ಸರ್ಕಾರ ಪರ ನಿಯೋಜಿತ ವಕೀಲರು,
ಶಿವಗೌರಿ ಕಾಂಪ್ಲೆಕ್ಸ್, 2ನೇ ಮಹಡಿ, ಭೂತಪ್ಪ ದೇವಸ್ಥಾನ ಹಿಂಭಾಗ, ರಿಂಗ್ ರಸ್ತೆ,
ಶಾಂತಿ ನಗರ, ದಾವಣಗೆರೆ-577006.
KAR/2929/2004. Cell No. 98451 65062



## ದಾವಣಗೆರೆ ಗ್ರಾಮದ ಸರ್ವೇ ನಂ; 141 ನೇದ್ದರಲ್ಲಿ 1 ಎಕರೆ 05 ಗುಂಟೆ ಜಮೀನಿನ ಕುರಿತು ಸಾರ್ವಜನಿಕರ ಗಮನಕ್ಕೆ

ಶ್ರೀ ನೀಲಕಂಠ ಸಾರಂಗ ದೇಶಿಕೇಂದ್ರ ಮಹಾಸ್ವಾಮಿಗಳು ರಾಮಲಿಂಗೇಶ್ವರ ಮಠ ಹಾರನಹಳ್ಳಿ ತಾ. ವ ಜಿಲ್ಲಾ; ಶಿವಮೊಗ್ಗ ಇವರ ಒಟ್ಟು ಮುಕ್ತಿಯಾರ ಶ್ರೀ ಸುರೇಶ ಎಸ್. ಹೆಚ್. ಸಾ; ರಂಗನಾಥ ಬಡಾವಣೆ ದಾವಣಗೆರೆ ಹಾಗೂ 2) ಸೈಯದ ತಾಹೀರುದ್ದಿನ ಬಿನ್ ಸೈಯದ ಜಾಹೀರುದ್ದೀನ್ ಸಾ, ಡೋರ್ ನಂ 49, 4) ಕರೂರು ದಾವಣಗೆರೆ ಇವರ ಪರ ವಕೀಲರಾದ ಶ್ರೀ ಪ್ರಶಾಂತ ಜಿ. ಸೂರಣಗಿ, ವಕೀಲರು 'ಈಶ್ವರ' ಅಶೋಕ ನಗರ ರಾಣೇಬೆನ್ನೂರು ತಮ್ಮ ಪಕ್ಷಗಾರರ ಪರ ಸಾರ್ವಜನಿಕವಾಗಿ ಪ್ರಕಟಿಸುವ ಪ್ರಕಟಣೆ ಏನಂದರೆ,

ನಮ್ಮ ಪಕ್ಷಗಾರರಾದ ಮೇಲ್ಕಂಡ 1ನೇದ್ದವರು ಶ್ರೀ ರಾಮಲಿಂಗೇಶ್ವರ ಮಠ ಹಾರನಹಳ್ಳಿ ಮಠದ ಮಠಾಧಿಪತಿ, ಉತ್ತರಾಧಿಕಾರಿ ಹಾಗೂ ಸರ್ವಾಧಿಕಾರಿಗಳು ಇದ್ದು, ದಾವಣಗೆರೆ ತಾಲ್ಲೂಕು ದಾವಣಗೆರೆ ಗ್ರಾಮದ ರಿ. ಸರ್ವೇ ನಂ. 141 ನೇದ್ದರಲ್ಲಿ 1 ಎಕರೆ 05 ಗುಂಟೆ ಜಮೀನಿನ, ಪ್ರತ್ಯಕ್ಷ ಕಬ್ಜಾ ವಹಿವಾಟಿಯ ಮಾಲೀಕರು ಇದ್ದು, ಸದರಿ ಆಸ್ತಿಯ ಯಾವತ್ತೂ ಉಸ್ತುವಾರಿಯನ್ನು ಶ್ರೀ ಸುರೇಶ ಎಸ್. ಹೆಚ್. ಸಾ. ರಂಗನಾಥ ಬಡಾವಣೆ ದಾವಣಗೆರೆ ಹಾಗೂ 2) ಸೈಯದ ತಾಹೀರುದ್ದೀನ್ ಬಿನ್ ಸೈಯದ ಜಾಹೀರುದ್ದೀನ್ ಸಾ, ಡೋರ್ ನಂ.49, ಕರೂರು ದಾವಣಗೆರೆ ಇವರು ಈ ಹಿಂದಿನಿಂದಲೂ ಮಾಡುತ್ತಾ ಬಂದಿರುತ್ತಾರೆ.

ಸದರ ಆಸ್ತಿಯಲ್ಲಿ ಇತ್ತೀಚಿನ ದಿನಗಳಲ್ಲಿ ನಮ್ಮ ಪಕ್ಷಗಾರರು ಹೇರಳ ಹಣ ಖರ್ಚು ಮಾಡಿ ಸ್ವ ಅಭಿವೃದ್ಧಿ ಬಿನ್ ಶೇತ್ಕಿ ವಸತಿ ನಿವೇಶಗಳನ್ನು ನಿರ್ಮಿಸಲು ತಯಾರು ಮಾಡಿದ್ದು ಇರುತ್ತದೆ.

ಸದರಿ ನಮ್ಮ ಪಕ್ಷಗಾರರ ಮಾಲ್ಕಿ ಆಸ್ತಿ ರಿ. ಸರ್ವೇ ನಂ.141, ಕ್ಷೇತ್ರ 1 ಎಕರೆ 05 ಗುಂಟೆ ಕುರಿತು ಶ್ರೀ ಡಿ ಹಫಿಜುರ್, ರಹಮಾನ್ ಬಿನ್ ರಹಮಾನ್ ನಂ:173/1 ಬಾರ್ ಲೈನ್ ರಸ್ತೆ ದಾವಣಗೆರೆ, ವಗೈರೆರು ಮಾನ್ಯ 1ನೇ ಹೆಚ್ಚುವರಿ ಸಿವಿಲ್ ಜಡ್ಜ್ ವ ಜೆ.ಎಂ.ಎಫ್.ಸಿ ದಾವಣಗೆರೆ ಇವರ ಕೋರ್ಟಿನಲ್ಲಿ ಓ ಎಸ್ ನಂ:269/2023 ನೇ ಖೊಟ್ಟಿ ಮಜಕೂರಿನ ತಾಕಿದಿ ದಾವೆ ದಾಖಲ ಮಾಡಿ ಏಕತರ್ಫಿ ತಾಖಿದಿ ಹುಕ್ಕುಂ ಪಡೆದುಕೊಂಡು ನಮ್ಮ ಪಕ್ಷಗಾರರ ಮಾಲ್ಕಿ ಆಸ್ತಿಯನ್ನು ತಮ್ಮ ಮಾಲ್ಕಿ ಆಸ್ತಿ ಅಂತ ಸಾರ್ವಜನಿಕರಲ್ಲಿ ತಪ್ಪು ಗ್ರಹಿಕೆ ಹಾಗೂ ಸುಳ್ಳಿನ ಮೂಲಕ ಸಾಧಿಸುತ್ತಾ ಸದರಿ ನಮ್ಮ ಪಕ್ಷಗಾರರು ಅಭಿವೃದ್ಧಿಪಡಿಸುತ್ತಿರುವ ನಿವೇಶನಗಳನ್ನು ಮಾರಾಟ ಮಾಡುವ ತಜಿವಿಜಿಯಲ್ಲಿ ಇರುತ್ತಾರೆ ಅಂತಾ ನಮ್ಮ ಪಕ್ಷಗಾರರಿಗೆ ಬಲ್ಲ ಮೂಲಗಳಿಂದ ತಿಳಿದು ಬಂದಿರುತ್ತದೆ. ಸದರಿ ಶ್ರೀ ಡಿ ಹಫೀಜುರ್ ರಹಮಾನ್ ಬಿನ್ ರಹಮಾನ್ ವಗೈರೆರು ಇವರ ಮಾಲ್ಕಿ ಆಸ್ತಿ ಎಸ್.ಜೆ.ಎಂ ನಗರಕ್ಕೆ ಹೋಗುವ ದಾರಿಗೆ ಹೊಂದಿಕೊಂಡಿದ್ದು ಸದರಿ ಆಸ್ತಿ ಈ ಒಳಗಾಗಿ ಈ ಹಿಂದೆಯೇ ಆಶ್ರಯ ಯೋಜನೆಗೆ ಸರ್ಕಾರದವರು ಭೂಸ್ವಾದೀನ ಪಡಿಸಿಕೊಂಡಿದ್ದು ಇರುತ್ತದೆ. ಕಾರಣ ಸದರಿ ಶ್ರೀ ಡಿ. ಹಫೀಜುರ್ ರಹಮಾನ್ ಬಿನ್ ರಹಮಾನ್ ವಗೈರೆರು ಆಗಲೀ ಅವರ ತರ್ಫಿ ಬೇರೆ ಯಾರೇ ಆಗಲೀ ನಮ್ಮ ಪಕ್ಷಗಾರರ ಮಾಲ್ಕಿ ಆಸ್ತಿಯನ್ನು ತಮ್ಮ ಮಾಲ್ಕಿ ಆಸ್ತಿ ಅಂತಾ ಸಾರ್ವಜನಿಕರಲ್ಲಿ ತಪ್ಪು ಗ್ರಹಿಕೆ ಮೂಡಿಸಿ ಮಾರಾಟ, ಪರಾಧೀನ, ವತ್ತಿ ವ ಬೇರೆ ಯಾವುದೇ ರೀತಿಯಲ್ಲಿ ಪರಾಧೀನ ಮಾಡಿದಲ್ಲಿ ಅಂತಹ ವ್ಯವಹಾರಗಳಿಗೆ ಹಾಗು ಮುಂದೆ ಆಗುವ ಯಾವುದೇ ಅನಾಹುತಗಳಿಗೆ ನಮ್ಮ ಪಕ್ಷಗಾರ ಶ್ರೀ ನೀಲಕಂಠ ಸಾರಂಗ ದೇಶಿಕೇಂದ್ರ ಮಹಾಸ್ವಾಮಿಗಳು ರಾಮಲಿಂಗೇಶ್ವರ ಮಠ ಹಾರನಹಳ್ಳಿ ಇವರು ಯಾವುದೇ ರೀತಿಯಿಂದ ಜವಾಬ್ದಾರರು ಇರುವುದಿಲ್ಲ. ಅಂತಾ ಕೊಟ್ಟ ಎಚ್ಚರಿಕೆ ನೋಟೀಸು.

ದಾವಣಗೆರೆ.

**ಶ್ರೀ ಪ್ರಶಾಂತ್ ಜಿ. ಸೊರಣಗಿ,**
ಬಿ.ಕಾಂ, ಎಲ್‌ಎಲ್.ಬಿ, (ಸ್ಪೆಷಲ್) ವಕೀಲರು
'ಈಶ್ವರ್' ಅಶೋಕ ನಗರ, ರಾಣೇಬೆನ್ನೂರು, ಹಾವೇರಿ ಜಿಲ್ಲೆ.
**ಮೊ : 92411 22912, 97385 02140**

# ನಮ್ಮ ಗುರುಗಳು ಡಾ|| ನಿರ್ಮಲ ಕೇಸರಿಯವರು, ನಾ ಕಂಡಂತೆ



1975 ರಲ್ಲಿ ನಾನು ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಮುಗಿಸಿ ನಮ್ಮೂರಾದ ದಾವಣಗೆರೆಗೆ ಬಂದೆ. ಮಕ್ಕಳ ವಿಭಾಗದಲ್ಲಿ ಹೆಚ್ಚಿನ ಅಧ್ಯಯನವನ್ನು ಮಾಡಬೇಕೆಂಬ ಅಭಿಲಾಷೆ ಇತ್ತು. ಅದಕ್ಕೆ ಪೂರಕವಾಗಿ ಮಕ್ಕಳ ವಿಭಾಗದಲ್ಲಿ ಕಿರಿಯ ವೈದ್ಯನಾಗಿ ಚಿಗಟೇರಿ ಆಸ್ಪತ್ರೆಯಲ್ಲಿ ಸೇರಿಕೊಂಡೆ.

ಆ ದಿನಗಳಲ್ಲಿ ನನಗೆ ದಾವಣಗೆರೆ ಆಸ್ಪತ್ರೆಯಲ್ಲಿ ಯಾರ ಪರಿಚಯವೂ ಇರಲಿಲ್ಲ ಮತ್ತು ನಮ್ಮ ಮುಂಬರುವ ದಿನಗಳಲ್ಲಿ ನಮ್ಮ ಮನಸ್ಸು ಜೀವನವನ್ನೇ ತಿದ್ದಿ ತೀಡುವ ಆ ಮಹಾಗುರುಗಳ ಬಗ್ಗೆ ಲವಲೇಶವೂ ತಿಳಿದಿರಲಿಲ್ಲ.

ಪ್ರಪ್ರಥಮ ಬಾರಿಗೆ ಅವರ ಭೇಟಿ ಆಸ್ಪತ್ರೆಯಲ್ಲಿ ಆದಾಗ ಮಂತ್ರಮುಗ್ಧವಾಗುವ ಹಾಗೆ ಏನೂ ಕಾಣಿಸಲಿಲ್ಲ. ಅವರು ವಿದೇಶದಲ್ಲಿ ಎರಡು ದಶಕಗಳಿಗೂ ಜಾಸ್ತಿ ಹತ್ತಾರು ವಿದೇಶಿ ಪದವಿಗಳನ್ನು ಕಷ್ಟಪಟ್ಟು ಗಳಿಸಿದ್ದರು ಎಂದು ಗೊತ್ತಾಯಿತು. ಈ ಹಿನ್ನೆಲೆಯಲ್ಲಿ ಒಂದು ತರಹ ನಿರಾಸೆಯಾಯಿತು. ಏಕೆಂದರೆ, ಅವರು ಇಲ್ಲಿಯೇ, ನಮ್ಮ ನಡುವೆಯೇ ಇದ್ದವರು. ವಿದೇಶಕ್ಕೆ ಹೋಗಿ ಬಂದೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಸೀದಾ ಸಾಧಾರಣವಾಗಿದ್ದರು. ಅವರ ನಡೆ ನುಡಿ ಯಲ್ಲಿ ನಮ್ಮ ಹಮ್ಮು-ಬಿಮ್ಮುಗಳೆಲ್ಲಾ ನೀರಾಗಿ ಹರಿದು ಹೋದವು. (ಆ ಕಾಲದಲ್ಲಿ ಹೊಸದಾಗಿ ಎಂಬಿಬಿಎಸ್ ಓದಿದವರು ಸ್ವಲ್ಪ ತೇಲಾಡುತ್ತಿದ್ದರು). ಹೀಗೆ ಶುರುವಾದ ಶಿಷ್ಯವೃತ್ತಿಯು ಮುಂದಿನ 5 ವರ್ಷಗಳ ಕಾಲ ಅವಿಚ್ಛಿನ್ನವಾಗಿ ನಡೆಯಿತು. ಆ ಅವಧಿಯಲ್ಲಿ ಶಿಲೆಯಾಗಿ ಬಂದಿದ್ದ ನನ್ನನ್ನು ಮೂರ್ತಿಯಾಗಿ ಮಾಡಿದ್ದು ಇದೇ ಗುರುಗಳು ಎಂದು ಇಂದಿಗೂ ಮನಃಪೂರ್ವಕವಾಗಿ ನೆನೆಯುತ್ತೇನೆ.

**ದಣಿವರಿಯದ ಗುರು:** ನಮ್ಮ ದಿನಚರಿಯು ಬೆಳಿಗ್ಗೆ 8ಕ್ಕೆ ಶುರುವಾದರೆ, ಮಾರನೆಯ ದಿನ ರಾತ್ರಿ 10ಕ್ಕೆ ಪೂರೈಸುತ್ತಿತ್ತು. ಶುರುವಿನಲ್ಲಿ ಕಾರ್ಯದ ಒತ್ತಡಕ್ಕೆ ಬೇಸರಿಕೆಯಾಗುತ್ತಿತ್ತು. ಶಿಲೆಯನ್ನು ಮೂರ್ತಿಯಾಗಿ ಮಾರ್ಪಾಡು ಮಾಡುವ ಕೆತ್ತನೆ ಕೆಲಸವನ್ನು ಗುರುಗಳು ತಮಗರಿವಿಲ್ಲದಂತೆ ಶುರು ಮಾಡಿದ್ದರು. ಈ ವಿಷಯವು ನನಗೆ ತಕ್ಷಣ ಅರಿವಾಗಲಿಲ್ಲ.

**ಜನಸಾಮಾನ್ಯರ ಗುರು:** ನಾನು ಕಂಡಂತೆ ಚಿಗಟೇರಿ ಆಸ್ಪತ್ರೆಯು 1975 -80ರ ಅವಧಿ ಯಲ್ಲಿ ರೋಗಿಗಳು ಮತ್ತು ಜನರಿಂದ ತುಂಬಿ ರುತ್ತಿತ್ತು. ಹಾಸಿಗೆಗೆ ಇಬ್ಬರು ರೋಗಿಗಳು ಇರುವುದು ಸರ್ವೇಸಾ ಮಾನ್ಯ ವಾಗಿರುತ್ತಿತ್ತು. ಬಹುಪಾಲು ಜನರು/ರೋಗಿಗಳು ಕೆಳ ಮಧ್ಯಮ ವರ್ಗದವರಾಗಿರುತ್ತಿದ್ದರು. ಅವರೊಡನೆ ಗುರುಗಳು ಬೆರೆತು ಕಾಯಿಲೆಯ ಬಗ್ಗೆ/ಆಹಾರದ ಬಗ್ಗೆ/ ನೈರ್ಮಲ್ಯತೆಯ ಬಗ್ಗೆ ಹೇಳುತ್ತಿದ್ದ ರೀತಿಯು ನಮ್ಮನ್ನು ಭೂಮಿಯ ಮೇಲೆ ಇರುವಂತೆ ನೋಡಿಕೊಳ್ಳುತ್ತಿತ್ತು.

**ಸಮಾಜ ಸೇವೆ ಮತ್ತು ಆರೋಗ್ಯ ಶಿಕ್ಷಣ:**

ಸಮಾಜಕ್ಕೆ ತಮ್ಮ ಶಿಷ್ಯರಿಂದ ಆಗಬೇಕಿದ್ದ ಕೊಡುಗೆಗೆ ಬುನಾದಿಯನ್ನು ಯಾವುದೇ ಒತ್ತಡವನ್ನು ಹೇರದೇ ಎಲ್ಲಾ ಶಿಷ್ಯರಿಗೂ ಮಾಡುತ್ತಿದ್ದರು.

ದಾವಣಗೆರೆ ಜಿಲ್ಲೆ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ/ ಕೊಳಚೆ ಪ್ರದೇಶಗಳಲ್ಲಿ/ನಗರಗಳಲ್ಲಿ ನಿಯಮಿತವಾಗಿ ಆರೋಗ್ಯ ಶಿಬಿರಗಳನ್ನು/ಚುಚ್ಚುಮದ್ದು ಶಿಬಿರಗಳನ್ನು ನಡೆಸುತ್ತಿದ್ದರು. ನಾವೆಲ್ಲರೂ ಅದರಲ್ಲಿ ಭಾಗವಹಿಸಲು ನಾಮುಂದು -ತಾಮುಂದು ಎಂದು ಮುನ್ನುಗ್ಗುತ್ತಿದ್ದೆವು. ಜೊತೆಗೆ ಈ ಸೇವಾ ಮನೋಭಾವನೆಯನ್ನು ನಮ್ಮ ನಮ್ಮ ಜೀವನಗಳಲ್ಲಿ ಅಳವಡಿಸಿಕೊಂಡೆವು. ಈ ಶಿಬಿರಗಳಲ್ಲಿ ಆರೋಗ್ಯದ ಬಗ್ಗೆ ಅರಿವನ್ನು ಮೂಡಿಸುವ ಕೆಲಸವು ತಪ್ಪದೇ ನಡೆಯುತ್ತಿತ್ತು.

**ಸಂಶೋಧನಾ ಚಟುವಟಿಕೆಗಳು:**

ನಮ್ಮ ದೈನಂದಿನ ಆಸ್ಪತ್ರೆಯ ಮತ್ತು ಕಾಲೇಜಿನಲ್ಲಿನ ಶೈಕ್ಷಣಿಕ ಚಟುವಟಿಕೆಗಳೊಡನೆ ಸಂಶೋಧನಾ ಚಟುವಟಿಕೆಗಳು ತಳುಕು ಹಾಕಿಕೊಂಡಿರುತ್ತಿದ್ದವು. ಸಮಾಜಕ್ಕೆ ಉಪಯೋಗ ಆಗುವಂತಹ ವಿಷಯಗಳ ಬಗ್ಗೆ ಪ್ರಬಂಧಗಳ ಮಂಡನೆಯಾಗುತ್ತಿತ್ತು. ಪ್ರಬಂಧಗಳ ರಚನೆಗೆ ಬೇಕಾದ ವಿಷಯಗಳನ್ನು ಕ್ರೋಢೀಕರಿಸಲು ಗುರುಗಳ ಮನೆಯೇ ವೇದಿಕೆಯಾಗಿತ್ತು. ಕಡಿಮೆ ಎಂದರೂ 10-15 ವಿದ್ಯಾರ್ಥಿಗಳು ಇರುತ್ತಿದ್ದರು. ಅವರಿಗೆಲ್ಲಾ ಗುರುಗಳು ಮಾಡುತ್ತಿದ್ದ ಊಟೋಪಚಾರದ ವ್ಯವಸ್ಥೆಯ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ ಸರಿ.

**ಕ್ಷಮಾಗುಣ ಮತ್ತು ತಾಯಿ ಹೃದಯ:**

ನಮ್ಮ ಗುರುಗಳಲ್ಲಿದ್ದ ಈ ಗುಣಗಳನ್ನು ಎಷ್ಟು ಹೊಗಳಿದರೂ ಸಾಲದು. ನನಗಾದ ನೇರವಾದ ಅನುಭವವೇ ಇದಕ್ಕೆ ಸಾಕ್ಷಿ. ಅದು ನನ್ನ ಮಹತ್ವಾಕಾಂಕ್ಷೆಯಾಗಿದ್ದ ಎಂ.ಡಿ. ಪರೀಕ್ಷೆಯು ನಂತರ ಆದ, ನಾನೆಂದೂ ಮರೆಯಲಾಗದ ಅನುಭವ. ಎಂ.ಡಿ. ಪರೀಕ್ಷೆಯನ್ನು ಮುಗಿಸಿದೊಡನೆಯೇ ನಾನು ನಪಾಸಾಗಿದ್ದೇನೆಂದು ಗೊತ್ತಾಯಿತು. ಗುರುಗಳು ಹೊರಗೆ ಬಂದು ಅಳಲು ಶುರು ಮಾಡಿದರು. ಆಗ ನಾನೇ ಅವರನ್ನು ಸಮಾಧಾನ ಮಾಡಿದೆ. ನಾನು ಪರೀಕ್ಷೆಯನ್ನು ಸರಿಯಾಗಿ ಮಾಡಲಿಲ್ಲ, ನಿಮ್ಮ ನಿರೀಕ್ಷೆಗೆ ತಕ್ಕಂತೆ ಮಾಡಲಿಲ್ಲ ಕ್ಷಮಿಸಿ ಎಂದು ಹೇಳಿ, ನಾನೇ ಅವರನ್ನು ಸಮಾಧಾನ ಮಾಡಿದೆ. ನನ್ನ ಸಹಪಾಠಿಗಳಿಗೂ ಆಶ್ಚರ್ಯ, ಆತಂಕ, ಕೊಂಚ ಅಸಮಾಧಾನ ಕೂಡ ಆಯಿತು. ಅಲ್ಲಿಂದ ಹೊರಟ ನಾನು ಮನೆಗೆ ಬಂದು, ಏನೂ ಮಾಡಲೂ ತೋಚದೇ, ಚಲನಚಿತ್ರಕ್ಕೆ ಹೋಗುವುದಾಗಿ ಅಮ್ಮನಿಗೆ ಹೇಳಿ ಹೊರಟೆ. ಅದೇ ರಾತ್ರಿ 9 ಘಂಟೆಗೆ ಗುರುಗಳು ತಮ್ಮ ಕೆಲವು ಶಿಷ್ಯರೊಡನೆ ಮನೆಗೆ ಬಂದರು. ಮನೆಯವರಿಗೆ ನಾನು ಪರೀಕ್ಷೆಯಲ್ಲಿ ನಪಾಸಾಗಿರುವುದು ಗೊತ್ತಿರಲಿಲ್ಲ. ಮೊಬೈಲ್ ಇಲ್ಲದ ಕಾಲವದು. ನಾನು ಮನೆಯಲ್ಲಿ ಇಲ್ಲವೆಂದು ಹೇಳಿದರು. ಆಗ ನಮ್ಮ ಗುರುಗಳು, ನಾವೆಲ್ಲರೂ ಚಲನಚಿತ್ರಕ್ಕೆ ಹೋಗುತ್ತಿದ್ದೇವೆ. ಅವನಿಗೂ ಬರಲು ಹೇಳಿ ಎಂದು ಹೊರಟರು. ನಾನು ನಂತರ ಮನೆಗೆ ಬಂದೆ. ಮನೆಯವರೆಲ್ಲರೂ ಗಾಬರಿಯಾಗಿದ್ದರು. ಅವರಿಗೆ ಪರೀಕ್ಷೆಯಲ್ಲಿ ನಪಾಸಾದ ವಿಷಯವನ್ನು ತಿಳಿಸಿ, ಗುರುಗಳು ಹೇಳಿದಂತೆ ಅವರಿದ್ದಲ್ಲಿಗೆ ಹೋಗಿ ಸೇರಿಕೊಂಡೆ. ಅವರೆಲ್ಲರೂ ನನಗೆ ಸಮಾಧಾನ ಹೇಳಿದರು. ಇದು ನಮ್ಮ ಗುರುಗಳಲ್ಲಿದ್ದ ತಾಯಿ ಹೃದಯದ ಚಿತ್ರಣ. ಹೇಳುತ್ತಾ ಹೋದರೆ ಕೊನೆಯಿಲ್ಲದ್ದು.

ಅವರ ಸಂಪರ್ಕದ ದಿನದಿಂದ ಇಲ್ಲಿಯವರೆಗೂ ಗುರುಗಳನ್ನು ನೆನೆಯದ ದಿನವಿಲ್ಲ. ಅವರ ಮಾತು, ಕೃತಿ, ನಡೆ, ನುಡಿಗಳು ಸದಾಕಾಲವೂ ದಾರಿದೀಪವಾಗಿವೆ. ಹೀಗಿದ್ದರು ನಮ್ಮ ಗುರುಗಳು.



**- ಡಾ. ಎಸ್. ಎನ್. ಕೃಷ್ಣಮೂರ್ತಿ,**
ಎಂ.ಡಿ., ಡಿ.ಸಿ.ಹೆಚ್.,
ಮಕ್ಕಳ ತಜ್ಞರು, ಬೆಂಗಳೂರು.

## ಸಿನಿಮಾ ಉತ್ಸವದಲ್ಲಿ ರಕ್ಷಿತ್ ಶೆಟ್ಟಿ



ದಾವಣಗೆರೆ, ಸೆ.13- ರಾಜ್ಯದಾದ್ಯಂತ 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾದ ವಿಜಯೋತ್ಸವ ಯಾತ್ರೆ ಕೈಗೊಂಡಿರುವ ನಟ ರಕ್ಷಿತ್ ಶೆಟ್ಟಿ ಅವರು ನಗರದ ಗೀತಾಂಜಲಿ ಚಿತ್ರಮಂದಿರಕ್ಕೆ ನಿನ್ನೆ ಭೇಟಿ ನೀಡಿದ್ದರು.

ತೆರೆದ ವಾಹನದಲ್ಲಿ ಚಿತ್ರಮಂದಿರದ ಆವರಣದಲ್ಲಿ ನಿಂತು ಅಭಿಮಾನಿಗಳನ್ನು ಉದ್ದೇಶಿಸಿ ಮಾತನಾಡಿದ ನಟ ರಕ್ಷಿತ್ ಶೆಟ್ಟಿ ಅವರು, 'ಸಪ್ತ ಸಾಗರದಾಚೆ ಎಲ್ಲೋ' ಕನ್ನಡ ಸಿನಿಮಾ ತೆರೆ ಕಂಡು ರಾಜ್ಯದಾದ್ಯಂತ ಸಿನೆಮಾ ಪ್ರಿಯರ ಮನಸ್ಸನ್ನು ಗೆದ್ದಿರುವುದು ಸಂತಸ ತಂದಿದೆ. ಸಿನಿಮಾದ ಭಾಗ 2 ಅಕ್ಟೋಬರ್ 28 ಕ್ಕೆ ತೆರೆ ಕಾಣಲಿದೆ ಎಂದರು.

ಪ್ರೇಕ್ಷಕರೆಲ್ಲರು ಚಿತ್ರಮಂದಿರಕ್ಕೆ ಬಂದು ಸಿನಿಮಾ ನೋಡಿ, ಚಿತ್ರ ನಿಮಗೆ ಇಷ್ಟ ಆದರೆ ಬೇರೆಯವರನ್ನು ಸಿನಿಮಾ ನೋಡಲು ಕಳುಹಿಸಿ ಎಂದು ಮನವಿ ಮಾಡಿದ ಅವರು, ನಾವು 2 ರಿಂದ 3 ವರ್ಷ ಸಿನಿಮಾ ಮೇಲೆ ಕೆಲಸ ಮಾಡೋದು ಕೊನೆಯದಾಗಿ ನಿಮ್ಮ ಪ್ರತಿಕ್ರಿಯೆ ನೋಡುವುದಕ್ಕೆ, ನಿಮ್ಮ ಮುಖದಲ್ಲಿ ನಗು ನೋಡಿದಾಗ ನಾವು ಮಾಡಿದ ಕೆಲಸಕ್ಕೆ ಪ್ರತಿಫಲ ಸಿಕ್ಕಿದಂತೆ ಎಂದರು. ಈ ವೇಳೆ ತಮ್ಮ ನೆಚ್ಚಿನ ನಟನ ಜೊತೆ ಅಭಿಮಾನಿಗಳು ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

## ಮಲೇಬೆನ್ನೂರಿನಲ್ಲಿ ಇಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 2.30ರವರೆಗೆ ಹೃದಯ ರೋಗ, ನರರೋಗ, ಕೀಲು ಮೂಳೆ ಮತ್ತು ಚರ್ಮರೋಗ, ಕಿಡ್ನಿ ಸ್ಟೋನ್, ಬಿಪಿ., ಸಕ್ಕರೆ ಕಾಯಿಲೆ, ಇಸಿಜಿ ಉಚಿತ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ದಾವಣಗೆರೆಯ ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಪ್ರೀತಿ ಆರೈಕೆ ಟ್ರಸ್ಟ್ ಇವರ ಜಂಟಿ ಆಶ್ರಯದಲ್ಲಿ ನಡೆಯುವ ಶಿಬಿರದ ನೇತೃತ್ವವನ್ನು ಹಿರಿಯ ವೈದ್ಯ ಡಾ. ಟಿ.ಜಿ. ರವಿಕುಮಾರ್ ವಹಿಸಲಿದ್ದಾರೆ. ಪುರಸಭೆ ಸದಸ್ಯರಾದ ಬಿ. ಮಂಜುನಾಥ, ರೇವಣಸಿದ್ದೇಶ ಹಾಗೂ ಸರ್ವ ಸದಸ್ಯರ, ಗ್ರಾಮಸ್ಥರು ಶಿಬಿರಕ್ಕೆ ಸಹಕಾರ ನೀಡುವರು. ವಿವರಕ್ಕೆ ಸಂಪರ್ಕಿಸಿ : 91644 65550.

## ಬರಪೀಡಿತ ತಾಲ್ಲೂಕುಗಳ ಪಟ್ಟಿಗೆ ಹರಿಹರ ತಾಲ್ಲೂಕು ಸೇರ್ಪಡೆ ಸಾಧ್ಯತೆ




ಮಲೇಬೆನ್ನೂರು, ಸೆ.13- ಹರಿಹರ ತಾಲ್ಲೂಕನ್ನು ಬರಪೀಡಿತ ತಾಲ್ಲೂಕುಗಳ ಪಟ್ಟಿಗೆ ಸೇರಿಸುವಂತೆ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಅವರು ಬುಧವಾರ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಸೇರಿದಂತೆ ಸಂಬಂಧ ಪಟ್ಟ ಸಚಿವರನ್ನು ಭೇಟಿ ಮಾಡಿ, ಒತ್ತಾಯಿಸಿದ್ದಾರೆ.

ಮಳೆಯಾಶ್ರಿತ ಪ್ರದೇಶಗಳಲ್ಲಿ ಬಿತ್ತನೆ ಮಾಡಿದ ಸಾವಿರಾರು ಎಕರೆ ಮೆಕ್ಕೆಜೋಳದ ಬೆಳೆ ಮಳೆ ಇಲ್ಲದೇ ಹಾಳಾಗಿ ಹೋಗಿದ್ದು, ರೈತರಿಗೆ ಅಪಾರ ನಷ್ಟವಾಗಿರುವ ಬಗ್ಗೆ ದಾಖಲೆಗಳ ಸಮೇತ ವರದಿಯನ್ನು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಕಂದಾಯ ಸಚಿವ ಕೃಷ್ಣಭೈರೇಗೌಡ ಅವರಿಗೆ ನೀಡಿ, ಜೊತೆಗೆ ಒತ್ತಡ ಹಾಕಿ, ಹರಿಹರ ತಾಲ್ಲೂಕನ್ನು ಬರಪೀಡಿತ ತಾಲ್ಲೂಕುಗಳ ಪಟ್ಟಿಯೊಳಗೆ ಬರುವಂತೆ ಮಾಡಿದ್ದೇನೆ ಎಂದು ನಂದಿಗಾವಿ ಶ್ರೀನಿವಾಸ್ 'ಜನತಾವಾಣಿ'ಗೆ ತಿಳಿಸಿದ್ದಾರೆ.

ಅಲ್ಲದೇ, ಭದ್ರಾ ನೀರು ಅಚ್ಚುಕಟ್ಟಿನ ಕೊನೆ ಭಾಗಕ್ಕೆ ತಲುಪದ ಕಾರಣ ಹತ್ತಾರು ಹಳ್ಳಿಗಳ ಸಾವಿರಾರು ಎಕರೆ ಭತ್ತ ಬೆಳೆಯುವ ಪ್ರದೇಶ ಖಾಲಿ ಇರುವ ಬಗ್ಗೆಯೂ ಸಿಎಂ, ಡಿಸಿಎಂ ಅವರ ಗಮನ ಸೆಳೆದಿದ್ದೇನೆ ಎಂದು ಶ್ರೀನಿವಾಸ್ ಹೇಳಿದರು.

## ಡಾ|| ಕೆ.ಪ್ರಕಾಶ ಅವರ 'ಎಸೆನ್ಸ್ ಆಫ್ ಎಸೆನ್ಸ್' ಪುಸ್ತಕ ಬಿಡುಗಡೆ



ಹರಿಹರ, ಸೆ. 13 - ಇಲ್ಲಿನ ಚಿಂತನ ಪ್ರತಿಷ್ಠಾನ ಕೇಂದ್ರದ ಆವರಣದಲ್ಲಿ ಕುಮಾರಪಟ್ಟಣದ ಡಾ|| ಪ್ರಕಾಶ ಅವರು ಬರೆದಿರುವ 'ಎಸೆನ್ಸ್ ಆಫ್ ಎಸೆನ್ಸ್' ಎಂಬ ಇಂಗ್ಲಿಷ್ ಅವತರಣಿಕೆಯ ಪುಸ್ತಕವನ್ನು ಚಿಂತನ ಟಿ.ವಿ ವ್ಯವಸ್ಥಾಪಕ ಸುಬ್ರಹ್ಮಣ್ಯ ನಾಡಿಗೇರ್ ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ಚಿಂತನ ಟಿ.ವಿ ವ್ಯವಸ್ಥಾಪಕರಾದ ಸುಬ್ರಹ್ಮಣ್ಯ ನಾಡಿಗೇರ್, ಚಿತ್ರಕಲಾವಿದ ಡಾ||ಜಿ.ಜೆ.ಮೆಹೆಂದಳೆ, ನಿರೂಪಕರಾದ ಸೌಮ್ಯ ರಾಮಕೃಷ್ಣ ಮತ್ತು ಪುಸ್ತಕ ರಚಿಸಿರುವ ಡಾ|| ಪ್ರಕಾಶ ಉಪಸ್ಥಿತರಿದ್ದರು.

## 10, 12 ನೇ ವಾರ್ಷಿಕ ಪರೀಕ್ಷಾ ಮಾದರಿ ಬದಲಾವಣೆ : ಎಐಡಿಎಸ್‌ಓ ಸ್ವಾಗತ

ದಾವಣಗೆರೆ, ಸೆ.13 - 10ನೇ ಮತ್ತು ದ್ವಿತೀಯ ಪಿಯು ತರಗತಿಯ ವಿದ್ಯಾರ್ಥಿಗಳಿಗೆ ನಂ. 1, 2,3 ಮಾದರಿಯಲ್ಲಿ ಪರೀಕ್ಷೆಗಳನ್ನು ನಡೆಸುವ ರಾಜ್ಯ ಸರ್ಕಾರದ ನಿರ್ಧಾರವನ್ನು ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಸ್ವಾಗತಿಸಿದ್ದಾರೆ. ವಾರ್ಷಿಕ ಪರೀಕ್ಷೆ ಮತ್ತು ಅದರಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪೂರಕ ಪರೀಕ್ಷೆ ಎಂಬ ಮಾದರಿಯನ್ನು ಕೈ ಬಿಟ್ಟು, ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳ ಮೇಲೆ ಉಂಟಾಗುವ ಒತ್ತಡವನ್ನು ಮತ್ತು ಅನುತ್ತೀರ್ಣರಾದ ವಿದ್ಯಾರ್ಥಿಗಳಲ್ಲಿ ಉಂಟಾಗುವ ಮಾನಸಿಕ ತಳಮಳವನ್ನು ನಿವಾರಿಸಲು ಇದು ಸಹಕಾರಿ ಆಗಬಹುದೆಂದು ಭಾವಿಸುತ್ತೇವೆ.

ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪಾಲಕರನ್ನು ಒಳಗೊಂಡ ಪ್ರಜಾತಾಂತ್ರಿಕ ಪ್ರಕ್ರಿಯೆ ಮುಖಾಂತರ ಈ ನಿರ್ಧಾರವನ್ನು ಅನುಷ್ಠಾನಕ್ಕೆ ತರಬೇಕು ಎಂದು ರಾಜ್ಯದ ವಿದ್ಯಾರ್ಥಿಗಳ ಪರವಾಗಿ ಎಐಡಿಎಸ್‌ಓ ಒತ್ತಾಯಿಸುತ್ತದೆ ಎಂದು ಕಚೇರಿ ಕಾರ್ಯದರ್ಶಿ ಮಹಾಂತೇಶ್ ಬೀಳೂರು ತಿಳಿಸಿದ್ದಾರೆ.

# ಪ್ರಗತಿಯ ಮುಂಚೂಣಿಯಲ್ಲಿ ಹರ ವಿವಿಧೋದ್ದೇಶ ಸಹಕಾರಿ ಸಂಘ




**11ನೇ ಸಾಮಾನ್ಯ ಸಭೆಯಲ್ಲಿ ಅಧ್ಯಕ್ಷ ಬಿ.ಸಿ. ಉಮಾಪತಿ ಹರ್ಷ**

ದಾವಣಗೆರೆ, ಸೆ.13- ಹರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತವು ಪ್ರಗತಿಯ ಮುಂಚೂಣಿಯಲ್ಲಿದೆ ಎಂದು ಸಹಕಾರಿಯ ಅಧ್ಯಕ್ಷ ಬಿ.ಸಿ. ಉಮಾಪತಿ ಹರ್ಷ ವ್ಯಕ್ತಪಡಿಸಿದರು.

ದಾವಣಗೆರೆ - ಹರಿಹರ ಅರ್ಬನ್ ಬ್ಯಾಂಕ್ ಸಹಕಾರ ಸಮುದಾಯ ಭವನದಲ್ಲಿ ಮೊನ್ನೆ ಜರುಗಿದ ಸಹಕಾರಿಯ 2022-23ನೇ ಸಾಲಿನ 11ನೇ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಹಕಾರಿಯು 2022-23ನೇ ಸಾಲಿನ ಆರ್ಥಿಕ ವರ್ಷದ ಅಂತ್ಯಕ್ಕೆ 50.56 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ. ಸದಸ್ಯರಿಗೆ ಶೇ.10 ಷೇರು ಲಾಭಾಂಶ ಘೋಷಣೆ ಮಾಡುವ ಮೂಲಕ ಅಭಿವೃದ್ಧಿ ಪಥದಲ್ಲಿ ಸಾಗಿದೆ. ಠೇವಣಿ ಸಂಗ್ರಹ ಹಾಗೂ ಸಾಲ ವಸೂಲಾತಿಯಲ್ಲಿ ಗಮನಾರ್ಹ ಪ್ರಗತಿ ಕಂಡಿದ್ದು ಇದಕ್ಕೆ ಸದಸ್ಯರ ಸಹಕಾರ ಪ್ರಮುಖ ಕಾರಣ ಎಂದು ತಿಳಿಸಿದರು.

ಕಳೆದ ಸಾಲಿನಲ್ಲಿ 1.15 ಲಕ್ಷ ರೂ ಷೇರು ಬಂಡವಾಳವಿದ್ದು, ಆರ್ಥಿಕ ವರ್ಷಾಂತ್ಯಕ್ಕೆ 1.39 ಕೋಟಿ ಷೇರು ಬಂಡವಾಳ ಹೊಂದಿದೆ. ಆರ್ಥಿಕ ವರ್ಷಾಂತ್ಯಕ್ಕೆ 12.06 ಕೋಟಿ ರೂ. ಠೇವಣಿ ಸಂಗ್ರಹವಾಗಿದೆ. ಪ್ರಸ್ತುತ ಸಹಕಾರಿಯು 10.42 ಕೋಟಿ ರೂಗಳ ಸಾಲವನ್ನು ಸದಸ್ಯರಿಗೆ ವಿತರಿಸಿದೆ ಎಂದು ತಿಳಿಸಿದರು.

ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಸಭೆ ಉದ್ಘಾಟಿಸಿ, ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.

ಸಹಕಾರಿಯ ವಿಶೇಷ ಆಹ್ವಾನಿತರಾದ ಬಾದಾಮಿ ಜಯಣ್ಣನವರು 2022-23ನೇ ಸಾಲಿನ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ ಮಂಡಿಸಿದರು. ನಿರ್ದೇಶಕ ಅಂದನೂರು ಮುರುಗೇಶಪ್ಪ ಕಳೆದ ಸಾಲಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ಓದಿ ದಾಖಲು ಮಾಡಿದ ನಂತರ ವಿಶೇಷ ಆಹ್ವಾನಿತ ಶಿವಕುಮಾರ್ ಕೆ 2022-23ನೇ ಸಾಲಿನ ಆಡಳಿತ ವರದಿಯನ್ನು ಸಭೆಯ ಮುಂದೆ ಮಂಡಿಸಿದರು.

ಕಾರ್ಯದರ್ಶಿ ಚನ್ನಮಲ್ಲಿಕಾರ್ಜುನ ಕೆ. ಲಾಭ-ನಷ್ಟ ಮತ್ತು ಅಢಾವೆ ಪತ್ರಗಳನ್ನು ಮಂಡಿಸಿದರು. ಸಹಕಾರ್ಯದರ್ಶಿ ಮಲ್ಲಿಕಾರ್ಜುನ ಎಂ. ಲೆಕ್ಕಪರಿಶೋಧನಾ ವರದಿಯ ಸೂಚನೆಗಳಿಗೆ ಆಡಳಿತ ಮಂಡಳಿ ಸಲ್ಲಿಸಿದ ಪಾಲನಾ ವರದಿ ಮಂಡಿಸಿದರು.

ಉಪಾಧ್ಯಕ್ಷ ಎಂ ದೊಡ್ಡಪ್ಪ 2022-23ನೇ ಸಾಲಿನ ಲಾಭ ವಿಲೇವಾರಿಯನ್ನು ಮಂಡಿಸಿ ಶೇ.10ರಷ್ಟು ಷೇರು ಲಾಭಾಂಶ ಘೋಷಿಸಿದರು.

ನಿರ್ದೇಶಕ ಚೈತನ್ಯಕುಮಾರ ಸಿ.ಬಿ. 2023-24ನೇ ಸಾಲಿನ ಮುಂಗಡ ಪತ್ರ ಮಂಡಿಸಿದರು. ಶಿವಶಂಕರ್ ಕೈದಾಳೆ, ವಾರ್ಷಿಕ ಕಾರ್ಯಾಚರಣೆ ಯೋಜನೆ ಮಂಡಿಸಿ, ಪ್ರಸಕ್ತ ಆರ್ಥಿಕ ವರ್ಷದಲ್ಲಿ 15 ಕೋಟಿ ರೂ. ಠೇವಣಿ ಸಂಗ್ರಹಣೆಯ ಗುರಿ, ನಿವ್ವಳ 53.98 ಲಕ್ಷ ರೂ.ಲಾಭ ಗಳಿಕೆಯ ಗುರಿ ಹೊಂದಲಾಗಿದೆ ಎಂದರು.

ನಿಕಟಪೂರ್ವ ನಿರ್ದೇಶಕರಾದ ಶ್ರೀಮತಿ ವಿನುತಾ ಎಂ.ವಿ. ಶ್ರೀಮತಿ ಗೀತಾ ಪ್ರಶಾಂತ್, ರಮೇಶ ಡಿ, ರವಿಕುಮಾರ ಪಿ.ವಿ, ಬಾದಾಮಿ ಚಂದ್ರಶೇಖರ್, ಸುಂಕದ ಜಿ.ವಿ, ಮಂಜುನಾಥ ಎಸ್. ಇವರಗಳನ್ನು ಗೌರವಿಸಲಾಯಿತು.

ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿದ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ತಲಾ 1 ಸಾವಿರ ರೂ. ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು. ಸಕಾಲಕ್ಕೆ ಸಾಲ ಮರುಪಾವತಿ ಮಾಡಿದ ಸದಸ್ಯರನ್ನು ಸನ್ಮಾನಿಸಲಾಯಿತು. ನಿರ್ದೇಶಕರುಗಳಾದ ನಾಗರಾಜ ಹೆಚ್.ಎಂ , ಹಾಲೇಶ ಅಂಗಡಿ, ಶ್ರೀಮತಿ ಪುಷ್ಪಾವತಿ ಹೆಚ್.ವಿ., ಯೋಗೇಶ ಹೆಚ್.ಎಸ್., ಹೆಚ್.ಎಸ್.ಅವ್ವಣ್ಣಪ್ಪ, ಎಸ್. ಮಲ್ಲನಗೌಡ್ರು, ಎಸ್.ಎಂ. ಸ್ವಾಮಿ, (ವಾಣಿ ಶಿವಣ್ಣ) ಉಪಸ್ಥಿತರಿದ್ದರು. ನಿರ್ದೇಶಕರಾದ ಶ್ರೀಮತಿ ಅನಿತಾ ಸಿ.ಪಿ ಸ್ವಾಗತಿಸಿದರು. ಅಂಗಡಿ ಸಂಗಮೇಶ್, ಕಲಿವೀರ ಕಳ್ಳಿಮನಿ, ಕುಬೇರಪ್ಪ ಬಿ.ಯು. ನಿರೂಪಿಸಿದರು.

## ಯಲವಟ್ಟಿಯಲ್ಲಿಂದು ಪುರಾಣ ಮುಕ್ತಾಯ

ಮಲೇಬೆನ್ನೂರು ಸಮೀಪದ ಯಲವಟ್ಟಿ ಗ್ರಾಮದ ಶ್ರೀ ಗುರು ಸಿದ್ಧಾಶ್ರಮದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಆರಂಭಿಸಿದ್ದ ಸದ್ಗುರು ಶ್ರೀ ಸಿದ್ಧಾರೂಢರ ಪುರಾಣ ಮಂಗಲೋತ್ಸವ, ಅಮಾವಾಸ್ಯೆ ಸತ್ಸಂಗ ಕಾರ್ಯಕ್ರಮವು ಇಂದು ಸಂಜೆ 7 ಗಂಟೆಗೆ ಶ್ರೀ ಯೋಗಾನಂದ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ನಡೆಯಲಿದೆ. ಮುಖ್ಯ ಅತಿಥಿ : ಡಾ. ಬಿ. ಚಂದ್ರಶೇಖರ್ ಹಾಗೂ ಮತ್ತಿತರರು.

### ತಿದ್ದುಪಡಿ

ದಿನಾಂಕ 09.09.2023ರ ಜನತಾವಾಣಿ ಸಂಚಿಕೆಯ 5ನೇ ಪುಟದಲ್ಲಿ ಪ್ರಕಟವಾಗಿರುವ ದಿ **ದಾವಣಗೆರೆ ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ., ದಾವಣಗೆರೆ** ಇವರಿಗೆ ಸೇರಿದ ಜಾಹಿರಾತಿಗೆ ಸಂಬಂಧಿಸಿದಂತೆ ಮಾನ್ಯ ಸದಸ್ಯರುಗಳ ಗಮನಕ್ಕೆ ಎಂದಾಗಿದ್ದು ಅದನ್ನು **ಪ್ರಕಟಣೆ** ಎಂದು ತಿದ್ದಿ ಓದಿಕೊಳ್ಳುವಂತೆ ವಿನಂತಿ.
ವ್ಯವಸ್ಥಾಪಕರು


**ಸೈಟ್ ಮಾರಾಟಕ್ಕೆ(KHB)**
ಕರ್ನಾಟಕ ಹೌಸಿಂಗ್ ಬೋರ್ಡ್ ಬೈಪಾಸ್ ಹೊಸ ಕುಂದವಾಡದ ತುಂಗಭದ್ರಾ ಬಡಾವಣೆಯಲ್ಲಿ 20x30 ಉತ್ತರ (13 ಲಕ್ಷ) 30x40 ದಕ್ಷಿಣ (28 ಲಕ್ಷ) 40x60 ದಕ್ಷಿಣ (64 ಲಕ್ಷ)
ಕಿರಣ್ ಭೂಸನೂರ್ (ಏಜೆಂಟ್)
98440-63409
(ಲೊಕೇಶನ್ ತುಂಬಾ ಚನ್ನಾಗಿ ಇದೆ)

**ಬೇಕಾಗಿದ್ದಾರೆ**
ಆಫೀಸ್ ಕೆಲಸಕ್ಕೆ ಪಿಯುಸಿ/ಡಿಗ್ರಿ ಮತ್ತು ಬೇಸಿಕ್ ಕಂಪ್ಯೂಟರ್ಸ್ ಆದ ಮಹಿಳೆ ಬೇಕಾಗಿದ್ದಾರೆ.
98861 78654

**ಮನೆ ಬಾಡಿಗೆಗೆ ಇದೆ (ಸಸ್ಯಹಾರಿಗಳಿಗೆ ಮಾತ್ರ)**
ಗ್ರೌಂಡ್ ಫ್ಲೋರ್, 30x40 ಅಳತೆಯ 2 BHK ಪಶ್ಚಿಮ ದಿಕ್ಕು, # 361/67, 'ಬಿ' ಬ್ಲಾಕ್, ಜಯನಗರ, ದಾವಣಗೆರೆ.
ಫೋ. : 94488 43914

**ಸೈಟ್ ಮಾರಾಟಕ್ಕಿದೆ**
ಶಿವ-ಪಾರ್ವತಿ ಬಡಾವಣೆ, ಶಾಮನೂರು (30x40) ಪೂರ್ವ ದಿಕ್ಕು (East Face)
ಮಾಲೀಕರು 81236 83761

**ಸೈಟುಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆಯಲ್ಲಿ 30x50 North, ವಿನಾಯಕ ಬಡಾವಣೆಯಲ್ಲಿ 45x48 South, 33x40 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**EC / ಇಸಿ, E-swathu, Khatha Change Building Licence & Property Documents, Loans-All banks**
96118-66449

**ಮನೆಗಳು ಬಾಡಿಗೆಗೆ ಇವೆ**
ಶ್ರೀನಿವಾಸ ನಗರ 10ನೇ ಕ್ರಾಸ್, 2ನೇ ಮಹಡಿಯಲ್ಲಿ 1BHK, 10x30, 10x30 ಎರಡು ಸೀಟಿನ ಮನೆ ಮಾರಾಟಕ್ಕಿದೆ. ದೇವರಾಜ್ ಸೊಸೈಟಿ ಹತ್ತಿರ, ಲೇನಿನ್ ನಗರ, ದಾವಣಗೆರೆ.
98800 68009

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ ಉತ್ತರ 40x60 (ಅಕ್ಕ-ಪಕ್ಕ) (40 feet Road) 30x43, ಶಿವಕುಮಾರ ಸ್ವಾಮಿ ಬಡಾವಣೆ ಉತ್ತರ 30x40, ಜೆ.ಹೆಚ್. ಪಟೇಲ್ ಬಡಾವಣೆ ಪಶ್ಚಿಮ 40x60, 30x50, ಶಿವ-ಪಾರ್ವತಿ ಬಡಾವಣೆ ಪೂರ್ವ 40x60, 30x50, 30x40.
ಐಗೂರು ವಿಜಯಕುಮಾರ
9945702495

**ಬೇಕಾಗಿದ್ದಾರೆ**
ಕನಿಷ್ಠ ಓದಲು ಮತ್ತು ಬರೆಯಲು ಬರುವ ಹಾಗೂ ಅನುಭವವಿರುವ ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ.
SRV ಅಸೋಸಿಯೆಟ್ಸ್, ದಾವಣಗೆರೆ. ವಿದ್ಯಾನಗರ, ದಾವಣಗೆರೆ-5.
9035536252, 7353950027

**ಸಿವಿಲ್ ಇಂಜಿನಿಯರ್ ಬೇಕಾಗಿದ್ದಾರೆ**
ಆಟೋ ಕ್ಯಾಡ್ ಆಗಿರುವ ಸಿವಿಲ್ ಇಂಜಿನಿಯರ್ ಪುರುಷ ಮತ್ತು ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ. ಜೆ.ಸಿ.ಬಿ. ಹನುಮಂತಪ್ಪ ಆಫೀಸ್, ಸಪ್ತಗಿರಿ ಸ್ಕೂಲ್, ಹತ್ತಿರ, ಕುಂದುವಾಡ ರಸ್ತೆ, ದಾವಣಗೆರೆ.
99640 05604, 76766 96963

**ಬೇಕಾಗಿದ್ದಾರೆ**
ದಾವಣಗೆರೆ ಬೆಣ್ಣೆ ದೋಸೆ ಮಾಡುವ ಮಾಸ್ಟರ್ ಬೇಕಾಗಿದ್ದಾರೆ.
ಸ್ಥಳ : ಮಾರತಹಳ್ಳಿ, ಬೆಂಗಳೂರು.
ಮೊ : 63822 95021
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.

**ಸೈಟ್ ಮನೆ ಮಾರಾಟಕ್ಕೆ(JHP)**
J H ಪಟೇಲ್ ಬಡಾವಣೆಯಲ್ಲಿ 30X50, 30X40, ಮನೆ 20X30, 30X50, 40X60,
ಸೈಟ್ ಕಿರಣ್ ಭೂಸನೂರ್ (ಏಜೆಂಟ್)
98440-63409

**ಕರ್ನಾಟಕ ಗೃಹ ಮಂಡಳಿಯಲ್ಲಿ ಮನೆ, ಸೈಟುಗಳು ಮಾರಾಟಕ್ಕಿವೆ**
30x50 East ಮನೆ, 60 ಲಕ್ಷಕ್ಕೆ 40x60, 40x60 South ಅಕ್ಕ-ಪಕ್ಕ, 30x50 North West ಕಾರ್ನರ್.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**KASHMIR TOURS**
Dep : 11th Oct 6 Days
All inclusive Group Tour.
DVG WORLD TOURS
P.J. Extension, Dvg.
99006 66122

**ಸೈಟುಗಳು ಮಾರಾಟಕ್ಕಿವೆ**
ಕುಂದುವಾಡ ರಸ್ತೆ, ಶಿವಗಂಗಾ ಚೌಲ್ಟ್ರಿ ಹಿಂಭಾಗ, 40 ಅಡಿ ರಸ್ತೆಗೆ, 40x60, 40x60 ಪೂರ್ವಕ್ಕೆ, 60x83 ದಕ್ಷಿಣ ಅಮರ್‌ನಾಥ ಲೇಔಟ್‌ನಲ್ಲಿ 28x50 ಪೂರ್ವಕ್ಕೆ, ಗ್ಲಾಸ್ ಹೌಸ್ ಎನ್‌ಎಂಕೆ ಲೇಔಟ್‌ನ ಪಕ್ಕದಲ್ಲಿ 30x40 ಪಶ್ಚಿಮ.
ಬಸವರಾಜ್ ಎನ್.
ಫೋನ್ : 98440 84229

**ಡ್ರೈವರ್ ಬೇಕಾಗಿದ್ದಾರೆ**
ಡ್ರೈವಿಂಗ್ ಕೆಲಸವನ್ನು ನಿರ್ವಹಿಸುತ್ತಾ ಅಂಗಡಿ ಕೆಲಸವನ್ನು ನಿರ್ವಹಿಸಬಲ್ಲ ಡ್ರೈವರ್ ಬೇಕಾಗಿದ್ದಾರೆ.
94480 38223

**ಕೆಲಸಕ್ಕೆ ಬೇಕಾಗಿದ್ದಾರೆ**
ನಮ್ಮ ಮನೆಯಲ್ಲಿ 4 ರಿಂದ 6 ಜನರಿಗೆ. ಸಸ್ಯಾಹಾರಿ ಹಾಗು ಮಾಂಸಾಹಾರಿ ಅಡುಗೆ ಮಾಡುವ ಹೆಂಗಸರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ.
ಅಭಿಷೇಕ್ ಟಿಂಬರ್ & ಸಾಮಿಲ್
# 24 ಆರ್.ಎಂ.ಸಿ. ಲಿಂಕ್ ರಸ್ತೆ, ವಿನಾಯಕ ಚಿತ್ರಮಂದಿರದ ಹತ್ತಿರ, ಬಂಬೂ ಬಜಾರ್, ಆನೆಕೊಂಡ, ದಾವಣಗೆರೆ-577003.
99727 51777, 77605 65777

**ಮಳಿಗೆ ಬಾಡಿಗೆಗೆ ಇದೆ**
(ಹದಡಿ ರಸ್ತೆ, ತರಳಬಾಳು ಬಡಾವಣೆ) ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತದ ಎದುರು, ನಮ್ಮೂರು ತಿಂಡಿ ಹೋಟೆಲ್ ಎದುರು, 2050 ಚ.ಅ.
96863 96992

**ಗೋಡೌನ್ ಬೇಕಾಗಿದೆ**
ದಾವಣಗೆರೆ ಎಪಿಎಂಸಿಯಲ್ಲಿ 5000 ಚದರಡಿ ಗೋಡೌನ್ ಖರೀದಿಗೆ ಬೇಕಾಗಿದೆ.
ಸಂಪರ್ಕಿಸಿ :
74063 96332

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**ಜಮೀನು/ಸೈಟು**
ಕೊಳ್ಳಲು ಬೇಕಾಗಿರುತ್ತದೆ.
ದಾವಣಗೆರೆ
ಶರ್ಮಾ
63608 66997

**ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. 8000-11000 ಸಂಬಳ ವಿನೋಬ ನಗರ, 2ನೇ ಬಸ್ ಸ್ಟಾಪ್ ದಾವಣಗೆರೆ.
8884595873, 91130 53483

**ಬೇಕಾಗಿದ್ದಾರೆ**
ನಗರದ ಲಾಡ್ಜ್‌ನಲ್ಲಿ ಹಗಲು ಹಾಗೂ ರಾತ್ರಿ ಪಾಳೆಯದಲ್ಲಿ ಕೆಲಸ ಮಾಡಲು ರೂಂ ಬಾಯ್ಸ್ ಬೇಕಾಗಿದ್ದಾರೆ. 40ವರ್ಷ ಮೇಲ್ಪಟ್ಟವರು ಹಾಗೂ ಸ್ಥಳೀಯರಿಗೆ ಆದ್ಯತೆ.
74835 15370

**ಸೈಟುಗಳು ಮಾರಾಟಕ್ಕಿವೆ**
40x60 ದಕ್ಷಿಣ ಕಮರ್ಷಿಯಲ್ ಇದೆ, 30x45 ದಕ್ಷಿಣ ಸಿದ್ಧ ವೀರಪ್ಪ ಬಡಾವಣೆಯಲ್ಲಿ 44x60 ಪೂರ್ವ ಎಂ.ಸಿ.ಸಿ. 'ಎ' ಬ್ಲಾಕ್ ಇದೆ.
ಏಜೆಂಟರು S. ಯಲ್ಲೋಜಿರಾವ್
97418 11694

**ಜಮೀನುಗಳು ಮಾರಾಟಕ್ಕಿವೆ**
ಹಳೇಬಾತಿ 4 ಎಕರೆ 20 ಗುಂಟೆ ಮಲ್ಲಶೆಟ್ಟಿ ಹಳ್ಳಿ 2 ಎಕರೆ ಇದೆ ಯಿಂದ 3 ಕಿ.ಮಿ. ಜಗಳೂರು ಮುಖ್ಯ ರಸ್ತೆ 4 ಎಕರೆ 20 ಗುಂಟೆ ಇದೆ.
S. ಯಲ್ಲೋಜಿರಾವ್ ಏಜೆಂಟರು
97418 11694

**ಬಾಡಿಗೆಗೆ ಇದೆ**
ಹೋಟೆಲ್ ಮಾಡಲು ಹೊಸಗಾಡಿ ಬಾಡಿಗೆಗೆ ಇದೆ.
90080 92650

**ಕೆಲಸಕ್ಕೆ ಬೇಕಾಗಿದ್ದಾರೆ**
ಬೇಸಿಕ್ ಕಂಪ್ಯೂಟರ್ ಆಗಿರುವ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
ವಿಳಾಸ : ಮಂಜು ಡಿಜಿಟಲ್ ಅಶೋಕ ರೋಡ್, 1ನೇ ಕ್ರಾಸ್, ವಿ.ವಿ.ಎಸ್ ಕಾಂಪ್ಲೆಕ್ಸ್, ದಾವಣಗೆರೆ.
98449 05344

**ಲಿಂಗಾಯತ ವಧು ಬೇಕಾಗಿದೆ**
ಲಿಂಗಾಯತ (ಪಂಚಮಸಾಲಿ) 29 ವರ್ಷದ BE, MS, Australiaದಲ್ಲಿ ಕೆಲಸದಲ್ಲಿರುವ ಸುಂದರ ವರನಿಗೆ ಸೂಕ್ತ BE ಪೂರೈಸಿದ ವಧು ಬೇಕಾಗಿದೆ.
98807 29108

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**HOUSE FOR RENT ROOMS**
1BHK, 2BHK 3 BHK Vidya nagara, Siddaveerappa Layout, Anjaneya Layout, J.H Patel layout.
77955 06795
Dakshith Iynahalli

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.


**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗು ಕಾಫಿ ಮಾಡುವರು ಬೇಕಾಗಿದ್ದಾರೆ.
ಸ್ಥಳ: 1946 ಪ್ರಕಾಶ್ ಕಾಫಿ ವರ್ಕ್ಸ್. ಮಾಮಾಸ್ ಜಾಯಿಂಟ್ ರೋಡ್ ಮತ್ತು ಪ್ರಕಾಶ್ ಕಾಫಿ ವರ್ಕ್ಸ್, ವಿಜಯಲಕ್ಷ್ಮಿ ರಸ್ತೆ.
99004 38052, 97401 53513

**ಉದ್ಯೋಗದ ಚಿಂತೆಯೇ?**
ಹಣ ಗಳಿಸುವ ಮೂಲ ಹುಡುಕುತ್ತಿದ್ದೀರಾ? ಟೆಲಿಕಾಲರ್ಸ್ ಆಗಿ ಸಂಪಾದನೆ ಮಾಡಲು ಇಚ್ಛಿಸುವಿರಾ? ನಿಮಗೆ ಮಾತನಾಡುವ ಕಲೆ ಗೊತ್ತಿದ್ದರೆ ಸಾಕು. ಮಾಸಿಕ 7-8 ಸಾವಿರ ವೇತನ ಕೊಡಲಾಗುವುದು. ಹಾಗಾದರೆ ಕೂಡಲೇ ಸಂಪರ್ಕಿಸಿ. 84314 71008

**ಅನುದಾನಿತ ಸಂಘ ಹಸ್ತಾಂತರಕ್ಕಿದೆ**
ಈಗಾಗಲೇ ಅನುದಾನ ಪಡೆಯುತ್ತಿರುವ ಸಂಘವು ಹಸ್ತಾಂತರಕ್ಕಿದೆ.
ಇಚ್ಛೆಯುಳ್ಳವರು ಸಂಪರ್ಕಿಸಿ :
97425 98520

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.



ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಿಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಕೆಲಸಕ್ಕೆ ಬೇಕಾಗಿದ್ದಾರೆ**
ತರಳಬಾಳು ಬಡಾವಣೆಯಲ್ಲಿ ಹೊಸದಾಗಿ ಪ್ರಾರಂಭವಾಗುವ ಕ್ಲಿನಿಕ್‌ಗೆ
ರಿಸೆಪ್ಷನಿಸ್ಟ್–01 (ಬಿ.ಕಾಂ. ಪದವಿ ಅರ್ಹತೆ)
ಆಯಾ ಕೆಲಸ–01
ಫಿಸಿಯೋಥೆರಪಿಸ್ಟ್–01
ಸಂಪರ್ಕಿಸಿ :
86186 42929

**ಬೇಕಾಗಿದ್ದಾರೆ**
ದಾವಣಗೆರೆಯ ವಿನಾಯಕ ಬಡಾವಣೆ (ವಿದ್ಯಾನಗರ) ದಲ್ಲಿರುವ HRH ಬಯೋಫರ್ಟಿಲೈಜರ್ಸ್‌ನಲ್ಲಿ ಕೆಲಸ ಮಾಡಲು ಯುವಕ-ಯುವತಿಯರು ಬೇಕಾಗಿದ್ದಾರೆ. ಊಟ, ವಸತಿ ಸೌಲಭ್ಯವಿರುತ್ತದೆ.
77952 60481, 96321 19811

**24X7 CAR TAXI**
ಬಾಡಿಗೆಗೆ
ಸಂಪರ್ಕಿಸಿ
91642 56425
97436 54365

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟ್‌ಗೆ ಯುವಕರು, ಬೇಕರಿಯಲ್ಲಿ ಕೆಲಸ ಮಾಡಲು ಯುವಕ/ ಯುವತಿಯರು ಬೇಕಾಗಿದ್ದಾರೆ.
ನಿಟುವಳ್ಳಿ, HKR ಸರ್ಕಲ್, ದಾವಣಗೆರೆ.
7411399485

**ಹುಡುಗರು ಬೇಕಾಗಿದ್ದಾರೆ**
ಪೈಪ್ ಹಾಗೂ ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ.
97388 27452, 74110 25934

**ಷೇರ್ ಬಾಂಡ್ ಕಳೆದಿದೆ**
ಕುಕ್ಕುವಾಡ ಷುಗರ್ ಕಂಪನಿಯ ಷೇರುದಾರರಾಗಿದ್ದು, ಪ್ರಕಾಶ್ ಎಂ.ಎನ್. ಬಿನ್ ನಾಗೇಂದ್ರಪ್ಪ ಎಂಬ ಹೆಸರಿನಲ್ಲಿರುವ ಷೇರ್ ಬಾಂಡ್ ನಂ. 108252 ನಂಬರಿನ ಬಾಂಡ್ ದಿನಾಂಕ 25.08.2023ರಂದು ವಾಸದ ಮನೆಯನ್ನು ಸ್ವಚ್ಛಗೊಳಿಸುವಾಗ ಕಳೆದು ಹೋಗಿದ್ದು, ಯಾರಿಗಾದರೂ ಸಿಕ್ಕಲ್ಲಿ ಈ ಕೆಳಕಂಡ ಮೊಬೈಲ್ ನಂಬರಿಗೆ ತಿಳಿಸಬೇಕಾಗಿ ವಿನಂತಿ.
ಪ್ರಕಾಶ್ ಎಂ.ಎನ್. 97420 34548

**ಓಂ ಸಾಯಿ ಬಲಮುರಿ ಗಣಪತಿ ಜ್ಯೋತಿಷ್ಯಾಲಯ**
ಪಂಡಿತ್ ಬಿ.ಎಸ್.ರಾವ್
ಇವರು ನುಡಿದಂತೆ ನಡೆಯುವರು. ಸಮಸ್ಯೆಗಳಾದ ವ್ಯಾಪಾರದಲ್ಲಿ ಲಾಭ-ನಷ್ಟ, ವಿದ್ಯೆ, ಉದ್ಯೋಗ, ಲೈಂಗಿಕ, ಸ್ತ್ರೀ ಪುರುಷ ವಶೀಕರಣ, ಶತ್ರುನಾಶ, ಮನೆಯಲ್ಲಿ ಅಶಾಂತಿ, ಗಂಡ-ಹೆಂಡತಿ ಕಲಹ. ನಿಮ್ಮ ಯಾವುದೇ ಸಮಸ್ಯೆಗೆ ದೂರವಾಣಿ ಮುಖಾಂತರ 2 ದಿನಗಳಲ್ಲಿ ಪರಿಹಾರ.ಇಂದೇ ಕರೆ ಮಾಡಿ. ನಿಮ್ಮ ನಂಬಿಕೆಗೆ ಇಲ್ಲಿ ಮೋಸವಿಲ್ಲ.
ಮೊ : 99807 70791

## ಮಾಯಕೊಂಡ ಗ್ರಾಮ ಪಂಚಾಯತಿ ಉಪಾಧ್ಯಕ್ಷರಾಗಿ ಎಸ್.ಆರ್.ಬಸವರಾಜಪ್ಪ



ಮಾಯಕೊಂಡ, ಸೆ. 14 - ಇಲ್ಲಿನ ಗ್ರಾಮ ಪಂಚಾಯತಿ ಉಪಾಧ್ಯಕ್ಷರಾಗಿ ಎಸ್. ಆರ್. ಬಸವರಾಜಪ್ಪ ಅವಿರೋಧವಾಗಿ ಆಯ್ಕೆಯಾದರು.

ಎನ್. ಎಂ. ಮಂಜುನಾಥ ಅವರ ರಾಜೀನಾಮೆಯಿಂದ ಖಾಲಿಯಾದ ಸ್ಥಾನಕ್ಕೆ ಬುಧವಾರ ಚುನಾವಣೆ ನಡೆಯಿತು. ಎಸ್. ಆರ್. ಬಸವರಾಜಪ್ಪ ಹೊರತು ಪಡಿಸಿ ಬೇರೆ ಯಾವ ನಾಮಪತ್ರ ಸಲ್ಲಿಕೆಯಾಗದ ಕಾರಣ ಅವರನ್ನು ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಜಿಲ್ಲಾ ಪಂಚಾಯತಿ ಸಹಾಯಕ ಯೋಜನಾಧಿಕಾರಿ ಎಚ್. ಬಸವರಾಜ್ ಘೋಷಿಸಿದರು.

ಗ್ರಾಮ ಪಂಚಾಯತಿ ಸದಸ್ಯರಾದ ವಗ್ಗಪ್ಪರ ಮಲ್ಲಪ್ಪ, ಎನ್.ಎಂ. ಮಂಜುನಾಥ, ಹನುಮಂತಪ್ಪ, ಲತಾ ಮಲ್ಲಿಕಾರ್ಜುನ, ಸಾಕಮ್ಮ ನಿಂಗರಾಜು, ಸುನಿತಾ ಹನುಮಂತಪ್ಪ, ಗೌರಮ್ಮ ಶಿವಮೂರ್ತಿ, ಮುಖಂಡರಾದ ರಾಮಜೋಗಿ ಪರಮೇಶ್ವರಪ್ಪ, ರೇವಣ ಸಿದ್ದಪ್ಪ, ಮಲ್ಲೇಶ್, ನಿಂಗಣ್ಣ, ಪಿಡಿಒ. ನಾಗರಾಜ್ ಮತ್ತು ಸಿಬ್ಬಂದಿ ಹಾಗೂ ಗ್ರಾಮಸ್ಥರು ಇದ್ದರು.

## ಮಗುವಿಗೆ ಲಸಿಕೆಗಳನ್ನು ತಪ್ಪದೇ ಹಾಕಿಸಿ



ಮಲೇಬೆನ್ನೂರು, ಸೆ.13- ದೇವರಬೆಳಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯ ಕುಣೆಬೆಳಕೆರೆ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಸೋಮವಾರ "ತೀವ್ರತರವಾದ ಮಿಷನ್ ಇಂದ್ರಧನುಷ್ 5.0 ಅಭಿಯಾನ'' ಕಾರ್ಯಕ್ರಮ ನಡೆಸಲಾಯಿತು.

**ಕುಣೆಬೆಳಕೆರೆ : ಮಿಷನ್ ಇಂದ್ರಧನುಷ್ ಅಭಿಯಾನದಲ್ಲಿ ಡಾ. ಮುರುಳೀಧರ್**

ಜಿಲ್ಲಾ ಕ್ಷಯ ರೋಗ ನಿಯಂತ್ರಣಾಧಿಕಾರಿಗಳೂ ಆದ ತಾ. ನೋಡಲ್ ಅಧಿಕಾರಿ ಡಾ. ಮುರುಳೀಧರ್ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗಿ ನಿಮ್ಮ ಮಗುವಿಗೆ ಕಡ್ಡಾಯವಾಗಿ ಹಾಕಿಸಬೇಕಾದ ಲಸಿಕೆಗಳನ್ನು ಪೂರ್ಣಗೊಳಿಸಿ ಅವರನ್ನು ರೋಗಗಳಿಂದ ದೂರವಿಡಿ ಎಂದು ತಾಯಂದಿರಿಗೆ ಹೇಳಿದರು.

ತಾ. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ, ಆರೋಗ್ಯ ಸುರಕ್ಷಾಧಿಕಾರಿ ಸುಧಾಸುಲೇಖ, ಕ್ಷಯ ರೋಗ ಮೇಲ್ವಿಚಾರಕ ಮಂಜುನಾಥ್, ಅವರು ಮಿಷನ್ ಇಂದ್ರಧನುಷ್ ಅಭಿಯಾನ ಕುರಿತು ಮಾಹಿತಿ ನೀಡಿದರು.

ಆರೋಗ್ಯ ಕೇಂದ್ರದ ರೇಖಾ, ನಯನಾರೆಡ್ಡಿ, ಅಕ್ಷತಾ ಸೇರಿದಂತೆ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತರು ಈ ವೇಳೆ ಹಾಜರಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಸೇಂಟ್ ಜಾನ್ಸ್‌ನಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ





ದಾವಣಗೆರೆ, ಸೆ. 13 - ಸೇಂಟ್‌ಜಾನ್ಸ್ ವಿದ್ಯಾಸಂಸ್ಥೆಯ ನರ್ಸರಿ ವಿಭಾಗದ ಮಕ್ಕಳು ಕೃಷ್ಣ ಮತ್ತು ರಾಧೆಯ ವೇಷವನ್ನು ಧರಿಸಿ ಕೃಷ್ಣನ ಬಾಲ್ಯ ಲೀಲೆಗಳನ್ನು ತಮ್ಮ ತೊದಲು ನುಡಿಯ ಮೂಲಕ ಕೃಷ್ಣ ಸಂದೇಶವನ್ನು ಸಾರುತ್ತಾ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಿದರು.

ವಿದ್ಯಾಸಂಸ್ಥೆಯ ಕಾರ್ಯದರ್ಶಿ ಉಮಾಪತಯ್ಯ ಹಾಗೂ ಅವರ ಪತ್ನಿ ಶ್ರೀಮತಿ ಶಾಂತಲಾ ಆತಿಥ್ಯ ವಹಿಸಿದ್ದರು. ಮಕ್ಕಳು ಶ್ರೀಕೃಷ್ಣಂ ಒಂದೇ ಜಗದ್ಗುರು, ಯದಾ ಯದಾಹಿಃ ಧರ್ಮಶ್ಚ ಎಂದು ಕೃಷ್ಣ ಸಂದೇಶವನ್ನು ಸಾರುತ್ತಾ ಕಾರ್ಯಕ್ರಮದ ಮೆರುಗುನ್ನು ಇಮ್ಮಡಿಗೊಳಿಸಿದರು.

ಸಂಸ್ಥೆಯ ಅಧ್ಯಕ್ಷ ಹೆಚ್. ಅನಿಲ್ ಕುಮಾರ್, ಖಜಾಂಚಿಗಳಾದ ಪ್ರವೀಣ್ ಹುಲ್ಲುಮನೆಯವರು ಪ್ರಾಂಶುಪಾಲ ಆರ್. ಸಯ್ಯದ್ ಆರಿಫ್, ಶ್ರೀಮತಿ ಪ್ರೀತಾ.ಟಿ.ರೈ, ಉಪಪ್ರಾಂಶುಪಾಲರಾದ ಶ್ರೀಮತಿ ನೇತ್ರಾವತಿ ಮತ್ತು ಇತರರು ಉಪಸ್ಥಿತರಿದ್ದರು.

## ಶಿವಕುಮಾರ ಸ್ವಾಮೀಜಿ ಶ್ರದ್ಧಾಂಜಲಿಗೆ ಅಕ್ಕಿ ಸಮರ್ಪಿಸಲು ಇಂದು ಸಭೆ



ಸಿರಿಗೆರೆ ತರಳಬಾಳು ಬೃಹನ್ಮಠದ ಹಿರಿಯ ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮೀಜಿಗಳವರ 31ನೇ ವರ್ಷದ ಶ್ರದ್ಧಾಂಜಲಿ ಕಾರ್ಯಕ್ರಮವು ಇದೇ ದಿನಾಂಕ 20 ರಿಂದ 24 ರವರೆಗೆ 5 ದಿನಗಳ ಕಾಲ ಸಿರಿಗೆರೆಯಲ್ಲಿ ನಡೆಯಲಿದೆ.

ಈ ಕಾರ್ಯಕ್ರಮದ ದಾಸೋಹಕ್ಕೆ ಪ್ರತಿ ವರ್ಷದಂತೆ ಈ ವರ್ಷವೂ ದಾವಣಗೆರೆ ತಾಲ್ಲೂಕಿನ ಭಕ್ತರು ಅಕ್ಕಿಯನ್ನು ಸಮರ್ಪಿಸಲಿದ್ದಾರೆ. ಈ ಸಂಬಂಧ ಇಂದು ಸಂಜೆ 5 ಗಂಟೆಗೆ ಹದಡಿ ರಸ್ತೆಯಲ್ಲಿರುವ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪದಲ್ಲಿ ದಾವಣಗೆರೆ ತಾ. ಸಾಧು - ಸದ್ಧರ್ಮ ಸಂಘದ ಅಧ್ಯಕ್ಷರಾದ ಹಾಲುವರ್ತಿ ಮಹೇಶ್ವರಪ್ಪ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ.

ಭಕ್ತರು ಈ ಸಭೆಯಲ್ಲಿ ಭಾಗವಿಸಿ, ಯಶಸ್ವಿಗೊಳಿಸುವಂತೆ ಕಾರ್ಯದರ್ಶಿ ಬಿ.ವಾಮದೇವಪ್ಪ ಕೋರಿದ್ದಾರೆ.

## ಕ್ಲಸ್ಟರ್ ಮಟ್ಟದ ಕಲೋತ್ಸವ



ದಾವಣಗೆರೆ, ಸೆ. 13 - ಪ್ರತಿಭಾ ಕಾರಂಜಿ - 2023 ಕ್ಲಸ್ಟರ್ ಮಟ್ಟದ ಕಲೋತ್ಸವದಲ್ಲಿ ಇಂಪೀರಿಯಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳಾದ ವರ್ಷಾಮೃತ, ಪವನ್ ಹಾಗೂ ಲಿಖಿತ್ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದು ವಿಜೇತರಾಗಿದ್ದಾರೆ. ಚೇತನಾ ವಿದ್ಯಾಸಂಸ್ಥೆಯ ಅಧ್ಯಕ್ಷರು ಕೆ.ಎನ್. ಓಂಕಾರಪ್ಪ, ಪ್ರಿನ್ಸಿಪಾಲ್ ರಮೇಶ್ ಎನ್.ವಿ. ಹಾಗೂ ಶಿಕ್ಷಕಿಯರು ಮಕ್ಕಳನ್ನು ಅಭಿನಂದಿಸಿದರು.

# ಇಷ್ಟಲಿಂಗ ಪೂಜೆಯ ಮೂಲಕ ಧರ್ಮಾಚರಣೆ ಬೆಳೆಸಿಕೊಳ್ಳಬೇಕು

**ರಾಣೇಬೆನ್ನೂರಿನ ಪೂಜಾ ಕಾರ್ಯಕ್ರಮದಲ್ಲಿ ಶ್ರೀ ವಚನಾನಂದ ಸ್ವಾಮೀಜಿ ಹಿತನುಡಿ**

ರಾಣೇಬೆನ್ನೂರು, ಸೆ.13- ಮನುಷ್ಯನ ದೇಹದಲ್ಲಿರುವ ನರಗಳನ್ನು ಜೋಡಿಸಿದರೆ ಈ ಭೂಮಂಡಲವನ್ನು ಸುತ್ತಿಬರುವಷ್ಟು ಉದ್ದವಾಗುತ್ತವೆ. ಹಾಗಾಗಿ ಮನುಷ್ಯರನ್ನು 'ನರರು' ಎಂದು ಕರೆಯುತ್ತಾರೆ. ಸಾವಿರಾರು ವರ್ಷಗಳ ಹಿಂದೆ ಮಂತ್ರೋ ಚ್ಚಾರಣೆ ಮೂಲಕ ರೋಗ ನಿವಾರಣೆ ಮಾಡಿಕೊಳ್ಳುತ್ತಿದ್ದರು. ಆಗ ಆಧುನಿಕ ರೀತಿಯಲ್ಲಿ ರೋಗ ನಿವಾರಣೆ ಮಾಡಿಕೊಳ್ಳಲು ಈಗಿನಂತಹ ವ್ಯವಸ್ಥೆ ಇರಲಿಲ್ಲ ಎಂದು ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ನುಡಿದರು.

ಜಗದ್ಗುರುಗಳು ರಾಣೇಬೆನ್ನೂರಿನಲ್ಲಿ ಇಷ್ಟಲಿಂಗ ಪೂಜೆ ನೆರವೇರಿಸಿ, ಧರ್ಮ ಸಭೆಯ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡುತ್ತಿದ್ದರು. ವಿವಿಧ ಲಿಂಗಾಯ ನಮಹ ಮಂತ್ರಗಳನ್ನು ಭಾವ ತುಂಬಿ ಪಠಿಸುತ್ತಿದ್ದರು. ಹಾಗಾಗಿ ಅಂದಿನ ಜನರು ರೋಗ ನಿವಾರಣದಂತಹ ಶಕ್ತಿಯನ್ನು ಪಡೆದುಕೊ ಳ್ಳುತ್ತಿದ್ದರು. ಈಗ ಆಧುನಿಕ ವಿಧಾನಗಳ ಬಳಕೆ ಮೂಲಕ ಪ್ರಯತ್ನಿಸಿದರೂ ರೋಗ ನಿವಾರಣೆ ಕಷ್ಟಸಾಧ್ಯವಾಗಲಿದೆ ಎಂದು ಶ್ರೀ ಗಳು ನುಡಿದರು



ಇತ್ತೀಚಿತ್ತಲಾಗಿ ಧರ್ಮಾಚರಣೆಯಲ್ಲಿ ನಿರಾಸಕ್ತಿ ಕಂಡು ಬರುತ್ತಿದ್ದು, ಇಷ್ಟಲಿಂಗ ಪೂಜೆಯಂತಹ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಧಾರ್ಮಿಕ ಭಾವನೆ ಅರಳಿಸಬೇಕು ಎಂದು, ಕುರುಬ ಗೊಲ್ಲಾಳ ಹಾಗೂ ಕುಂಬಾರ ಗುಂಡಯ್ಯ ಅವರ ಕತೆಗಳನ್ನು ಹೇಳಿ ಅವರಂತೆ ಧಾರ್ಮಿಕ ಪರಂಪರೆಯಲ್ಲಿ ಮನಸ್ಸುಗಳನ್ನು ತೊಡಗಿಸಿಕೊಳ್ಳುವಂತೆ ಶ್ರೀಗಳು ಕರೆ ನೀಡಿದರು.

ಜಿಪಂ ಮಾಜಿ ಉಪಾಧ್ಯಕ್ಷ ಎಸ್.ಎಸ್. ರಾಮಲಿಂಗಣ್ಣನವರ, ಅರಣ್ಯ ಅಭಿವೃದ್ಧಿ ಮಾಜಿ ನಿರ್ದೇಶಕಿ ಭಾರತಿ ಜಂಬಗಿ, ಸಿದ್ದು ಚಿಕ್ಕಬಿದರಿ, ಶಿವಪ್ಪ ಗುರಿಕಾರ, ನಗರಸಭೆ ಮಾಜಿ ಅಧ್ಯಕ್ಷ ಬಸವರಾಜ ಪಾಟೀಲ, ರಾಜು ಮೋಟಗಿ, ನಗರಸಭೆ ಸದಸ್ಯ ಪ್ರಕಾಶ ಪೂಜಾರ, ಸದಸ್ಯೆ ಕಸ್ತೂರಿ ಚಿಕ್ಕಬಿದರಿ, ಜಿಪಂ ಮಾಜಿ ಸದಸ್ಯೆ ಮಂಗಳಗೌರಿ ಪೂಜಾರ, ಸಿಪಿಐ ಗೌಡಪ್ಪಗೌಡ್ರ ಮತ್ತಿತರರಿದ್ದರು.

# ರಾಜ್ಯಮಟ್ಟದ ಪ್ರತಿಭೆಗಳನ್ನು ಸ್ವರ ಸಂಗಮ ಒದಗಿಸಲಿ

### ಕೊಟ್ಟೂರಿನ ಸ್ವರ ಸಂಗಮ ಹಿಂದೂಸ್ಥಾನಿ ಸಂಗೀತ ವಾರ್ಷಿಕೋತ್ಸವದಲ್ಲಿ ಶಾಸಕ ನೇಮಿರಾಜ್

ಕೊಟ್ಟೂರು, ಸೆ. 13 - ನಗರದ ಕ್ಷೇತ್ರದಲ್ಲಿ ಸಂಗೀತ ಆಸಕ್ತಿ ಇರುವ ಪ್ರತಿಭೆಗಳುಳ್ಳ ಗುರುತಿಸಿ ಅವರನ್ನು ಸ.ರಿ.ಗ.ಮ.ಪಾ. ಕನ್ನಡ ಕೋಗಿಲೆ, ಅಂತಹ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಉತ್ತೇಜನ ನೀಡುವ ಹಾಗೇ ಇಂತಹ ಸಂಗೀತಾ ಪಾಠಶಾಲೆಗಳು ಬೆಳಕಿಗೆ ಬರಬೇಕು ಎಂದು ಹಗರಿಬೊಮ್ಮನಹಳ್ಳಿ ಶಾಸಕ ನೇಮಿರಾಜ್ ನಾಯ್ಕ್ ರವರು ಹೇಳಿದರು.

ಕೊಟ್ಟೂರು ಪಟ್ಟಣದ ಬಾಲಾಜಿ ಕನ್ವೆಷನ್‌ಹಾಲ್‌ನಲ್ಲಿ ನಡೆದ ಸ್ವರ ಸಂಗಮ ಟ್ರಸ್ಟ್ ಹಾಗೂ ಸ್ವರ ಸಂಗಮ ಹಿಂದೂಸ್ಥಾನಿ ಸಂಗೀತ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ನಮ್ಮ ತಾಲ್ಲೂಕಿನಲ್ಲಿ ಅದ್ಭುತ ಪ್ರತಿಭೆಗಳಿದ್ದರೂ ಸರಿಯಾದ ವೇದಿಕೆ ಸಿಗದೇ ಬೆಳಕಿಗೆ ಬರುತ್ತಿಲ್ಲ. ತಾಲ್ಲೂಕಿನಲ್ಲಿ ಈ ತರಹದ ಸಂಗೀತ ಪಾಠಶಾಲೆ ಅತ್ಯವಶ್ಯಕವಾಗಿವೆ ಮುಂದಿನ ದಿನಗಳಲ್ಲಿ ರಾಜ್ಯ ಮಟ್ಟದಲ್ಲಿ ಪ್ರತಿನಿಧಿಸುವ ಹಾಗೆ ಉತ್ತಮ ಪ್ರತಿಭೆಗಳನ್ನು ಈ ಸ್ವರ ಸಂಗಮ ಟ್ರಸ್ಟ್ ಒದಗಿಸಲಿ ಎಂದು ಎಂ.ಎಂ.ಜೆ. ಹರ್ಷವರ್ಧನ್ ರವರು ಹೇಳಿದರು.



ನಿಸ್ವಾರ್ಥ ಸೇವೆಯಲ್ಲಿ ತೊಡಗಿರುವ ಈ ಸ್ವರ ಸಂಗೀತ ಟ್ರಸ್ಟ್ ಸಂಸ್ಥಾಪಕರು ಉತ್ತಮ ಪ್ರತಿಭೆಗಳನ್ನು ಗುರುತಿಸಿ ಸಂಗೀತ ಕ್ಷೇತ್ರದಲ್ಲಿ ಒಂದು ಹೊಸ ಅಲೆ ನಿರ್ಮಾಣ ಮಾಡುವುದರಲ್ಲಿ ಯಾವುದೇ ಅನುಮಾನವಿಲ್ಲ.

ಇಂತಹ ಕಲಾ ಟ್ರಸ್ಟ್‌ಗಳಿಗೆ ನಾವುಗಳು ಸದಾ ಪ್ರೋತ್ಸಾಹ ನೀಡುತ್ತೇವೆ ಎಂದು ಡಿ.ಎಸ್. ಎಸ್. ಜಿಲ್ಲಾಧ್ಯಕ್ಷ ಬಿ. ಮರಿಸ್ವಾಮಿ ಮಾತನಾಡಿದರು.

ಈ ಸಂದರ್ಭದಲ್ಲಿ ಟ್ರಸ್ಟ್ ಸಂಸ್ಥಾಪಕರಾದ ಶ್ವೇತಾ ಬಸವರಾಜ್, ಶೀಲಾ ಮಹದೇವ್ ಭರತನಾಟ್ಯ ಶಿಕ್ಷಕರು, ಶಾಂತ್ ಕುಮಾರಿ ಪಿಡಿಓ, ವೀರೇಶ್ ಗೌಡ , ಸಂಗೀತ ಶಾಲಾ ಮಕ್ಕಳಿಂದ ನೃತ್ಯ, ಗಾಯನ, ನೇರವರಿಸಿದರು, ಲತಾ ಬಳ್ಳಾರಿ, ಸ್ವಾಗತಿಸಿ ವಂದಿಸಿದರು, ಇನ್ನು ಮುಂತಾದವರು ಉಪಸ್ಥಿತರಿದ್ದರು.

## ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಅಮವಾಸ್ಯೆ ವಿಶೇಷ ಪೂಜೆ



ದಾವಣಗೆರೆಯ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಬೆನಕನ ಅಮಾವಾಸ್ಯೆ ಪ್ರಯುಕ್ತ ಶ್ರೀ ಮಾತಾ ಅನ್ನಪೂರ್ಣೇಶ್ವರಿ ಅಮ್ಮನವರಿಗೆ ಇಂದು 108 ಲೀ. ಹಾಲಿನ ಅಭಿಷೇಕ, ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾಮಂಗಳಾರತಿ ಮತ್ತು ತೀರ್ಥಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಅರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀಮತಿ ವಸಂತಬಾಯಿ ವಸಂತರಾವ್ ಸಬಾಳೆ ಮತ್ತು ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## ರಾಜ್ಯ, ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಆಹ್ವಾನ

ದಾವಣಗೆರೆ, ಸೆ.13- ಕಲ್ಪಶ್ರೀ ಇಂಟರ್‌ನ್ಯಾಷನಲ್ ವರ್ಲ್ಡ್ ಮ್ಯೂಸಿಕ್, ಡ್ಯಾನ್ಸ್, ಇನ್‌ಸ್ಟ್ರುಮೆಂಟ್ಸ್ ಅಕಾಡೆಮಿ ವತಿಯಿಂದ ಶ್ರೀ ಮಹಾರಾಜ ಕೃಷ್ಣದೇವರಾಯರ ಸಂಗೀತೋತ್ಸವದ ಅಂಗವಾಗಿ ಮುಂಬರುವ ಡಿಸೆಂಬರ್ ತಿಂಗಳಲ್ಲಿ ನಡೆಯುವ ಭಾವಗೀತೆ, ಜನಪದಗೀತೆ, ಚಿತ್ರಗೀತೆ, ವಚನಗಳು, ಲಾವಣಿ, ಕೋಲಾಟ, ವೀರಗಾಸೆ, ಡೋಲು ಕುಣಿತ, ಭರತ ನಾಟ್ಯ, ಶಾಸ್ತ್ರೀಯ ಸಂಗೀತ, ಕುಚುಪುಡಿ, ಮೋಹಿನಿಯಟ್ಟಂ ಸೇರಿ ಸಾಂಸ್ಕೃತಿಕ ಕಲೆಗಳ ರಾಜ್ಯ, ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಿಗೆ ಆಹ್ವಾನಿಸಲಾಗಿದೆ.

ಸ್ಪರ್ಧೆಗೆ ಭಾಗವಹಿಸುವವರು ಸೆ.15ರೊಳಗಾಗಿ ಹೆಸರು, ನೋಂದಾಯಿಸತಕ್ಕದ್ದು. ವಿವರಕ್ಕೆ 6363729546 ಗೆ ಸಂಪರ್ಕಿಸಬಹುದು ಎಂದು ಅಕಾಡೆಮಿಯ ಅಧ್ಯಕ್ಷ ಕೆ. ಅನಂತಶರ್ಮ ತಿಳಿಸಿದ್ದಾರೆ.

## ಹಳೆಪೇಟೆ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಅಲಂಕಾರ ಪೂಜೆ



ದಾವಣಗೆರೆ, ಸೆ. 12 - ಶ್ರಾವಣ ಮಾಸದ ಕೊನೆಯ ಮಂಗಳವಾರದಂದು ಹಳೇಪೇಟೆ ಶ್ರೀ ವೀರಭದ್ರಸ್ವಾಮಿಗೆ ಬೆಳಿಗ್ಗೆ ಅಭಿಷೇಕ ಮಹಾಪೂಜೆ, ವಿವಿಧ ಪುಷ್ಪಗಳಿಂದ ಶ್ರೀ ವೀರಭದ್ರಸ್ವಾಮಿಗೆ ಅಲಂಕಾರ ಮಾಡಲಾಗಿತ್ತು, ನೂರಾರು ಭಕ್ತಾದಿಗಳು ಆಗಮಿಸಿ ದರ್ಶನ ಪಡೆದುಕೊಂಡರು.

## ಐಫೋನ್ 12 ವಾಪಸ್ ಪಡೆಯಲು ಫ್ರಾನ್ಸ್ ನಿಯಂತ್ರಕರ ಆದೇಶ

ಪ್ಯಾರಿಸ್, ಸೆ. 13 – ಆಪಲ್ ಕಂಪನಿಯ ಐಫೋನ್ 12 ಮೊಬೈಲ್ ಅತಿಯಾಗಿ ಎಲೆಕ್ಟ್ರೋಮ್ಯಾಗ್ನೆಟಿಕ್ ಕಿರಣಗಳನ್ನು ಹೊರ ಹಾಕುತ್ತಿದೆ. ಇದು ಯುರೋಪ್ ಒಕ್ಕೂಟದ ಮಾನದಂಡಗಳಿಗಿಂತ ಹೆಚ್ಚಾಗಿದೆ. ಇವುಗಳ ಮಾರಾಟ ನಿಲ್ಲಿಸಬೇಕು ಎಂದು ಫ್ರಾನ್ಸ್ ನಿಯಂತ್ರಕರು ಆದೇಶಿಸಿದ್ದಾರೆ.

ಆದರೆ, ತನ್ನ ಉತ್ಪನ್ನ ನಿಯಮಗಳಿಗೆ ಅನುಗುಣವಾಗಿದೆ ಎಂದು ಆಪಲ್ ತಿಳಿಸಿದೆ.

ಎರಡು ರೀತಿಯ ಎಲೆಕ್ಟ್ರೋಮ್ಯಾಗ್ನೆಟಿಕ್ ತರಂಗಗಳ ಪರೀಕ್ಷೆ ನಡೆಸಲಾಗಿತ್ತು ಎಂದು ಫ್ರಾನ್ಸ್ ನಿಯಂತ್ರಕ ಸಂಸ್ಥೆಯಾದ ನ್ಯಾಷನಲ್ ಫ್ರಿಕ್ವೆನ್ಸ್ ಏಜೆನ್ಸಿ ತಿಳಿಸಿದೆ.

2020ರಲ್ಲಿ ಐಫೋನ್ 12 ಬಿಡುಗಡೆಯಾಗಿತ್ತು. ಈಗ ಏಕೆ ಅದರ ಪರೀಕ್ಷೆ ನಡೆಸಲಾಗಿದೆ ಹಾಗೂ ನಿರ್ದಿಷ್ಟ ಮಾಡೆಲ್ ಅನ್ನೇ ಏಕೆ ಪರೀಕ್ಷಿಸಲಾಗಿದೆ ಎಂಬುದು ಸ್ಪಷ್ಟವಾಗಿಲ್ಲ.

## ಉಗ್ರರೊಂದಿಗೆ ಗುಂಡಿನ ಚಕಮಕಿ ಕರ್ನಲ್ ಸೇರಿ ನಾಲ್ವರು ಹುತಾತ್ಮ

ಶ್ರೀನಗರ, ಸೆ. 13 – ಜಮ್ಮು ಮತ್ತು ಕಾಶ್ಮೀರದ ಕೊಕೊರೆನಾಗ್ ಪ್ರದೇಶದಲ್ಲಿ ಉಗ್ರರ ಜೊತೆ ನಡೆಸಲಾದ ಗುಂಡಿನ ಚಕಮಕಿಯಲ್ಲಿ ಬೆಟಾಲಿಯನ್ ನಿರ್ವಹಿಸುತ್ತಿದ್ದ ಕರ್ನಲ್, ಮೇಜರ್, ಡಿ.ವೈ.ಎಸ್.ಪಿ. ಹಾಗೂ ಸೈನಿಕರೊಬ್ಬರು ಹುತಾತ್ಮರಾಗಿದ್ದಾರೆ.

19 ರಾಷ್ಟ್ರೀಯ ರೈಫಲ್‌ನ ಕಮಾಂಡಿಂಗ್ ಆಫೀಸರ್ ಕರ್ನಲ್ ಮನ್‌ಪ್ರೀತ್ ಸಿಂಗ್, ಮೇಜರ್ ಆಶಿಶ್ ಧೊನಾಕ್ ಹಾಗೂ ಡಿವೈಎಸ್ಪಿ ಹುಮಾಯೂನ್ ಭಟ್ ಅವರು ಗುಂಡಿನ ಚಕಮಕಿಯಲ್ಲಿ ತೀವ್ರವಾಗಿ ಗಾಯಗೊಂಡಿದ್ದರು. ಚಿಕಿತ್ಸೆಫಲಕಾರಿಯಾಗದೇ ಅವರು ಸಾವನ್ನಪ್ಪಿದ್ದಾರೆ. ಸೈನಿಕರೊಬ್ಬರು ಮೃತಪಟ್ಟಿದ್ದರೆ, ಇನ್ನೊಬ್ಬ ಸೈನಿಕ ನಾಪತ್ತೆಯಾಗಿದ್ದಾರೆ. ನಾಪತ್ತೆಯಾಗಿರುವ ಸೈನಿಕ ತೀವ್ರವಾಗಿ ಗಾಯಗೊಂಡಿರಬಹುದು ಎಂದು ಶಂಕಿಸಲಾಗಿದೆ. ಪಾಕಿಸ್ತಾನದ ಲಷ್ಕರ್ ಎ ತೊಯ್ಬಾ ಸಂಘಟನೆಯ ಭಾಗ ಎಂದು ಹೇಳಲಾದ ರೆಸಿಸ್ಟೆನ್ಸ್ ಫ್ರಂಟ್ ಎಂಬ ನಿಷೇಧಿತ ಸಂಘಟನೆ ದಾಳಿಯ ಹೊಣೆ ಹೊತ್ತುಕೊಂಡಿದೆ.

## ನಗರದಲ್ಲಿ ನಾಳೆ ಸರ್ ಎಂ.ವಿ. ಫೌಂಡೇಷನ್ ದಿನ

ದಾವಣಗೆರೆ, ಸೆ. 13- ನಗರದ ಸರ್ ಎಂ.ವಿ. ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ವತಿಯಿಂದ ಸರ್ ಎಂ.ವಿ. ಫೌಂಡೇಷನ್ ದಿನವನ್ನು ಇದೇ ದಿನಾಂಕ 15ರ ಮಧ್ಯಾಹ್ನ 12.30ಕ್ಕೆ ನಡೆಸಲಾಗುವುದು. ಸರ್ ಎಂ.ವಿ. ಕಾಲೇಜಿನ ಹೊಸ ಕಟ್ಟಡದ ಆವರಣದಲ್ಲಿ ನಡೆಯುವ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಶ್ರೀ ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಹೃದಯರೋಗ ತಜ್ಞ ಡಾ. ಸಿ.ಎಂ. ನಾಗೇಶ್ ಅವರು ವಹಿಸಲಿದ್ದು, ವಿಶೇಷ ಆಹ್ವಾನಿತರಾಗಿ ವಾಣಿಜ್ಯ ತೆರಿಗೆಗಳ ಉಪ ಆಯುಕ್ತ ಶ್ರೀ ಪರಮೇಶ್ವರಗೌಡ ಅವರು ಆಗಮಿಸಲಿದ್ದಾರೆ.

## ಉದ್ಯೋಗ ಶಿಬಿರ

ದಾವಣಗೆರೆ, ಸೆ. 13 - ತೋಳಹುಣಸೆ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಹಳೇ ತೋಳಹುಣಸೆಯಲ್ಲಿ ಗ್ರಾಮೀಣ ಮಟ್ಟದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಮೊಬೈಲ್ ರಿಪೇರಿ, ಮೋಟಾರ್ ವೈಂಡಿಂಗ್ ತರಬೇತಿ, ಫೋಟೋಗ್ರಫಿ, ವಿಡಿಯೋಗ್ರಫಿ ತರಬೇತಿಗೆ ಸಂದರ್ಶನ ಏರ್ಪಡಿಸಲಾಗಿದೆ. ಇದೇ ದಿನಾಂಕ 15ರ ಒಳಗಾಗಿ ಹೆಸರು ನೋಂದಾಯಿಸಬಹುದು. ವಿವರಕ್ಕೆ ಸಂಪರ್ಕಿಸಿ : 79751 39332, 7019980484, 9964 111314, 9538395817.


**ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್**

ನಂ. 75/1, ತುಳಸಿ ಕಾಂಪ್ಲೆಕ್ಸ್, 1ನೇ ಮಹಡಿ, ವಸಂತ ರಸ್ತೆ, ದಾವಣಗೆರೆ-1

ರಿ.ನಂ.ಎ.ಆರ್. 31, ಆರ್.ಜಿ.ಎನ್. 23240/97-98 ತಾ. 1.7.1997

ದಿನಾಂಕ : 02.09.2023

**ಪ್ರತಿಭಾ ಪುರಸ್ಕಾರ**

ಸೊಸೈಟಿಯು 2022-23ನೇ ಸಾಲಿಗೆ ತನ್ನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿದ್ದು, 2022-23ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ, ಪಿಯುಸಿಯಲ್ಲಿ ಶೇ. 85ಕ್ಕಿಂತ ಹೆಚ್ಚು ಅಂಕ ಪಡೆದು ತೇರ್ಗಡೆಯಾದ ಅರ್ಹ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಆಡಳಿತ ಮಂಡಳಿ ತೀರ್ಮಾನಿಸಿದೆ.

ಆದ್ದರಿಂದ ದಿನಾಂಕ : 19.09.2023ರೊಳಗೆ (ಅರ್ಹ ಸದಸ್ಯರ ಮಕ್ಕಳು) ವಿದ್ಯಾರ್ಥಿಗಳ ಅಂಕಪಟ್ಟಿ, ಆಧಾರ್ ಕಾರ್ಡ್, 2 ಪಾಸ್‌ಪೋರ್ಟ್ ಸೈಜ್ ಫೋಟೋ ಮತ್ತು ಪೋಷಕರ ಸಂಘದ ಸದಸ್ಯತ್ವದ ಗುರುತಿನ ಚೀಟಿಯನ್ನು ಮುಖ್ಯ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಆಯ್ಕೆಯಾದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ದಿನಾಂಕ : 22.09.2023 ರಂದು ಶ್ರೀ ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲೆ, ಗಡಿಯಾರ ಕಂಬದ ಹತ್ತಿರ, ದಾವಣಗೆರೆ. ಇಲ್ಲಿ ನಡೆಯುವ ಸಂಘದ 26ನೇ ವಾರ್ಷಿಕ ಮಹಾಸಭೆಯಲ್ಲಿ ಸನ್ಮಾನಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಮೊ.ನಂ. 95908 07050, ದೂರವಾಣಿ ಸಂಖ್ಯೆ 08192 271472ಗೆ ಸಂಪರ್ಕಿಸಿ.

ಸಹಿ/- ಆಡಳಿತ ಮಂಡಳಿ, ವಿಶ್ವಕರ್ಮ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ.,




**ಭಾವನಾ ಸಹಕಾರ ಸಂಘ ನಿಯಮಿತ (ರಿ)**

ಬಿ.ಕೆ. ಹಾಸ್ಟೆಲ್ ಕಟ್ಟಡ, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ-2

**8 ನೇ ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ**

ಮೇಲ್ಕಂಡ ಸಹಕಾರ ಸಂಘದ
**2022-23ನೇ ಸಾಲಿನ 8ನೇ ವಾರ್ಷಿಕ ಮಹಾಸಭೆಯನ್ನು**
**ದಿನಾಂಕ 16.09.2023ನೇ ಶನಿವಾರ ಬೆಳಿಗ್ಗೆ 11 ಕ್ಕೆ ಸಂಘದ ಅಧ್ಯಕ್ಷರಾದ**
**ಶ್ರೀ ಕೆ.ಬಿ. ಶಂಕರನಾರಾಯಣ**
ಅವರ ಅಧ್ಯಕ್ಷತೆಯಲ್ಲಿ ನಗರದ ಪ್ರವಾಸಿ ಮಂದಿರದ ರಸ್ತೆಯಲ್ಲಿರುವ
**ರೋಟರಿ ಬಾಲಭವನದಲ್ಲಿ** ಏರ್ಪಡಿಸಲಾಗಿದೆ.
ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.
– **ಆಡಳಿತ ಮಂಡಳಿ**





**ಕಾರ್ತಿಕ್ ಮಹಿಳಾ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್**

#1345/1.3 ಲೇಖನಿ ನಿಲಯ, ಮೊದಲನೇ ಮಹಡಿ, 8ನೇ ಅಡ್ಡರಸ್ತೆ, ಕೆ.ಟಿ.ಜೆ. ನಗರ, ದಾವಣಗೆರೆ - 577 002.

**ಸೊಸೈಟಿಯ 2022-23ನೇ ವರ್ಷದ ವಾರ್ಷಿಕ ಮಹಾಸಭೆಯ ನೋಟಿಸ್**

ಕಾರ್ತಿಕ್ ಮಹಿಳಾ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ದಾವಣಗೆರೆಯ 2022-23ನೇ ಹಣಕಾಸು ವರ್ಷದ ವಾರ್ಷಿಕ ಮಹಾಸಭೆಯನ್ನು ದಿನಾಂಕ : 16.09.2023ರಂದು ಆಯೋಜಿಸಲಾಗಿದ್ದು, ಈ ಸಭೆಗೆ ಸೊಸೈಟಿಯ ಎಲ್ಲಾ ನಿರ್ದೇಶಕರುಗಳು, ಷೇರುದಾರರು, ಸದಸ್ಯರುಗಳು ತಪ್ಪದೇ ಹಾಜರಿರಲು ಕೋರಿದೆ.

ಸ್ಥಳ : ಶ್ರೀ ಶಕ್ತಿ ಗಣಪತಿ ದೇವಸ್ಥಾನ ಟ್ರಸ್ಟ್ ಸಭಾ ಭವನ, ಕೆಇಬಿ ಕಛೇರಿ ಆವರಣ, ವಿದ್ಯಾರ್ಥಿಭವನ ಸರ್ಕಲ್ ಹತ್ತಿರ, ದಾವಣಗೆರೆ.

ಸಮಯ : ಶನಿವಾರ ಬೆಳಿಗ್ಗೆ 10.30 ಗಂಟೆಗೆ.

ಸಹಿ/- ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿ

ಅಧ್ಯಕ್ಷರು : ಶ್ರೀಮತಿ ಗೀತಾ ಎಂ. ನಾಯ್ಕ ಉಪಾಧ್ಯಕ್ಷರು : ಶ್ರೀಮತಿ ಭಾಗ್ಯಲಕ್ಷ್ಮಿ

ನಿರ್ದೇಶಕರುಗಳು : ಶ್ರೀಮತಿ ಮಾಲಾ ಹೆಚ್.ಸಿ., ಶ್ರೀಮತಿ ಕೆ.ಆರ್. ನಾಗರತ್ನಮ್ಮ
ಶ್ರೀಮತಿ ಉಷಾ, ಶ್ರೀಮತಿ ಕಿರಣ್ ಎಂ., ಶ್ರೀಮತಿ ಅನಸೂಯಮ್ಮ ಎ.ಕೆ.,
ಶ್ರೀಮತಿ ಗೌರಿಬಾಯಿ, ಶ್ರೀಮತಿ ಸುನಂದಮ್ಮ ಆರ್., ಶ್ರೀಮತಿ ಆಶಾ ಎಸ್.,
ಶ್ರೀಮತಿ ಶಾಹಿನಾ ಬಾನು, ಶ್ರೀಮತಿ ಸುಧಾ ಬಿ.






**ಜನ್ಮ ದಿನದ ಹಾರ್ದಿಕ ಶುಭಾಶಯಗಳು**

ಇಂದು ತಮ್ಮ ಜನ್ಮ ದಿನವನ್ನು ಆಚರಿಸಿಕೊಳ್ಳುತ್ತಿರುವ
ನಮ್ಮ ಆತ್ಮೀಯ ಸ್ನೇಹಿತ ಹಾಗೂ ಯುವ ಮುಖಂಡರಾದ

**ಶ್ರೀ ಅರುಣ್‌ಕುಮಾರ್ ಕೆ.**

**ಅವರಿಗೆ** ಭಗವಂತನು ಚಿರಕಾಲ
ಸುಖ-ಸಂತೋಷ, ನೆಮ್ಮದಿ, ಒಳ್ಳೆಯ ಆರೋಗ್ಯ
ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇವೆ...

**ಅರುಣ್‌ಕುಮಾರ್ ಕೆ. ಅಭಿಮಾನಿಗಳ ಬಳಗ**
**ಪತ್ರಿಕೆ ವಿತರಕರ ಕ್ಷೇಮಾಭಿವೃದ್ಧಿ ಸಂಘ (ರಿ.), ದಾವಣಗೆರೆ.**


**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಸಮಸ್ತ ನಾಗಕರಿಗೆ ತಿಳಿಯಪಡಿಸುವುದೇನೆಂದರೆ ದಿವ್ಯಾ. ಎಮ್ ಕೋಂ. ಮಂಜಪ್ಪ, ಬಿ, ಇವರು (ವಾದಿಗಳು) ಮುಖ್ಯ ಕಾರ್ಯಕಾರಿ ನಿರ್ವಾಹಕ ಕರಾವಳಿ ಸೌಹಾರ್ದ ಕ್ರೆಡಿಟ್ ಕೋ ಆಪ್‌ರೇಟಿವ್ ಲಿಮಿಟೆಡ್., ಇವರುಗಳು (ಪ್ರತಿವಾದಿಗಳು) ಇವರ ವಿರುದ್ಧ ದಾವಣಗೆರೆ ನಗರದ, ಮನೆ ನಂ. 832, 1ನೇ ಹಂತ, ಎಸ್.ಪಿ.ಎಸ್. ನಗರ, 20x30 ರಲ್ಲಿರುವ ಮನೆ ಹಾಗೂ ಇದರ ಚಕ್ಕುಬಂದಿ ಪೂರ್ವಕ್ಕೆ : ಮನೆ ನಂ. 837, ಪಶ್ಚಿಮಕ್ಕೆ : ರಸ್ತೆ, ಉತ್ತರ : ಮನೆ ನಂ. 831, ದಕ್ಷಿಣಕ್ಕೆ : ಮನೆ ನಂ. 833, ಇಲ್ಲಿಗೆ ಸೇರಿದ ಆಸ್ತಿ ಮೇಲೆ ಅಸಲು ದಾವೆ ಸಂಖ್ಯೆ : 503/2023 ನ್ನು ಬ್ಯಾಂಕ್ ಹರಾಜು ಪ್ರಕ್ರಿಯೆ ತಡೆ ಆಜ್ಞೆಗಾಗಿ ಮತ್ತು ಇನ್ನಿತರೆ ಪರಿಹಾರಗಳನ್ನು ಕೋರಿ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಹಾಗೂ ಜೆ.ಎಮ್.ಎಫ್.ಸಿ. ಕೋರ್ಟ್ ದಾವಣಗೆರೆ. ಇಲ್ಲಿ ಸಲ್ಲಿಸಿದ್ದು ಸದರಿ ಪ್ರಕರಣವು ಪ್ರಸ್ತುತ ಈಗ ಚಾಲ್ತಿಯಲ್ಲಿರುತ್ತದೆ. ಅಲ್ಲದೆ ಘನ ನ್ಯಾಯಾಲಯವು ಎದುರುದಾರರ ಅಂದರೆ ಪ್ರತಿವಾದಿಗಳ ಬ್ಯಾಂಕ್ ವಿರುದ್ಧ ಸದರಿ ಮೇಲಿನ ಅನುಸೂಚಿಯ ಸ್ವತ್ತುಗಳ ತುರ್ತು ನೋಟಿಸನ್ನು ಜಾರಿ ಮಾಡಿ ಆದೇಶ ಮಾಡಿರುತ್ತದೆ. ಸದರಿ ಪ್ರಕರಣದಲ್ಲಿ ವಾದಿಯು ಬ್ಯಾಂಕ್ ವಿರುದ್ಧ ತಡೆಯಾಜ್ಞೆ ಕೋರಿರುತ್ತಾರೆ ಸದರಿ ದಾವೆಯು ಮುಂದಿನ ಮುದ್ದತ್ತು ದಿನಾಂಕ : 20.09.2023 ರಂದು ನಿಗದಿಯಾಗಿರುತ್ತದೆ. ಪ್ರಸ್ತುತ ಈಗ ಈ ದಾವೆಯಲ್ಲಿರುವ ಸ್ವತ್ತನ್ನು ಎದುರದಾರರು ಅಂದರೆ ಬ್ಯಾಂಕ್‌ನವರು ಪ್ರತಿವಾದಿಯರು ಹರಾಜು ಮಾಡುವುದು ಬೆಳಕಿಗೆ ಬಂದಿರುತ್ತದೆ. ಈ ಮೇಲಿನ ಅನೂಸೂಚಿಯ ಸ್ವತ್ತನ್ನು ಸಾರ್ವಜನಿಕರು ಖರೀದಿಸಬಾರದೆಂದು ಅಲ್ಲದೆ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಾರದೆಂದು ಹಾಗೂ ಇನ್ನಿತರೆ ಕಾನೂನಿಗೆ ವಿರೋಧವಾದ ಚಟುವಟಿಕೆಗಳನ್ನು ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಿದೆ. ಆದಾಗ್ಯೂ ಸಾರ್ವಜನಿಕರು ಅಥವಾ ಯಾರಾದರು ಹರಾಜು ಪ್ರಕ್ರಿಯೆಯಲ್ಲಿ ಹಾಗೂ ಇನ್ನಿತರೆ ಕಾನೂನಿಗೆ ವಿರೋಧವಾದ ಚಟುವಟಿಕೆಗಳಲ್ಲಿ ತೊಡಗಿದರೆ ಅವರ ವಿರುದ್ಧ ಸೂಕ್ತ ಕಾನೂನಿನ ಕ್ರಮಗಳನ್ನು ಜರುಗಿಸಲಾಗುವುದು ಎಂದು ಈ ಮೂಲಕ ತಿಳಿಯತಕ್ಕದ್ದು.

ಕಕ್ಷಿದಾರರ ಸಹಿ (ವಾದಿ)
(ದಿವ್ಯಾ.ಮ್.,)

ಸಹಿ
**ಅಜಯ್.ಸಿ. (ಎ.ಸಿ.) ವಕೀಲರು,**
ದಾವಣಗೆರೆ, ಮೊ : 97430 19896

## ಶ್ರೀ ದುರ್ಗಾಂಬಿಕಾ ದೇವಸ್ಥಾನದ ಹೊಸ ಕಟ್ಟಡಕ್ಕೆ ಭೂಮಿ ಪೂಜೆ



ದಾವಣಗೆರೆ, ಸೆ. 13 - ನಗರದ ವಸಂತ ರಸ್ತೆಯ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದ ಹೊಸ ಕಟ್ಟಡದ ಭೂಮಿ ಪೂಜೆ ಹಾಗೂ ಶಂಕು ಸ್ಥಾಪನೆ ಮಾಡುವ ಮೂಲಕ ಕಾರ್ಯಕ್ರಮವನ್ನು ಶ್ರೀ ದುರ್ಗಾಂಬಿಕಾ ದೇವಸ್ಥಾನ ಸೇವಾ ಟ್ರಸ್ಟ್‌ನ ಗೌರವ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹಾಗೂ ಅಧ್ಯಕ್ಷರಾದ ಎಸ್.ಎಸ್. ಮಲ್ಲಿಕಾರ್ಜುನ್ ಮತ್ತು ಬನ್ನಿಕಟ್ಟಿ ವಿಜಯಕುಮಾರ್ ಅವರ ಸಮ್ಮುಖದಲ್ಲಿ ನೆರವೇರಿಸಲಾಯಿತು.

ಈ ವೇಳೆಯಲ್ಲಿ, ಪಾಲಿಕೆ ಮಾಜಿ ಸದಸ್ಯ ಪಿ.ಎನ್. ಚಂದ್ರಶೇಖರ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಕಾಲಜ್ಞಾನ ಅರಿತು ಭವಿಷ್ಯ ಹೇಳಲು ಸಾಧ್ಯ : ಕೋಡಿಮಠ ಶ್ರೀ

ಹೊನ್ನಾಳಿ, ಸೆ.13- ಯಾವುದೇ ಒಂದು ಭವಿಷ್ಯವನ್ನು ಸ್ಪಷ್ಟವಾಗಿ ಹೇಳಬೇಕಾದಲ್ಲಿ ಅದಕ್ಕೆ ನಿರ್ದಿಷ್ಟ ಕಾಲಘಟ್ಟವನ್ನರಿತು ಹೇಳುವುದು ಸೂಕ್ತ ಎಂಬುದಾಗಿ ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಪ್ರಸಿದ್ದ ಸುಕ್ಷೇತ್ರ ಕೋಡಿಮಠ ಮಹಾಸಂಸ್ಥಾನದ ಡಾ. ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮೀಜಿ ಅಭಿಪ್ರಾಯಪಟ್ಟರು.

ಇಲ್ಲಿನ ದುರ್ಗಿಗುಡಿ ನಿವಾಸಿ ಶ್ರೀಮತಿ ನಾಗವೇಣಿ ಮಂಜುನಾಥ ಮಾಳಂಕಿ ಅವರ ನಿವಾಸಕ್ಕೆ ಇಂದು ಭೇಟಿ ನೀಡಿದ್ದ ಸಂದರ್ಭದಲ್ಲಿ ತಮ್ಮನ್ನು ಭೇಟಿಯಾದ ಪತ್ರಕರ್ತರು ಕೇಳಿದ ಪ್ರಶ್ನೆಗೆ ಶ್ರೀಗಳು ಪ್ರತಿಕ್ರಿಯಿಸಿದರು.

ಇಂತಿಷ್ಟು ಕಾಲಘಟ್ಟದ ಒಳಗೆ ಭವಿಷ್ಯ ಹೇಳಬೇಕಾಗುತ್ತದೆ. ಈ ಹಿಂದೆ ರಾಜ್ಯದಲ್ಲಿ ಚುನಾವಣೆ ಸಮೀಪಿಸಿದಾಗ, ನಾವು ರಾಜ್ಯದಲ್ಲಿ ಸ್ಥಿರ ಸರ್ಕಾರ ಬರುತ್ತದೆಂಬ ಹೇಳಿಕೆ ನೀಡಿದ್ದೆವು, ಅದು ಸತ್ಯವಾಗಿದೆ.

ಅದರಂತೆ ಕೇಂದ್ರದಲ್ಲಿ ಇನ್ನು ಚುನಾವಣೆ ಆರೇಳು ತಿಂಗಳು ಇದ್ದು ಅದು ಭವಿಷ್ಯ ಕಾಲದ ಮಿತಿಯಲ್ಲಿಲ್ಲ ಮತ್ತು ಹೇಳಿಕೆಯು ದೇಶದ ಆಡಳಿತ ವ್ಯವಸ್ಥೆಯ ಮೇಲೆ ಪರಿಣಾಮ ಬೀರಲಿದೆ ಎಂದು ಸೂಚ್ಯವಾಗಿ ಹೇಳಿದರು.



ಆಳುವ ಸರ್ಕಾರಗಳು ಏನೇ ಯೋಜನೆಗಳನ್ನು ಜಾರಿಗೆ ತಂದರೂ ತೊಂದರೆ ಇಲ್ಲ. ಕಾರಣ ನಮ್ಮ ಕರ್ನಾಟಕ ಪ್ರಾಕೃತಿಕವಾಗಿ ಎಲ್ಲಾ ರೀತಿಯಲ್ಲಿ ಸಮೃದ್ದವಾಗಿದ್ದು, ಅಭಿವೃದ್ಧಿಗೆ ಪೂರಕವಾದ ನೆಲ, ಜಲ, ಪರಿಸರ ಸೇರಿದಂತೆ ಅನೇಕ ರೀತಿಯ ಸಂಪತ್ತಿದ್ದು, ಇದನ್ನು ಸಮರ್ಪಕವಾಗಿ ಬಳಸಿಕೊಂಡಾಗ ಯಾವುದೇ ತೊಂದರೆ ಆಗದು ಎಂದು ವಿವರಿಸಿದರು.

ರಾಜ್ಯದಲ್ಲಿ ಅಮಾವಾಸ್ಯೆ ಬಳಿಕ ಮಳೆ ಬರುತ್ತದೆ. ರೈತರು ಹಾಗೂ ಜನತೆ ಆತಂಕ ಪಡುವ ಅಗತ್ಯವಿಲ್ಲ. ಕಾರ್ತಿಕ, ಸಂಕ್ರಾಂತಿ ಸಂದರ್ಭದಲ್ಲಿ ರಾಜ್ಯದಲ್ಲಿ ಕೆಲವು ಅವಘಡಗಳು ನಡೆಯುವ ಸಂಭವಗಳಿವೆ. ಮನುಷ್ಯ ಮಾಡಿದ ತಪ್ಪುಗಳನ್ನು ಭಗವಂತ ಕ್ಷಮಿಸುತ್ತಾನೆ. ಆದರೆ ತಿಳಿದೂ ತಪ್ಪುಗಳನ್ನು ಮಾಡಿದಾಗ ಕ್ಷಮಿಸಲಾರ. ಇತ್ತೀಚಿನ ದಿನಗಳಲ್ಲಿ ಗೊತ್ತಿದ್ದೂ ಮನುಷ್ಯ ಪ್ರಕೃತಿ, ನೆಲ, ಜಲ ಇವುಗಳನ್ನು ನಿರಂತರವಾಗಿ ದುರುಪಯೋಗ ಪಡಿಸಿಕೊಳ್ಳುತ್ತಿರುವ ಕಾರಣ ಇಂದು ನಾವು ಅನೇಕ ರೀತಿಯ ಪ್ರಕೃತಿ ವಿಕೋಪಗಳನ್ನು ನೋಡುತ್ತಿದ್ದೇವೆ ಎಂದು ಹೇಳಿದರು. ಗುರುಗಳಲ್ಲಿ ಸಮಾಜಕಾರ ಹಾಗೂ ಮೋಕ್ಷಕಾರಕ ಗುಣಗಳಿವೆ. ಜಾತಿಗಳು ಮನೆಯಲ್ಲಿರಬೇಕು. ಧರ್ಮ ಹೊರಗಡೆ ಇರಬೇಕು. ಆಗ ಶಾಂತಿ ಇರುತ್ತದೆ ಎಂದು ಅಭಿಪ್ರಾಯಪಟ್ಟರು.

### ಪ್ರಶ್ನೆಗಳಿಗೆ ಶ್ರೀಗಳ ಪ್ರತಿಕ್ರಿಯೆ

**ಕೇಂದ್ರದಲ್ಲಿ ಮತ್ತೆ ಬಿಜೆಪಿ ಗೆಲುವು ಸಾಧಿಸಿ, ಮೋದಿ ಪ್ರಧಾನಿಯಾಗುವರೇ? ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಪಕ್ಷವು ಅನೇಕ ಯೋಜನೆಗಳನ್ನು ಘೋಷಣೆ ಮಾಡಿ ಜಾರಿಗೆ ಮುಂದಾಗಿದ್ದು, ರಾಜ್ಯ ಸರ್ಕಾರಕ್ಕೆ ಭವಿಷ್ಯವಿದೆಯೇ ಎಂಬ ಪತ್ರಕರ್ತರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಶ್ರೀಗಳು.**

ಕಾಲಜ್ಞಾನವೇ ಗುರುಗಳ ಸಂಪತ್ತಾಗಿದ್ದು, ಕಾಲಜ್ಞಾನದಲ್ಲಿ ಕಟ್ಟಿಗೆ ಹಾಡುತ್ತದೆ. ಕಬ್ಬಿಣವು ಓಡುತ್ತದೆ. ಅಬ್ಬಬ್ಬಾ ಗಾಳಿ ಮಾತನಾಡುತ್ತದೆ ಎಂದು ನೂರಾರು ವರ್ಷಗಳಲ್ಲಿ ಹೇಳಲಾಗಿದ್ದು, ಇದು ಸತ್ಯವಾಗಿದೆ. ಕಟ್ಟಿಗೆ ಮತ್ತು ಕಬ್ಬಿಣ ಅಂದರೆ ಇಂದು ರೈಲುಗಳು ಬಂದಿರುವ ಬಗ್ಗೆಯಾದರೆ ಗಾಳಿ ಮಾತನಾಡುತ್ತದೆ ಎಂದರೆ ಮೊಬೈಲ್ ಬಂದಿರುವುದಕ್ಕೆ ಸಾಕ್ಷಿಯಾಗಿದೆ.ಇದೆ ರೀತಿ ಇನ್ನು ಕಲ್ಲಿನ ಕೋಳಿ ಕೂಗುತ್ತದೆ ಎಂದರೆ ಇಂದು ಮೊಬೈಲ್ ಗಳಲ್ಲಿರುವ ಸಿಮ್ ಗಳಾಗಿವೆ ಎಂದು ವಿವರಿಸಿದರು.

ಯಾವುದು ಮನುಷ್ಯನಿಗೆ, ಸಮಾಜಕ್ಕೆ ಶಾಂತಿ, ನೆಮ್ಮದಿ ನೀಡುತ್ತದೆಯೋ ಅದುವೇ ಧರ್ಮವಾಗುತ್ತದೆ, ಇನ್ನು ಸನಾತನ ಧರ್ಮದ ಬಗ್ಗೆ ಹೆಚ್ಚು ಚರ್ಚೆಯಾಗುತ್ತಿರುವ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ ಈ ಬಗ್ಗೆ ಈಗಾಗಲೇ ಹುಬ್ಬಳ್ಳಿಯಲ್ಲಿ ಮಾತನಾಡಿದ್ದೇನೆ. ಪದೇ ಪದೇ ಹೇಳುವ ಅಗತ್ಯವಿಲ್ಲ ಎಂದರು.

ನಂತರ ಧರ್ಮ ಮತ್ತು ರಾಜಕಾರಣದ ಕುರಿತು ಮಾತನಾಡಿ, ನೀರಿನ ಮೇಲೆ ದೋಣಿ ಇರಬೇಕೇ ಹೊರತು ದೋಣಿಯೊಳಗೆ ನೀರು ಬಂದರೆ ಅಪಾಯ ತಪ್ಪದು ಎಂದು ಸೂಚ್ಯವಾಗಿ ಹೇಳಿದರು .

ರಾಜಕಾರಣಿಗಳಾಗಲೀ, ಗುರುಗಳಾಗಲೀ ಸಮಾಜದಲ್ಲಿ ಶಾಂತಿ ನಿರ್ಮಿಸುವಂತಹ ಹೇಳಿಕೆಗಳನ್ನು ನೀಡಬೇಕು. ಅಶಾಂತಿ ನಿರ್ಮಾಣ ಮಾಡುವಂತಹ ಹೇಳಿಕೆ ನೀಡದಿರುವಂತೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆ ಅಧಿಕಾರಿ ಕಣುಮಪ್ಪ, ರಾಜೇಶ್ವರಿ, ಮಲ್ಲೇಶ್ ಮಾಳಕ್ಕಿ, ಯುವ ಕಾಂಗ್ರೆಸ್‌ನ ಎಚ್.ಎಸ್. ರಂಜಿತಾ.ಯುವ ಮುಖಂಡ ಆನಂದ ಸೇರಿದಂತೆ, ಇತರರು ಇದ್ದರು.

# ಮಕ್ಕಳನ್ನು ಅಂಕ ಗಳಿಸುವ ಯಂತ್ರಗಳನ್ನಾಗಿಸಬೇಡಿ : ಬಾಮ

ದಾವಣಗೆರೆ, ಸೆ. 13- ದಾವಣಗೆರೆ ಉತ್ತರ ವಲಯದ ಆನೆಕೊಂಡ ವಲಯ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮವು 21 ನೇ ವಾರ್ಡ್ ಸರ್ಕಾರಿ ಪ್ರೌಢಶಾಲೆ ಬಸಾಪುರದ ಬಯಲು ರಂಗಮಂದಿರದಲ್ಲಿ ನೆರವೇರಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಹಿರಿಯ ಸಾಹಿತಿಗಳು, ಪತ್ರಕರ್ತರು, ರಂಗಕರ್ಮಿ ಬಾ.ಮ. ಬಸವರಾಜಯ್ಯ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಾಮ, ಶಿಕ್ಷಕ ವರ್ಗದವರು ವಿದ್ಯಾರ್ಥಿ ಸಮುದಾಯವನ್ನು ಕೇವಲ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸುವ ಯಂತ್ರಗಳನ್ನಾಗಿ ಮಾಡಬಾರದು. ಅವರಲ್ಲಿ ಸಾಹಿತ್ಯ, ಸಾಂಸ್ಕೃತಿಕವಾಗಿ ಆಸಕ್ತಿ ಕೆರಳಿಸುವ ಮೂಲಕ ಅವರಲ್ಲಿನ ಪ್ರತಿಭೆಯನ್ನು ಅನಾವರಣಗೊಳ್ಳುವಂತೆ ಮಾಡಬೇಕು. ಪ್ರತೀ ಶನಿವಾರಕ್ಕೊಮ್ಮೆ ಇಂತಹ ಚಟುವಟಿಕೆಗಳಿಗೆ ಶಾಲಾ-ಕಾಲೇಜುಗಳಲ್ಲಿ ಒತ್ತುಕೊಡಬೇಕು ಎಂದು ಮನವಿ ಮಾಡಿದರು.



ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಶಿವಲೀಲಾ ಕೊಟ್ರಯ್ಯ, ಎಸ್‌ಡಿಎಂಸಿ ಅಧ್ಯಕ್ಷ ವಾಮದೇವಯ್ಯ, ಶಿಕ್ಷಣ ಪ್ರೇಮಿ ಹಾಗೂ ದಾನಿ ನಾಗೇಂದ್ರಚಾರ್ ಸೇರಿದಂತೆ, ಈ ಭಾಗದ ಮುಖಂಡರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸುಮಲತಾ ವಹಿಸಿದ್ದರು. ಆನೆಕೊಂಡ ಪ್ರಾಥಮಿಕ, ಪ್ರೌಢಶಾಲೆಗಳ ಮುಖ್ಯ ಶಿಕ್ಷಕರುಗಳು, ಶಿಕ್ಷಕರು, ತೀರ್ಪುಗಾರರು ಭಾಗವಹಿಸಿದ್ದರು. ದಾವಣಗೆರೆ ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶೇರ್ ಅಲಿ ಸಮಾರಂಭದಲ್ಲಿ ಭಾಗವಹಿಸಿ, ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಪ್ರಶಸ್ತಿ ಪತ್ರ ವಿತರಿಸಿದರು.

ಶಿಕ್ಷಕಿ ಪುಷ್ಪವತಿ ಪ್ರಾರ್ಥಿಸಿದರು. ಶಿಕ್ಷಕರುಗಳಾದ ಸಿದ್ದಪ್ಪ ಸ್ವಾಗತಿಸಿದರು. ನಾಗರಾಜ್ ವಂದಿಸಿದರು. ರವೀಂದ್ರ ಮತ್ತು ಮುಬಾರಕ್ ಅಲಿ ನಿರೂಪಿಸಿದರು.

## ಶರಣ ಸಂಸ್ಕೃತಿ ಉತ್ಸವಕ್ಕೆ ಗೌರವಾಧ್ಯಕ್ಷರಾಗಿ ಅಥಣಿ ಗಚ್ಚಿನ ಮಠದ ಶ್ರೀ ಶಿವಬಸವ ಸ್ವಾಮೀಜಿ

ಚಿತ್ರದುರ್ಗ, ಸೆ. 13 - ನಗರದ ಶ್ರೀ ಮುರುಘರಾಜೇಂದ್ರ ಬೃಹನ್ಮಠದಲ್ಲಿ ನಡೆಯಲಿರುವ ಶರಣ ಸಂಸ್ಕೃತಿ ಉತ್ಸವ-2023ರ ಗೌರವಾಧ್ಯಕ್ಷರನ್ನಾಗಿ ಅಥಣಿಯ ಶ್ರೀ ಗಚ್ಚಿನ ಮಠದ ಶ್ರೀ ಶಿವಬಸವ ಸ್ವಾಮಿಗಳವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.



ಆಡಳಿತಾಧಿಕಾರಿ ಶ್ರೀಮತಿ ಬಿ.ಎಸ್. ರೇಖಾ ಹಾಗೂ ಶ್ರೀ ಬಸವಪ್ರಭು ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಶ್ರೀಮಠದಲ್ಲಿ ಬುಧವಾರ ನಡೆದ ಸಭೆಯಲ್ಲಿ ಈ ಬಾರಿಯ ಶರಣ ಸಂಸ್ಕೃತಿ ಉತ್ಸವವನ್ನು ಬರುವ ಅಕ್ಟೋಬರ್ 21 ರಿಂದ 25ರವರೆಗೆ ನಡೆಸಲು ತೀರ್ಮಾನಿಸಲಾಯಿತು. ಕಾರ್ಯಕ್ರಮದ ವಿವರಗಳನ್ನು ಮುಂದಿನ ಸಭೆಯಲ್ಲಿ ಚರ್ಚಿಸಲು ಸಭೆ ತೀರ್ಮಾನಿಸಿತು.

**ಚಿತ್ರದುರ್ಗ**

ಸಭೆಯಲ್ಲಿ ಕಾರ್ಯನಿರ್ವಹಣಾಧಿಕಾರಿ ಎಂ.ಭರತ್‌ಕುಮಾರ್, ಬ್ಯಾಡಗಿ ವಿರಕ್ತಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ತಿಳುವಳ್ಳಿಯ ಶ್ರೀ ಬಸವ ನಿರಂಜನ ಸ್ವಾಮಿಗಳು, ಶ್ರೀಮಠದ ವ್ಯವಸ್ಥಾಪಕ ಆರ್. ಲಿಂಗರಾಜ್ ಇದ್ದರು. ಈ ಸಂದರ್ಭದಲ್ಲಿ ಗೌರವಾಧ್ಯಕ್ಷರಾಗಿ ಆಯ್ಕೆಯಾದ ಶ್ರೀಗಳನ್ನು ಸನ್ಮಾನಿಸಲಾಯಿತು.

## ಶಿಬಾರದಲ್ಲಿ ಪರವು, ವಿಜೃಂಭಣೆಯ ಮೆರವಣಿಗೆ



ದಾವಣಗೆರೆ, ಸೆ. 13- ನಗರದ ಕೊಂಡಜ್ಜಿ ರಸ್ತೆಯ ಶ್ರೀ ಕ್ಷೇತ್ರ ಶಿಬಾರದ ಶ್ರೀ ಮೈಲಾರ ಲಿಂಗೇಶ್ವರ ದೇವಸ್ಥಾನದಲ್ಲಿ 37 ನೇ ವರ್ಷದ ಶ್ರಾವಣ ಮಾಸದ ಕಡೆಯ ದಿನದ ಪ್ರಯುಕ್ತ ಪರವು, ಪವಾಡ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಬೆಳಗಿನ ಜಾವ ಸ್ವಾಮಿಗೆ ಅಭಿಷೇಕ, ನಂತರ ರಾಜ ಬೀದಿಗಳಲ್ಲಿ ಮುತ್ತೈದೆಯರ ಕುಂಭ ಮೇಳ, ಕಳಸ ಆರತಿಯೊಂದಿಗೆ ವಿಜೃಂಭಣೆ ಮೆರವಣಿಗೆ ನಡೆಸಲಾಯಿತು.

ಹದಡಿ ಚಂದ್ರಗಿರಿ ಮಠದ ಶ್ರೀ ಮರುಳೀಧರ ಸ್ವಾಮೀಜಿ ಮೆರವಣಿಗೆಗೆ ಚಾಲನೆ ನೀಡಿದರು. ಟ್ರಸ್ಟ್ ಅಧ್ಯಕ್ಷ ಮಲ್ಲೇಶ್ ಖಂಡ್ರಳ್ಳಿ, ಕಾರ್ಯದರ್ಶಿ ವೀರಣ್ಣ, ಸಹ ಕಾರ್ಯದರ್ಶಿ ಗೋಪಾಲರಾವ್ ಸಾವಂತ್, ಖಜಾಂಚಿ ಬಳ್ಳಾರಿ ಜಯಣ್ಣ, ದೂಡಾ ಮಾಜಿ ಅಧ್ಯಕ್ಷ ಮಾಲತೇಶರಾವ್ ಜಾಧವ್ ಮತ್ತಿತರರು ಭಾಗವಹಿಸಿದ್ದರು.

## ಗಂಗನರಸಿ : ಇಂದು ಅಮಾವಾಸ್ಯೆ ವಿಶೇಷ ಪೂಜೆ



ಹರಿಹರ ತಾಲ್ಲೂಕು ಗಂಗನರಸಿಯ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠ, ಶ್ರೀ ಹನುಮಂತದೇವರ ಜೀರ್ಣೋದ್ಧಾರ ಸಮಿತಿಯಿಂದ ಇಂದು ಬೆನಕನ ಅಮಾವಾಸ್ಯೆ ವಿಶೇಷ ಪೂಜೆ ನಡೆಯಲಿದೆ. ಬೆಳಿಗ್ಗೆ 11 ಕ್ಕೆ ಶ್ರೀ ಗೋಣಿ ಬಸವೇಶ್ವರ, ನಾಗದೇವತಾ ಸ್ವಾಮಿಗಳಿಗೆ ವಿಶೇಷ ಪೂಜೆ, ಅಭಿಷೇಕ ಮತ್ತು ಮಹಾಮಂಗಳಾರತಿ ನಡೆಯುವುದು. ನಂತರ 11.30 ಕ್ಕೆ ಮಹಾ ಪ್ರಸಾದ ಸೇವೆಯನ್ನು ದಾವಣಗೆರೆ ವಿನೋಬನಗರದ ಸಿದ್ದೇಶ್ವರ ಎಲೆಕ್ಟ್ರಿಕಲ್ಸ್‌ನ ಡಿ. ಚಂದ್ರಪ್ಪ ಮತ್ತು ಸಹೋದರರು ಏರ್ಪಡಿಸಿದ್ದಾರೆ ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

## ನಗರದ ಶ್ರೀ ದಾನಮ್ಮ ದೇವಸ್ಥಾನದಲ್ಲಿ ಇಂದು ಅಭಿಷೇಕ



ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮದೇವಿ ದೇವಸ್ಥಾನದಲ್ಲಿ ಇಂದು ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮ ದೇವಿಗೆ ಬೆನಕನ ಅಮಾವಾಸ್ಯೆ ಪ್ರಯುಕ್ತ ಅಭಿಷೇಕ, ಅಲಂಕಾರ ಮತ್ತು ಪ್ರಸಾದ ವಿನಿಯೋಗ ನಡೆಯಲಿದೆ. ಶ್ರೀಮತಿ ಭಾರತಿ ದಿ. ಬಸವರಾಜಪ್ಪ ಮತ್ತು ಮಕ್ಕಳು, ಶ್ರೀಮತಿ ಬೇತೂರು ಲೀಲಾ ಮಲ್ಲಿಕಾರ್ಜುನಪ್ಪ ಮತ್ತು ಮಕ್ಕಳು ಶ್ರೀಮತಿ ಪವಿತ್ರ ವಿಜಯಕುಮಾರ ಮತ್ತು ಮಕ್ಕಳು, ಶ್ರೀಮಾನ್ ಎಂ.ವಿ. ಪರಮೇಶ್ವರಪ್ಪ ಮತ್ತು ಮಕ್ಕಳು, ಜ್ಯೋತಿ ಎಲೆಕ್ಟ್ರಿಕಲ್, ದಾವಣಗೆರೆ. ಇವರು ಪೂಜಾ ಸೇವಾಕರ್ತರಾಗಿದ್ದಾರೆ.

## ಉತ್ಸವಾಂಬದೇವಿ ಮಹಾಮಂಡಲಾಭಿಷೇಕ ಮುಕ್ತಾಯ



**ವಿಶೇಷ ಪೂಜೆ**

**ದಾವಣಗೆರೆ :** ವಸಂತ ರಸ್ತೆಯ ಹಾಲೇಶ್ವರ ಪ್ರಿಂಟಿಂಗ್ ಪ್ರೆಸ್ ಹಿಂಭಾಗದಲ್ಲಿರುವ ಶ್ರೀ ಉತ್ಸವಾಂಬ ದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ ದೇವಿ, ಶ್ರೀ ಮಹಾಲಕ್ಷ್ಮಿ ದೇವಿ ದೇವರುಗಳ 11ನೇ ವರ್ಷದ ಮಹಾ ಮಂಡಲಾ ಭಿಷೇಕವು 48 ದಿನಗಳ ಕಾಲ ನಡೆದು ಇಂದು ಮಂಗಳಗೊಳ್ಳಲಿದೆ. ಇಂದು ಬೆಳಗಿನ ಜಾವ ಅಮ್ಮನವರಿಗೆ ಮಹಾಪೂಜೆ ಮತ್ತು ಮಧ್ಯಾಹ್ನ 12.30 ಕ್ಕೆ ಪ್ರಸಾದ ವಿನಿಯೋಗವಿರುತ್ತದೆ ಎಂದು ಶ್ರೀ ಉತ್ಸವಾಂಬ ದೇವಿ ಭಕ್ತ ಮಂಡಳಿ ತಿಳಿಸಿದೆ.

## ಇಂದು ಅಮಾವಾಸ್ಯೆ, 19ರಂದು ಗಣಪತಿ ಹಬ್ಬ ಆಚರಣೆಗೆ ಪ್ರಾಶಸ್ತ್ಯ



ದಾವಣಗೆರೆ, ಸೆ. 13- ನಾಳೆ ಅಮಾವಾಸ್ಯೆ ಇರುತ್ತದೆ ಮತ್ತು ಇದೇ ದಿನಾಂಕ 18 ರಂದು ಸೋಮವಾರ ಮಧ್ಯಾಹ್ನ 12.42 ರವರೆಗೆ ತೃತೀಯ ತಿಥಿ ಇದ್ದು, ಅಂದು ಸ್ವರ್ಣಗೌರಿ ವ್ರತ ಆಚರಿಸಬೇಕು. ದಿನಾಂಕ 19 ರಂದು ಮಧ್ಯಾಹ್ನ 12.42 ರವರೆಗೆ ಚತುರ್ಥಿ ಇರುವುದರಿಂದ ಅಂದೇ ಗಣೇಶ ಹಬ್ಬ ಆಚರಿಸಲಿಕ್ಕೆ ಬಹು ಪ್ರಾಶಸ್ತ್ಯ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

## ವಿಪಕ್ಷ ನಾಯಕನ ನೇಮಕಕ್ಕಾಗಿ ಮಾಜಿ ಸಿಎಂ ಯಡಿಯೂರಪ್ಪ ಮನವಿ

ನವದೆಹಲಿ, ಸೆ. 13 – ಕರ್ನಾಟಕ ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕ ಹಾಗೂ ರಾಜ್ಯಾಧ್ಯಕ್ಷ ಸ್ಥಾನಗಳಿಗೆ ತ್ವರಿತ ನೇಮಕ ಮಾಡುವಂತೆ ಕೇಂದ್ರ ನಾಯಕತ್ವಕ್ಕೆ ಮನವಿ ಮಾಡಿಕೊಳ್ಳುವುದಾಗಿ ಬಿಜೆಪಿ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ನೂತನ ವಿಧಾನಸಭೆ ರಚನೆಯಾಗಿ ನಾಲ್ಕು ತಿಂಗಳಾಗಿದೆ. ಆದರೂ ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕನ ನೇಮಕವಾಗಿಲ್ಲ. ಹಾಲಿ ಅಧ್ಯಕ್ಷರಾಗಿರುವ ನಳಿನ್ ಕುಮಾರ್ ಕಟೀಲ್ ಅವರ ಅವಧಿ ಮುಗಿದಿದೆ.


**Jewellary Show Room**
**Furniture & Accessories For SAle**

Sales Counter, Gold Testing Machine, Trays, Alcons, Reavolving Chair Etc for Sale

**Shantala**

Chamarajpet, Davanagere
M: 96861 95323, 96861 95326



**ಚಿರಸ್ಮರಣೆ**




**ದಿ|| ಕೆ.ಹೆಚ್.ಸಂಜೀವಪ್ಪನವರು ಮತ್ತು**
**ದಿ|| ಶ್ರೀಮತಿ ಸರೋಜಿನಿ ಸಂಜೀವಪ್ಪನವರು**

ನೀವು ನಮ್ಮನ್ನಗಲಿ ಇಂದಿಗೆ 30 ವರ್ಷಗಳಾದವು, ಇಂದಿಗೂ ನಿಮ್ಮ ನೆನಪು ನಮಗೆ ಬೆಳಕಾಗಿ, ನಿಮ್ಮ ಪರಿಶ್ರಮ ನಮ್ಮ ಸುಖವಾಗಿ, ನಿಮ್ಮ ಆಶೀರ್ವಾದ-ಹರಕೆ ನಮ್ಮನ್ನು, ನಿಮ್ಮ ಈ ಮನೆಯನ್ನು, ಕುಟುಂಬವನ್ನು ಕಾಪಾಡುತ್ತಿದೆ ಹಾಗೂ ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

**ಮಕ್ಕಳು, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ದಾವಣಗೆರೆ.**



**ಪ್ರಥಮ ವರ್ಷದ ಪುಣ್ಯಸ್ಮರಣೆ**



ಜನನ : 12.6.1937 ನಿಧನ : 14.9.2022

**ದಿ|| ಶ್ರೀ ಕೆ.ಎಂ. ಹೊಳಿಯಪ್ಪ**

ಸಂಸ್ಥಾಪಕ ಟ್ರಸ್ಟಿಗಳು ಮತ್ತು ಉಪಾಧ್ಯಕ್ಷರು, ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ (ರಿ.)

ನೀವು ಶಿವೈಕ್ಯರಾಗಿ ಇಂದಿಗೆ ವರ್ಷವಾಯಿತು. ನಿಮ್ಮ ಪ್ರೀತಿ, ವಾತ್ಸಲ್ಯ, ಆದರ್ಶ, ಶಿಸ್ತು, ಪ್ರಾಮಾಣಿಕತೆ ನಮಗೆಲ್ಲಾ ದಾರಿದೀಪವಾಗಿದೆ. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತ್ನಿ : ಶ್ರೀಮತಿ ಕೆ.ಎಂ. ಸರೋಜಮ್ಮ
ಪುತ್ರ : ಡಾ|| ಹೆಚ್.ಬಿ. ಮೋಹನ್

**ಧನ್ವಂತರಿ ಆಯುರ್ವೇದಿಕ್ ಕ್ಲಿನಿಕ್ & ಪಂಚಕರ್ಮ ಸೆಂಟರ್**
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ-04.



ಓಂ ಶ್ರೀ ಗುರು ಬಸವಲಿಂಗಾಯ ನಮ:

**ಚಿರಸ್ಮರಣೆ**



ಜನನ : 25.04.1946

ಲಿಂಗೈಕ್ಯ : 14.09.2021

ಉಸಿರು ಹೋದರೂ ಹೆಸರು ಉಳಿಸಿದ

**ಶರಣ ಲಿಂ. ಶ್ರೀ ದೇವಿಗೆರೆ ವೀರಭದ್ರಪ್ಪನವರು**

ದೇವಿಗೆರೆ ಮನೆತನದ ಹಿರಿಯರು ಮತ್ತು ಬಸವ ತತ್ವದ ಅದಮ್ಯ ಪರಿಪಾಲಕರು
(ಮಾಲೀಕರು, ದೇವಿಗೆರೆ ಬ್ರದರ್ಸ್)

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದರೂ. ನಿಮ್ಮ ನೆನಪು ಸದಾ ಹಚ್ಚ ಹಸಿರಾಗಿದ್ದು, ನಿಮ್ಮ ಪ್ರೀತಿ - ವಾತ್ಸಲ್ಯ - ಆದರ್ಶ - ಶಿಸ್ತು - ಪ್ರಾಮಾಣಿಕತೆ ಮತ್ತು ಶ್ರಮದ ಕಾಯಕತ್ವವು ನಮಗೆಲ್ಲಾ ಆದರ್ಶವಾಗಿವೆ. ನೀವು ತೋರಿದ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ದುಃಖತಪ್ತರು :**

ಮೃತರ ತಾಯಿ : ಶ್ರೀಮತಿ ರತ್ನಮ್ಮ ದೇವಿಗೆರೆ ಶಿವರುದ್ರಪ್ಪ ಮತ್ತು ಮಕ್ಕಳು
ಮೃತರ ಧರ್ಮಪತ್ನಿ : ದೇವಿಗೆರೆ ಶ್ರೀಮತಿ ಮೀನಾಕ್ಷಮ್ಮ ವೀರಭದ್ರಪ್ಪ ಮತ್ತು ಮಕ್ಕಳು
ಸೊಸೆಯಂದಿರು, ಮೊಮ್ಮಕ್ಕಳು, ಅಳಿಯಂದಿರು, ದೇವಿಗೆರೆ ಸಹೋದರರು, ದೇವಿಗೆರೆ ವಂಶಸ್ಥರು, ಸಿಬ್ಬಂದಿ ವರ್ಗ, ದೇವಿಗೆರೆ ಬ್ರದರ್ಸ್ ದಾವಣಗೆರೆ, ಬಸವ ಬಳಗ ಸದಸ್ಯರು ಹಾಗು ಬಂಧು–ಮಿತ್ರರು.